# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮೂಲ ಪಠ್ಯ
## BASIC TEXT

### ತರಗತಿ
### STANDARD

### X

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - X (Basic Text)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾ ಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA - X BT

**Advisor**

| | |
|---|---|
| Sri. Shivashankara P. | Asst. Professor, GPM College, Manjeshwar |

**Chairman**

| | |
|---|---|
| Dr. Rathnakara Mallamoole | Professor, Government College, Kasaragod |

**Experts**

| | |
|---|---|
| Dr. Radhakrishna N. Bellur | Professor, Government College, Kasaragod |
| Dr. Shridhara N | Professor, Government College, Kasaragod |
| Sri. Ramanna D | Rtd Headmaster, GVHSS Delampady |

Participants

| | |
|---|---|
| Divyaganga P. | Headmistress, GHSS Pandi |
| Rohithakshi K.B. | HST, BEMHSS Kasaragod |
| Savithri M. | HST, SVVHSS Miyapadavu |
| Kavitha K. | HST, GVHSS Kunjathur |
| Kamalakshi S. | HST, KVSMHS Kurudapadavu |
| Raveendra N. | HST, GHSS Uppala |

**Artists**

| | |
|---|---|
| Prakash P. | Specialist Drawing Teacher, BRC Manjeshwar |
| Jayaprakash Shetty | Drawing Teacher, SATHSS Manjeshwar |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| | | | |
|---|---|---|---|
| **ಘಟಕ 1 : ಸುರಕ್ಷಾ ಸುಪಥ** | | | **7 - 39** |
| ● | ಇದು ನಗರ | ಕವನ | ಜಿ. ಎಸ್. ಶಿವರುದ್ರಪ್ಪ |
| ● | ಛಲ | ಕತೆ | ಬೇಲೂರು ರಾಮಮೂರ್ತಿ |
| ● | ಕುಪ್ಪಿಚೂರು | ನಾಟಕ | ವೆಂಕಟರಾಜ ಪುಣಿಂಚತ್ತಾಯ |
| ● | ಜಾಲತಾಣದ ಮೋಹಜಾಲಗಳು | ಲೇಖನ | ವಿಕ್ರಮ ಜೋಶಿ |
| **ಘಟಕ 2 : ಭೂಮಿಗೀತ** | | | **40 - 65** |
| ● | ಕಾಯುವ ಕರಗಳು | ಅಂಕಣ ಬರಹ | ಸುಧಾ ಆಡುಕಳ |
| ● | ಪ್ರಳಯ ಕೇರಳ | ಕವನ | ಡಾ. ಮೋಹನ ಕುಂಟಾರ್ |
| ● | ಕಟ್ಟೆ ಒಡೆದಾಗ | ಕತೆ | ಗೊರೂರು ರಾಮಸ್ವಾಮಿ ಅಯ್ಯಂಗಾರ್ |
| **ಘಟಕ 3 : ಸಹಮತ-ಸಹಪಥ** | | | **66 - 86** |
| ● | ಗೂಡು ಬಿಟ್ಟು ಹಾರಿದ ಹಕ್ಕಿ | ಕತೆ | ಸುನಂದಾ ಬೆಳಗಾಂವ್ಕರ್ |
| ● | ಬೇರುಗಳು ಅಮ್ಮನ ಹಾಗೆ | ಕವನ | ಶ್ರೀಕೃಷ್ಣಯ್ಯ ಅನಂತಪುರ |
| ● | ಮಹಿಳೆ ಮತ್ತು ಸಮಾಜಸೇವೆ | ವೈಚಾರಿಕ ಲೇಖನ | ಡಾ.ವರದಾ ಶ್ರೀನಿವಾಸ್ |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1. ಸುರಕ್ಷಾ ಸುಪಥ




ಸುರಕ್ಷಿತವಾದ ಬದುಕು ಪ್ರತಿಯೊಬ್ಬರ ಹಕ್ಕು. ಆದರೆ ಬದುಕಿನ ಸುರಕ್ಷಿತತೆಗೆ ಆತಂಕವೊಡ್ಡುವ ಹಲವಾರು ಸವಾಲುಗಳು ಸದಾ ಅಸುರಕ್ಷಿತತೆಯ ಭೀತಿಗೆ ನಮ್ಮನ್ನು ಒಡ್ಡುತ್ತವೆ. ಬದಲಾದ ಕಾಲಕ್ಕನುಸರಿಸಿ, ಬದುಕಿನ ರೀತಿಗಳಿಗನುಗುಣವಾಗಿ ಎದುರಿಸ ಬೇಕಾದ ಸಮಸ್ಯೆಗಳ ಸ್ವರೂಪವು ಬದಲಾಗುತ್ತವೆ. ಈ ಕುರಿತ ಅರಿವು ಮತ್ತು ಜಾಗೃತಿ ನೀಡುವ ಉದ್ದೇಶದಿಂದ 'ಸುರಕ್ಷಾ-ಸುಪಥ' ಎಂಬ ಘಟಕ ರೂಪಿತವಾಗಿದೆ. ಒಟ್ಟು ನಾಲ್ಕು ಪಾಠಗಳು ಈ ಘಟಕದಲ್ಲಿದ್ದು ಸುರಕ್ಷಿತ ಬದುಕಿಗೆ ಸವಾಲೊಡ್ಡುವ ವಿಚಾರಗಳನ್ನು ಬಿಂಬಿಸುವ ಚಿತ್ರಪುಂಜ (ಕೊಲಾಶ್) ಘಟಕಕ್ಕೆ ಪ್ರವೇಶಿಕೆಯನ್ನು ನೀಡುತ್ತದೆ. ಸುರಕ್ಷಿತವಾದ ರಸ್ತೆ ಪ್ರಯಾಣದ ಜೊತೆಗೆ ಬದುಕಿನ ಪಯಣವೂ ಅಂತರ್ಧ್ವನಿಯಾಗಿರುವ ರಾಷ್ಟ್ರಕವಿ ಜಿ.ಎಸ್.ಎಸ್. ರವರ 'ಇದು ನಗರ' ಕವನ ಈ ಘಟಕದ ಮೊದಲ ಪಾಠವಾಗಿದೆ. ಮಕ್ಕಳ ಬಾಲ್ಯವನ್ನು ಕಸಿಯುವ, ಅವರ ವಿದ್ಯಾಭ್ಯಾಸದ ಹಕ್ಕನ್ನು ಇಲ್ಲವಾಗಿಸುವ ಬಾಲಕಾರ್ಮಿಕತನದ ಸಮಸ್ಯೆಗೆ ಸಿಲುಕಿ ಬದುಕು ಅತಂತ್ರವಾದ ಹುಡುಗನೊಬ್ಬ, ಸವಾಲನ್ನು ಸಮರ್ಥವಾಗಿ ಎದುರಿಸಿ, ಛಲದಿಂದ ತನ್ನ ಬದುಕನ್ನು ಸುಂದರ ಹಾಗೂ ಸಫಲವನ್ನಾಗಿಸಲು ಶ್ರಮಿಸುವ ಬೇಲೂರು ರಾಮಮೂರ್ತಿಯವರ ಕತೆ 'ಛಲ' ವ್ಯಕ್ತಿ ಸುರಕ್ಷೆಯ ಕುರಿತು ತಿಳಿಸುತ್ತದೆ. ಮಾದಕ ದ್ರವ್ಯದ ದುಷ್ಪರಿಣಾಮದ ಕುರಿತು ಮತ್ತು ಸಾರ್ವಜನಿಕ ಸೊತ್ತುಗಳ ರಕ್ಷಣೆಯ ಕುರಿತು ಜಾಗೃತಿ ಮೂಡಿಸಲು ವೆಂಕಟರಾಜ ಪುಣಿಂಚತ್ತಾಯರು ಬರೆದ 'ಕುಪ್ಪಿಚೂರು' ನಾಟಕವನ್ನು ಕೊಡಲಾಗಿದೆ. ಪ್ರಸ್ತುತ ಜಗತ್ತು ಅಂತರ್ಜಾಲದಲ್ಲಿ ಸಿಲುಕಿ ಬವಣೆಗೊಳಗಾಗುವ, ಶೋಷಿಸಲ್ಪಡುವ ಸೈಬರ್ ವಂಚನೆಗೊಳಗಾಗುವ ಜನಸಾಮಾನ್ಯರ ಸಂಖ್ಯೆ ಅಷ್ಟಿಷ್ಟಲ್ಲ. ವಿಕ್ರಮ ಜೋಶಿಯವರ 'ಜಾಲತಾಣದ ಮೋಹಜಾಲಗಳು' ಎಂಬ ಲೇಖನವು ಮಾಧ್ಯಮ ಸುರಕ್ಷತೆಯ ಕುರಿತು ಅರಿವು ಮತ್ತು ಜಾಗೃತಿ ಮೂಡಿಸುತ್ತದೆ. ಒಟ್ಟಂದದಲ್ಲಿ 'ಸುರಕ್ಷಾ-ಸುಪಥ' ಘಟಕದಲ್ಲಿ ರಸ್ತೆ ಸುರಕ್ಷೆ, ವ್ಯಕ್ತಿ ಸುರಕ್ಷೆ, ಸಮಾಜ ಸುರಕ್ಷೆ ಹಾಗೂ ಮಾಧ್ಯಮ ಸುರಕ್ಷೆ ಎಂಬ ಸುರಕ್ಷಿತವಾದ ಬದುಕಿನ ಚತುರಾನನಗಳನ್ನು ಬಿಂಬಿಸಲಾಗಿದೆ.




- ಮೇಲೆ ನೀಡಲಾದ ಚಿತ್ರಪುಂಜವನ್ನು ಗಮನಿಸಿ, ಅದರ ಕುರಿತಾದ ನಿಮ್ಮ ಅಭಿಪ್ರಾಯವನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

# ಇದು ನಗರ

**ಜಿ.ಎಸ್. ಶಿವರುದ್ರಪ್ಪ**

ಕಾಲುದಾರಿಯ ಮೇಲೆ ಕಣ್ಣಿಟ್ಟು ನಡೆಯಣ್ಣ
ಎಲ್ಲೆಂದರಲ್ಲಿ ನೀ ದಾಟಬೇಡ;
ದಾರಿಯ ತುಂಬ ನಿಂತ ಹಲಗೆಯ ಮಾತ
ಅರಿತು ನಡೆ,ನಿನಗೆ ಕ್ಷೇಮ.



ಚೌಕ ಚೌಕದ ನಡುವೆ ಖಾಕಿಬಟ್ಟೆಯ ಬೆರಳ
ಸನ್ನೆಯಲಿ ಬಿಡು ನಿನ್ನ ವಾಹನಗಳ;
ಕೆಂಪು - ಹಸುರಿನ ಮುಖದ ದೀಪಗಳ ಕಣ್ಣರಿತು
ಮುಂದೆ ನಡೆ, ಬೇಡ ಚಪಲ.

ನುಗ್ಗದಿರು ಮಂದಿಯಲಿ; ಏನಾದರೂ ನಿನ್ನ
ಜೇಬು ಜೋಪಾನ!
ಹೋಗುತ್ತಲೇ ಇರಬೇಕು ಈ ಹೊಳೆಯಲ್ಲಿ,
ನಿಂತರೂ ದಡಹಿಡಿದು ಏರು ಸೋಪಾನ.

ಅಲ್ಲಲ್ಲಿ 'ಕ್ಯೂ'ನಿಂತು ಬಸ್ಸನು ಹತ್ತು; ಒತ್ತದಿರು
ನಿನಗಿಂತ ಮೊದಲೆ ಬಂದವರ.
ಬಸ್ಸಿನೊಳಗೊ ನೀನು ನಿಂತರೂ ಏನಂತೆ
ಎಷ್ಟು ಹೊತ್ತಿನ ಪಯಣ, ಏನಾತುರ?

ಇದು ನಗರ; ಸಾವಿರ ದಾರಿ ಸಾವಿರ ಬೆಳಕು
ತೊಡರುವುದು ಕಾಲಿಗೆ.
ನೂರಾರು ವಾಹನದ ಹೆಜ್ಜೆಸದ್ದಿನ ಜೊತೆಗೆ
ನೀ ಬರುವೆ ಮನೆಗೆ
ಅಲ್ಲಿಯ ತನಕ ಕಾತರವೆ ನನಗೆ.

## ಅಮ್ಮಾ ನೀನು ಹೇಳಿದ ಹಾಗೆ

ಅಮ್ಮಾ ನೀನು ಹೇಳಿದ ಹಾಗೆ
ರಸ್ತೆ ನಿಯಮಗಳ ಪಾಲಿಸುವೆ
ಪಾಟಿ ಪುಸ್ತಕ ಹೆಗಲಿಗೆ ಏರಿಸಿ
ರಸ್ತೆಯ ಬಲ ಬದಿ ನಡೆಯುವೆ

ಅಮ್ಮಾ ನೀನು ಹೇಳಿದ ಹಾಗೆ
ಕೆಂಪು ದೀಪಕೆ ನಿಲ್ಲುವೆನು
ಕಾರು ಲಾರಿಗೆ ಅಡ್ಡ ಓಡದೆ
ಹಸಿರು ದೀಪಕೆ ಕಾಯುವೆನು

ಅಮ್ಮಾ ನೀನು ಹೇಳಿದ ಹಾಗೆ
ರಸ್ತೆಯಲ್ಲಿ ಆಟಗಳ ಆಡೋಲ್ಲ
ಚೆಂಡು ಬುಗುರಿ ಗೋಲಿ ಕ್ರಿಕೆಟ್ಗೆ
ರಸ್ತೆಯು ಆಟದ ಮೈದಾನವಲ್ಲ.

ಅಮ್ಮಾ ನಾನು ನೋಡಿದ ಹಾಗೆ
ಬಾಗಿಲಲಿ ಸದಾ ನೀ ಕಾದಿರುವೆ
ತಾಯಿ ಪ್ರೀತಿಗೆ ಈ ನಾಡ ಸೇವೆಗೆ
'ಸುರಕ್ಷತೆ' ಹೂ ಬಳ್ಳಿ ನಾ ಬೆಳೆವೆ.

**ಮುಗಳವಳ್ಳಿ ಕೇಶವಧರಣಿ**

### ಕವಿ ಪರಿಚಯ



ಜಿ.ಎಸ್. ಶಿವರುದ್ರಪ್ಪನವರು ೧೯೨೬ ಫೆಬ್ರವರಿ ೭ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. 'ಸೌಂದರ್ಯ ಸಮೀಕ್ಷೆ' ಎಂಬ ಮಹಾ ಪ್ರಬಂಧಕ್ಕೆ ೧೯೬೦ರಲ್ಲಿ ಪಿ.ಎಚ್.ಡಿ. ಪದವಿ ಪಡೆದರು. ೧೯೭೦ ರಿಂದ ೧೯೮೬ ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಮತ್ತು ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. 'ಮಾಸ್ಕೋದಲ್ಲಿ ೨೨ ದಿನ' ಕೃತಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ೧೯೮೨ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ, ೧೯೮೪ರಲ್ಲಿ 'ಕಾವ್ಯಾರ್ಥ ಚಿಂತನ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ೧೯೯೭ರಲ್ಲಿ ಪಂಪ ಪ್ರಶಸ್ತಿ ಗೌರವ ದೊರಕಿದೆ. ಜಿ.ಎಸ್.ಎಸ್. ಅವರು ಒಂದು ಅವಧಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದರು. ೧೯೯೨ರಲ್ಲಿ ದಾವಣಗೆರೆಯಲ್ಲಿ ನಡೆದ ೬೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದಾರೆ.

ಸಾಮಗಾನ, ಚೆಲುವು-ಒಲವು, ದೇವಶಿಲ್ಪ, ತೀರ್ಥ ವಾಣಿ, ಕಾರ್ತಿಕ, ದೀಪದ ಹೆಜ್ಜೆ, ಕನ್ನಡಿಗ, ಇಂಗ್ಲೆಂಡಿನಲ್ಲಿ ಚತುರ್ಮಾಸ, ವಿಮರ್ಶೆಯ ಪೂರ್ವ ಪಶ್ಚಿಮ, ಪರಿಶೀಲನ, ಗತಿಬಿಂಬ, ಪ್ರತಿಕ್ರಿಯೆ, ನವೋದಯ, ಕನ್ನಡ ಸಾಹಿತ್ಯ ಸಮೀಕ್ಷೆ, ಅನುಕರಣ ಇತ್ಯಾದಿ ಇವರ ಪ್ರಸಿದ್ಧ ಕೃತಿಗಳಾಗಿವೆ.

'ಇದುನಗರ' ಕವನವನ್ನು ಜಿ.ಎಸ್.ಎಸ್. ರವರ 'ಅನಾವರಣ' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಪಾದಚಾರಿಯು ಕಾಲುದಾರಿಯ ಮೇಲೆ ಹೇಗೆ ನಡೆಯಬೇಕು?
2. ರಸ್ತೆಯ ನಿಯಮಗಳನ್ನನುಸರಿಸಿಕೊಂಡು ಪ್ರಯಾಣಿಕರು ಹೇಗೆ ಮುನ್ನಡೆಯಬೇಕೆಂದು ಕವಿಯು ಆಶಿಸುತ್ತಾರೆ?
3. ಜನದಟ್ಟಣೆ ಇರುವಲ್ಲಿ ನಾವು ಹೇಗೆ ನಡೆಯಬೇಕು?
4. ಬಸ್ಸಿನ ಆತುರದ ಪ್ರಯಾಣವನ್ನು ಕವಿ ಈ ಕವನದಲ್ಲಿ ಹೇಗೆ ತಿಳಿಸಿದ್ದಾರೆ?
5. ನಗರಕ್ಕೆ ಹೋದ ಪ್ರಯಾಣಿಕನು ಮರಳಿ ಮನೆ ಸೇರುವವರೆಗೆ ಕವಿಯು ಕಾತರ ಪಡಲು ಕಾರಣವೇನು?

## ಸಂದೇಶ ಬರೆಯಿರಿ

'ಇದು ನಗರ' ಕವನವು ನೀಡುವ ಸಂದೇಶವೇನು? ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಆಶಯ ಬರೆಯಿರಿ

'ಇದು ನಗರ' ಕವನದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ 'ಇದು ನಗರ' ಕವನದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ನುಗ್ಗದಿರು ಮಂದಿಯಲಿ; ಏನಾದರೂ ನಿನ್ನ  
ಜೇಬು ಜೋಪಾನ!  
ಹೋಗುತ್ತಲೇ ಇರಬೇಕು ಈ ಹೊಳೆಯಲ್ಲಿ,  
ನಿಂತರೂ ದಡಹಿಡಿದು ಏರು ಸೋಪಾನ.

## ಕಿರುಲೇಖನ ಬರೆಯಿರಿ

'ಇದು ನಗರ' ಕವನವು ಸುರಕ್ಷಿತವಾದ ರಸ್ತೆ ಪ್ರಯಾಣದ ಕುರಿತು ತಿಳಿಸುತ್ತದೆ. ಇದನ್ನೇ ಬದುಕಿನ ಪ್ರಯಾಣಕ್ಕೆ ಅನ್ವಯಿಸಿಕೊಂಡು ವಿಶ್ಲೇಷಿಸಿ ಕಿರುಲೇಖನ ಬರೆಯಿರಿ.

## ಹೋಲಿಸಿ ಬರೆಯಿರಿ

ಕೆಳಗೆ ನೀಡಲಾದ ಕವನವನ್ನು 'ಇದು ನಗರ' ಕವನದೊಂದಿಗೆ ಹೋಲಿಸಿ ಬರೆಯಿರಿ .

### ನಾಗರಿಕತೆಯ ಅಂಚು

ನಗರಗಳು ಬೆಳೆಯುತ್ತಿವೆ ಅಣಬೆಯಂತೆ
ತಪ್ಪು ಒಪ್ಪುಗಳು ಯಾರಿಗಿದೆ ಚಿಂತೆ?
ಮರಗಳ ಕಡಿದು, ಬಂಡೆಗಳ ಒಡೆದು,
ಕಟ್ಟುತ್ತಿದ್ದೇವೆ ನಾವು ದುಡಿದೂ ದುಡಿದು,
ನಡೆಯುತಿದೆ ಸೆಣಸಾಟ ನಿಸರ್ಗದ ಜತೆ
ಇದು ನಮ್ಮಂತ ವಿಮುಖಿಗಳ ಕಥೆ!
ಮಹಡಿಗಳೆಷ್ಟಾದರೇನು ಬೆಟ್ಟದೆತ್ತರವೆ?
ಊರು ದೊಡ್ಡದಾದರೇನು ಸಾಗರಕ್ಕೆ ಉತ್ತರವೆ?
ಎಷ್ಟು ಬೆಳೆದರೆ ಏನು ಕುಬ್ಜರಲ್ಲವೆ ನಾವು?
ಊರಕಟ್ಟುವ ಭರದಲ್ಲಿ ಗೋರಿ ಕಟ್ಟಿದೆವು!
ನಾವಿಂದು ನಿಸರ್ಗದೆದುರು ಮುಖಾಮುಖಿ,
ನಡೆಯುತ್ತಿದೆ ಬಾಣ ಬಿರುಸಿನ ಚಕಮಕಿ ,
ನಾಗರಿಕತೆಯ ಅಂಚಿನಲ್ಲಿ ಕಾಲಿಟ್ಟಿದ್ದೇವೆ ನಾವು,
ಮೇಯೋಣ ಈಗಲೇ  ಚಿಂತನೆಯ ಮೇವು.

**ಎಸ್. ಕೃಷ್ಣಮೂರ್ತಿ**

## ಸ್ಲೈಡ್ ತಯಾರಿಸಿರಿ

'ಅಮ್ಮಾ ನೀನು ಹೇಳಿದ ಹಾಗೆ' ಕವನದ ಆಧಾರದಲ್ಲಿ ರಸ್ತೆ ಸಂಚಾರ ನಿಯಮಗಳನ್ನು ಸಂಗ್ರಹಿಸಿ ಕಂಪ್ಯೂಟರ್ ಸಹಾಯದಿಂದ ಸ್ಲೈಡ್ ಗಳನ್ನು ತಯಾರಿಸಿರಿ.

* * *

# ಛಲ

**ಬೇಲೂರು ರಾಮಮೂರ್ತಿ**

ನಾನು ಆ ಹೋಟೆಲಿಗೆ ಹೋಗುತ್ತಿದ್ದದ್ದು ಎರಡು ಕಾರಣಗಳಿಗಾಗಿ. ಒಂದು, ಆ ಹೋಟೆಲಿನಲ್ಲಿ ಕಾಫಿ ರುಚಿಯಾಗಿರುತ್ತಿತ್ತು. ಎರಡು, ಮಾಣಿ ಎನ್ನುವ ಆ ಪುಟ್ಟ ಹುಡುಗ ಪಟಪಟನೆ ಉಸುರುತ್ತಿದ್ದ ತಿಂಡಿಗಳ ಹೆಸರನ್ನು ಕೇಳಲು. ನಾನು ಸಾಮಾನ್ಯವಾಗಿ ಆ ಹೋಟೆಲಿನಲ್ಲಿ ತಿಂಡಿ ತಿನ್ನುತ್ತಿರಲಿಲ್ಲ. ಆದರೂ ಆ ಮಾಣಿ ನನ್ನ ಮುಂದೆ ನಿಂತು ತಿಂಡಿಗಳ ಹೆಸರು ಹೇಳುತ್ತಿದ್ದ. ನಾನು ಬರೀ ಕಾಫಿಗೆ ಆರ್ಡರ್ ಮಾಡಿದ ಮೇಲೆ "ಏನ್ಸಾರ್ ಬರಿ ಕಾಫೀನಾ" ಅನ್ನಿದ್ದ. "ಬೆಣ್ಣೆ ಮುರುಕು ತಗೊಳ್ಳಿ ಸಾರ್, ಫ್ರೆಷ್ ಆಗಿದೆ" ಅನ್ನಿದ್ದ. ನಾನು ಆಗಾಗ ಈ ಹೋಟೆಲಿಗೆ ಹೋಗಲಾರಂಭಿಸಿದ ಮೇಲೆ ಸ್ವಲ್ಪ ಸಲಿಗೆ ವಹಿಸಿ ಮಾತಾಡ್ತಿದ್ದ.



ನಾನು ಆ ದಿನ ಹೋಟೆಲಿಗೆ ಹೋದಾಗ ಆ ಹುಡುಗ ಬಂದು ಖಾಲಿ ಮೇಜಿನ ಮೇಲೆ ಅವತ್ತಿನ ಪೇಪರ್ ಹರಡಿಕೊಂಡು ಓದುತ್ತಿದ್ದ. "ಏನೋ ಮಾಣಿ" ಅಂತ ಸಲಿಗೆಯಿಂದ ಕೇಳಿದ್ದಕ್ಕೆ "ಓ...... ನೀವಾ ಬನ್ನಿ ಸಾರ್" ಅಂದು ಕುರ್ಚಿ ಒರೆಸಿ ಕೂರಿಸಿ "ಇವತ್ತು ಬರೀ ಕಾಫಿನಾ ಅಥವಾ ತಿಂಡಿ ಏನಾದ್ರು" ಅಂದ. "ಯಾಕೋ ಹೊಟ್ಟೆ ಚುರ್ ಅನ್ತಿದೆ. ನಿಂಗ್ಯಾಕೆ ಬೇಜಾರು, ಒಂದು ಪ್ಲೇಟ್ ಖಾಲಿ, ಒಂದು ಕಾಫಿ ತಾ" ಅಂದೆ. ನಿಂತಲ್ಲಿಂದಲೇ ಸ್ಟೈಲಾಗಿ ಕಾಫಿ, ಖಾಲಿ ದೋಸೆಗೆ ಆರ್ಡರ್ ಮಾಡಿ ಕೈಲಿದ್ದ ಪುಟ್ಟ ಟವೆಲನ್ನು ಹೆಗಲ ಮೇಲೆ ಹಾಕಿಕೊಂಡು ಹೋದ. ನಾನು ಖಾಲಿ ದೋಸೆ ತಿನ್ನುವಾಗ ಸಲಿಗೆಯಿಂದ ಪಕ್ಕದಲ್ಲಿ ಕುಳಿತು "ಸಾರ್ ಒಂದು ಪ್ರಶ್ನೆ ಕೇಳ್ಲಾ" ಅಂದ. 'ಕೇಳು' ಅಂದೆ "ಅಲ್ಲ ಸಾರ್......ಈ ಅಕ್ಷರ ತುಂಗ ಯೋಜನೆ.... ಮತ್ತೆ ಒಬ್ಬರಿಗೊಬ್ಬರು ಕಲಿಸಿ ಅನ್ನೋದು ಒಂದೊಂದೇ ತಾಲೂಕನ್ನ... ಒಂದೊಂದೇ ಜಿಲ್ಲೆಯನ್ನ.. ಕ್ರಮೇಣ ಒಂದೊಂದೇ ರಾಜ್ಯವನ್ನ ಪ್ರತಿಶತ ಅಕ್ಷರಸ್ಥ ಪ್ರದೇಶ ಅಂತ ಸಾರೋ ಉದ್ದೇಶವಾದರೂ ಏನು ಸಾರ್" ಎಂದು ಕೇಳಿದ.

ನನಗೆ ಆಶ್ಚರ್ಯವಾಯಿತು. ಪರವಾಗಿಲ್ವೆ.... ಒಬ್ಬ ದೊಡ್ಡ ಮನುಷ್ಯ ಕೇಳುವಂಥ ಪ್ರಶ್ನೆ ಈ ಹುಡುಗ ಕೇಳಿದ್ದಾನಲ್ಲ ಅಂತ. "ನೋಡು ಇದು ಬಹಳ ದೊಡ್ಡ ಪ್ರಶ್ನೆ. ಒಂದು ದೇಶ ಮುಂದುವರಿಯಬೇಕಾದರೆ ಆ ದೇಶದ ಜನ ವಿದ್ಯಾವಂತರೂ ಬುದ್ಧಿವಂತರೂ ಆಗಬೇಕು. ಜೊತೆಗೆ ಒಬ್ಬ ವ್ಯಕ್ತಿ ಜೀವನದಲ್ಲಿ ಮುಂದೆ ಬರಬೇಕಾದರೂ

ವಿದ್ಯೆಯೇ ಮುಖ್ಯ. ಅದಕ್ಕೇ ಆದಷ್ಟೂ ಜನರನ್ನು ವಿದ್ಯಾವಂತರ ಗುಂಪಿಗೆ ಸೇರಿಸೋ ಪ್ರಯತ್ನ ನಡೀತಿದೆ" ಅಂತ ವಿವರಿಸಿದೆ. ಮತ್ತೆ ಆ ಹುಡುಗ "ನೀವು ಹೇಳೋದು ಸರಿ ಸಾರ್. ಆದರೆ ಜನ ಅದಕ್ಕೆ ಅವಕಾಶ ಕೊಡಬೇಕಲ್ಲ. ಜನ ಬುದ್ಧಿವಂತರಾದರೆ, ಓದಲು ಬರೆಯಲು ಕಲಿತರೆ ಆಗ ಮೋಸ ಮಾಡೋಕೆ ಸಾಧ್ಯವೇ... ಒಂದು ಕಡೆ ಮೇಲಕ್ಕೆತ್ತೋ ಪ್ರಯತ್ನ. ಆದರೆ ಇನ್ನೊಂದ್ಕಡೆ ಕೆಳಕ್ಕೆ. ನಾನು ರಾತ್ರಿ ಶಾಲೆಗೆ ಹೋಗ್ತೀನಿ ಅಂದ್ರೆ ಅಥವಾ ಇನ್ಯಾವ್ದಾದ್ರೂ ರೀತೀಲಿ ಓದು ಮುಂದುವರಿಸ್ತೀನಿ ಅಂದ್ರೆ ನಮ್ಮ ಯಜಮಾನ ಬಿಡ್ತಾನ್ಯೇ...... ಖಂಡಿತಾ ಇಲ್ಲ. ಬಾಯಿ ಮಾತಿಗೆ ಮಾಣಿ ಓದು ಯಾರು ಬೇಡಂತಾರೆ ಅಂದ್ರೂ ನಾನು ಓದದೇ ಇರೋ ಹಾಗೆ ಅದು ಇದೂ ಕೆಲಸ ಅಂಟಿಸ್ತಾನೆ ಇರ್ತಾನೆ. ಹಾವು ಸಾಯಬಾರದು, ಕೋಲು ಮುರೀಬಾರದು ಹಾಗೆ. ಒಟ್ನಲ್ಲಿ ಎಲ್ಲಾ ನಾಟಕ ಸಾರ್. ಒಬ್ಬ ಮುಂದೆ ಬರೋದನ್ನ ಇನ್ನೊಬ್ಬ ಖಂಡಿತ ಸಹಿಸೋದಿಲ್ಲ" ಅಂತ ದೀರ್ಘವಾಗಿ ಮಾತಾಡಿದ. ಅವನ ಮಾತನ್ನು ಮೆಚ್ಚಿ ಏನಾದರೂ ಹೇಳಬೇಕು ಅನ್ನೋಷ್ಟರಲ್ಲಿ ಯಜಮಾನ ಬಂದ. ಮಾಣಿ ಪೇಪರ್ ಮುಚ್ಚಿಟ್ಟು ಒಳಗೆ ಹೋದ. ಯಜಮಾನ ಬಂದವನೆ "ಏಯ್ ಮಾಣಿ ...ಒಳಗೇನು ಮಾಡ್ತಿದೀಯೋ. ಇಲ್ಲಿ ಕ್ಲೀನ್ ಮಾಡು ಬಾ, ಆ ಟೇಬಲ್ ಸರಿಯಾಗಿಡು" ಅಂತ ಏನೇನೋ ಕೆಲಸ ಹೇಳಲಾರಂಭಿಸಿದ. ನಾನು ತಿಂಡಿ ಕಾಫಿಯ ದುಡ್ಡು ಕೊಟ್ಟು ಆಚೆ ಬಂದೆ.

ಸುಮಾರು ಒಂದು ವಾರ ಕಳೆದಿರಬಹುದು. ಹೆಂಡತಿ ಹೇಳಿದ್ದ ಯಾವುದೋ ಪದಾರ್ಥಗಳನ್ನು ತರಲು ಮಾರ್ಕೆಟ್ ಕಡೆ ಹೋಗ್ತಿದ್ದೆ. ಯಾರೋ "ಸಾರ್ ಸಾರ್" ಅಂತ ಕೂಗಿದಂತಾಯ್ತು. ನೋಡಿದರೆ ಮಾಣಿ ಜನರ ನಡುವೆ ತೂರಿಕೊಂಡು ಓಡೋಡಿ ಬರ್ತಿದ್ದ. ಏದುಸಿರು ಬಿಡುತ್ತಿದ್ದವನನ್ನು ನೋಡಿ "ಏನು ಮಾಣಿ ಚೆನ್ನಾಗಿದ್ದೀಯಾ?" ಅಂತ ಕೇಳಿದೆ. "ನಾನು ಚೆನ್ನಾಗಿದೀನಿ, ನೀವು ಚೆನ್ನಾಗಿದೀರಾ... ಏನ್ಸಾರ್ ಹೋಟೆಲ್ ಕಡೆ ಬರ್ಲಿಲ್ಲ?" ಅಂತ ವಿಚಾರಿಸಿದ."ಯಜಮಾನರು ಏನೋ ಕೆಲಸ ಕೊಟ್ಟಿದ್ದಾರೆ, ಅದಕ್ಕೆ ಬಂದಿದ್ದೆ... ನಿಮ್ಮನ್ನ ನೋಡಿ ಮಾತಾಡಿಸಬೇಕು ಅನಿಸ್ತು ಅದಕ್ಕೆ ಕೂಗ್ದೆ" ಅಂದು ಜೊತೇಲಿ ಹೆಜ್ಜೆ ಹಾಕಿದ. ಅವನನ್ನು ಜೊತೇಲಿಟ್ಕೊಂಡೇ ವ್ಯಾಪಾರ ಮುಗಿಸಿದೆ. "ಬಾ ಮಾಣಿ" ಅಂದು ಅವನನ್ನು ದೊಡ್ಡ ಹೋಟೆಲಿಗೆ ಕರ್ಕೊಂಡು ಹೋದೆ. ಅಲ್ಲಿನ ವೈಭೋಗ ನೋಡಿ "ವ್ಹಾ....ಏನು ಚೆನ್ನಾಗಿದೆ ಅಲ್ವ ಸಾರ್" ಅಂದು ಸುತ್ತಮುತ್ತ ಆಸೆಯ ಕಂಗಳಿಂದ ನೋಡಿದ. ನಾನು ಅವನನ್ನು ತಮಾಷೆ ಮಾಡಲು "ಏನು ಮಾಣಿ ಇಂಥಾ ಹೋಟ್ಲಲ್ಲಿ ಕೆಲಸ ಮಾಡ್ಬೇಕು ಅನ್ಸುತ್ತಾ" ಅಂತ ಕೇಳಿದೆ. ಅದಕ್ಕೆ ಮಾಣಿ "ಇಲ್ಲ ಸಾರ್ ಇಟ್ರೆ, ಇಂಥಾ ಹೋಟೆಲು ಇಡಬೇಕು... ನೋಡ್ತಾ ಇರಿ ಸಾರ್, ಒಂದಲ್ಲ ಒಂದಿನ ಇಂಥಾ ಹೋಟೆಲಿಗೆ ಒಡೆಯನಾಗಿ ಗಲ್ಲದ ಮೇಲೆ ಸ್ಟೈಲಾಗಿ ಕೂತು ವ್ಯವಹಾರ ಮಾಡ್ತಿರ್ತೀನಿ". ಅಂದ. ಅವನ ಉತ್ಸಾಹ ಕಂಡು ಖುಷಿಯಾಯಿತು. ಬೇರರ್ ಬಂದಾಗ "ಏನು ಬೇಕು ಮಾಣಿ" ಅಂದಿದ್ದಕ್ಕೆ ಸಂಕೋಚವಿಲ್ಲದೆ "ಮಸಾಲೆ" ಅಂದ. ದೋಸೆ ಬಂದಾಗ ಖುಷಿಯಿಂದ ತಿಂದು ಕಾಫಿ ಕುಡಿದ. "ಸಾರ್ ಈಗೆಲ್ಲ ಹೋಟೆಲಿಡೋಕೂ ಬ್ಯಾಂಕಿನವರು ಸಾಲ ಕೊಡ್ತಾರಂತೆ ಹೌದಾ ಸಾರ್" ಅಂತ ಕೇಳಿದ. "ಹೌದು ಮಾಣಿ, ಬ್ಯಾಂಕಿಗೆ ಹೋಗಿ ಕೇಳಿದರೆ ಎಲ್ಲಾ ವಿವರನೂ ಕೊಡ್ತಾರೆ. ಅದರೆ ಅದಕ್ಕೆ ಮುಂಚೆ ಸ್ವಲ್ಪವಾದರೂ ನಿನ್ನ ಬಂಡವಾಳ ಇರಬೇಕು.. "ದುಡ್ಡೆಷ್ಟು ಕೂಡಿದ್ದೀಯ" ಅಂತ ಕೇಳಿದ್ದಕ್ಕೆ ತುಟಿಯೊದಿಸಿ ಏನೂ ಇಲ್ಲ ಅಂತ ಸೂಚಿಸಿದ. "ಮತ್ತೆ ಸಂಬಳ ಏನು ಮಾಡ್ತಿಯಾಂತ" ಅಂತ ಕೇಳಿದ್ದಕ್ಕೆ "ಸಂಬಳ ಅಂದ್ರೆ ನಂಗೇನೂಂತ

ಗೊತ್ತೇ ಇಲ್ಲ. ಗೊತ್ತಿರೋದು ಬರೀ ದುಡಿಯೋದೊಂದೇ" ಅಂದು ನಿರಾಸೆ ತೋರಿದ.

"ಹಾಗೇಕೆ ಮಾಣಿ" ಅಂತ ಕೇಳಿದ್ದಕ್ಕೆ "ಬನ್ನಿ ಸಾರ್ ಹೇಳ್ತೀನಿ ನನ್ನ ಕಥೆ" ಅಂತ ಅಲ್ಲಿಂದ ಎಬ್ಬಿಸಿಕೊಂಡು ಬಂದ. ಮಾಣಿ ಹೇಳಿದ ವಿವರಗಳಿಷ್ಟು.

ಮಾಣಿ ಹೆಸರು ನಾಗರಾಜ ಅಂತ. ಊರು ಮಲೆನಾಡಿನ ಒಂದು ಕುಗ್ರಾಮ. ಮನೆಯಲ್ಲಿ ಇರೋದು ತಂದೆ, ತಾಯಿ ಇಬ್ಬರು ಅಕ್ಕಂದಿರು. ಮತ್ತೆ ನಾಗರಾಜ. ಜೀವನಕ್ಕೆ ಆಧಾರ ಒಂದೆರಡೆಕರೆ ಗದ್ದೆ. ಅಕ್ಕಂದಿರ ಮದುವೆಗೆ ಅಪ್ಪ ಮೈತುಂಬಾ ಸಾಲ ಮಾಡಿದ. ಕೊನೆಗೆ ಗದ್ದೇನು ಮಾರಿದ. ಇಷ್ಟೆಲ್ಲಾ ಮಾಡಿದ್ರೂ ಸಾಲ ಮುಗಿದಿರಲಿಲ್ಲ. ಅನೇಕ ಜನರು ಬಂದು ಸಾಲ ವಸೂಲಿ ಆಗದೇ ಗಲಾಟೆ ಮಾಡುತ್ತಿದ್ದರು. ಹಾಗೆ ಮಾಡ್ತಿದ್ದ ಜನರಲ್ಲಿ ಈ ಹೋಟೆಲಿನ ಯಜಮಾನನೂ ಒಬ್ಬ. ಒಂದು ದಿನ ಗಲಾಟೆ ಮಾಡ್ತಿದ್ದೋನು ನನ್ನನ್ನು ನೋಡಿದ."ನೀವು ಸಾಲ ತೀರಿಸೋವರ್ಗು ಈ ಮಾಣೀನ ನನ್ನ ಹೋಟೆಲಿಗೆ ಕೆಲಸಕ್ಕೆ ಕಳಿಸಿ" ಅಂದ. ನಂಗೆ ಆ ಮಾತು ಕೇಳಿ ಹೆದರಿಕೆಯಾಗಿ ಅಲ್ಲಿಂದ ಓಡಿಹೋದೆ.ಆಮೇಲೆ ಅವ್ರೆಲ್ಲ ಏನು ಮಾತಾಡಿಕೊಂಡರೋ. ಆ ರಾತ್ರಿ ಅಪ್ಪ ನನ್ನ ಬಳಿ ಬಂದು "ಮರೀ, ಪಟ್ನಕ್ಕೆ ಹೋಗ್ತೀಯಾ" ಅಂತ ಕೇಳಿದರು. ಮತ್ತೆ ಅವರೇ "ಯಜಮಾನರ ಹೋಟೆಲ್ ನಲ್ಲಿ ಕೆಲಸ ಅಂತೆ. ಇಷ್ಟು ಸಂಬಳನೂ ಕೊಡ್ತಾರೆ. ಅದರಲ್ಲಿ ಅವರ ಸಾಲವೂ ತೀರುತ್ತೆ. ಮತ್ತೆ ನಮ್ಮ ಹೊಟ್ಟೆಗೂ ಒಂದಿಷ್ಟು ಆಗುತ್ತೆ. ಅಲ್ಲದೆ ನೀನೂ ಎರಡು ಹೊತ್ತು ಹೊಟ್ಟೆ ತುಂಬಾ ಊಟ ಮಾಡಬಹುದು" ಅಂದರು. ನನಗೆ ಆಗ ಏನು ತಿಳಿಯದಿದ್ದರೂ ಓದು ಬಿಡಬೇಕಲ್ಲ ಅಂತ ತುಂಬಾ ಬೇಜಾರಾಯಿತು. ದುಃಖವೂ ಆಯಿತು. ಅಮ್ಮನನ್ನು ತಬ್ಬಿ ಅತ್ತು ಬಿಟ್ಟೆ. "ಸ್ವಲ್ಪ ವರ್ಷ ಕಷ್ಟಪಡು ಆಮೇಲೆ ನೀನು ಓದು ಮುಂದುವರಿಸಬಹುದು. ಇಷ್ಟು ಚಿಕ್ಕ ವಯಸ್ಸಿಗೇ ನಿನ್ನ ಹೆಗಲಿಗೆ ಸಂಸಾರದ ಜವಾಬ್ದಾರಿ ಹಾಕ್ತಾ ಇದ್ದೀವೀಂತ ಬೇಜಾರು ಮಾಡ್ಕೋಬೇಡ.... ಗಂಡಾಗಿ ಹುಟ್ಟಿದ್ಮೇಲೆ ಇಂದಲ್ಲ ನಾಳೆ ಸಂಸಾರದ ನೊಗ ಹೊರೋದು ಅನಿವಾರ್ಯ" ಅಂದು, ಅಮ್ಮ ತಬ್ಬಿ, ಅತ್ತು, ಹರಸಿ ಕಳಿಸಿದಳು. ನಾಲ್ಕನೇ ಕ್ಲಾಸಿಗೆ ಶಾಲೆಗೆ ಶರಣು ಹೊಡೆದು ಅಪ್ಪನ ಜೊತೆ ಪಟ್ಟಣಕ್ಕೆ ಬಂದೆ. ಯಜಮಾನರು ಕೆಂಗಣ್ಣು ಬಿಟ್ಟು "ಹೇಳಿದ್ದು ಕೆಲಸ ಮಾಡ್ಕೊಂಡ್ ಹೋಗಬೇಕು. ಇಲ್ದಿದ್ರೆ ಸೊಂಟ ಮುರಿದುಬಿಡ್ತೀನಿ" ಅಂದ್ರು. ಜೀವಭಯ ಶುರುಆಯ್ತು. ಆದರೆ ಅಂಥಾ ಜೀವನಕ್ಕೆ ಹೊಂದಿಕೊಳ್ಳದೇ ಬೇರೆ ದಾರಿ ಇಲ್ಲ ಅನಿಸಿತ್ತು. ನಾನು ಅದುವರೆಗೂ ಅಮ್ಮ ಅಪ್ಪನನ್ನು ಬಿಟ್ಟಿರಲಿಲ್ಲ. ಒಬ್ಬನೇ ಮಲಗಿರಲಿಲ್ಲ. ಹೋಟೆಲಿನ ಟೇಬಲ್ ಮೇಲೆ ಒಂದು ಪಂಚೆ ಹಾಸಿ ಮಲಗ್ತಿದ್ದೆ. ಎಷ್ಟೋ ದಿನ ನಿದ್ದೆಯಿಲ್ಲದೆ ಕಳೆದಿದ್ದೀನಿ.

ಅಪ್ಪಯ್ಯ ಆರು ತಿಂಗಳಿಗೊಂದ್ಸಾರಿ ಬರ್ತಿದ್ರು ಒಂದು ದಿನ ಇದ್ದು "ಹೇಗಿದೀಯೋ.... ಅಮ್ಮ ನಿನ್ನನ್ನ ನೆನಪು ಮಾಡಿಕೊಂಡ್ಳು" ಅಂತ ಹೇಳಿ ಹೋಗ್ತಿದ್ರು. ಪಟ್ಣಕ್ಕೆ ಬಂದು ನಾಲ್ಕು ವರ್ಷಗಳಾದರೂ ನಾನು ಊರಿಗೆ ಹೋಗಿದ್ದು ಎರಡು ಅಥವಾ ಮೂರು ಸಾರಿಯೋ. ಈಗ ಒಂದು ವರ್ಷದಿಂದೀಚೆಗೆ ಅಪ್ಪನ ಮೇಲೆ ನನಗೆ ವಿಪರೀತ ಕೋಪ ಬಂದಿದೆ. ನನ್ನ ಪ್ರಕಾರ ಅಪ್ಪ ಯಜಮಾನರ ಬಳಿ ಮಾಡಿದ ಸಾಲ ತೀರಿದೆ. ಆದರೂ ನನ್ನನ್ನು ಇನ್ನೂ ಇಲ್ಲಿ ಚಾಕರಿಗೆ

ಬಿಟ್ಟಿರೋದು ಒಂದಿಷ್ಟು ಹಣದ ಆಸೆಯಿಂದ. ಅದನ್ನು ನನ್ನ ಬಳಿ ಹೇಳಲಿಲ್ಲ. ಈಗೊಂದು ವರ್ಷದ ಹಿಂದೆ ಬಂದಾಗ ಅಪ್ಪ ಯಜಮಾನರ ಬಳಿ ಮಾತಾಡ್ತಿದ್ದನ್ನ ಕೇಳಿಸಿಕೊಂಡೆ. "ಮಾಣಿಯ ಈ ತಿಂಗಳ ಸಂಬಳದೊಂದಿಗೆ ನಿಮ್ಮ ಸಾಲ ತೀರಿದೆ. ಬೇಕಿದ್ರೆ, ನೀವು ಮಾಣಿನ ಹಿಂದಕ್ಕೆ ಕರ್ಕೊಂಡು ಹೋಗಬಹುದು" ಅಂತ ಯಜಮಾನರು ಅಂದದ್ದಕ್ಕೆ ಅಪ್ಪ "ಬೇಡ, ಅವನಿಲ್ಲೇ ಇರಲಿ. ಅವನ ಸಂಬಳನ ಆರು ತಿಂಗಳಿಗೊಮ್ಮೆ ಬಂದು ನಾನೇ ತಗೊಂಡು ಹೋಗ್ತೀನಿ. ಮನೆ ಕಡೆ ಕಷ್ಟ ಇದೆ" ಅಂದಿದ್ದರು. ಇನ್ನು ಹೇಗೂ ಕಂಟಕ ಕಳೆದಿದೆಯಲ್ಲ ಯಾರಿಗೂ ಹೇಳದೇ ಕೇಳದೇ ಎಲ್ಲಿಗಾದರೂ ಹೊರಟು ಹೋಗೋಣವೇ ಅನಿಸಿತು. ಹಾಗೆ ಹೋದರೆ ಈಗ ನನಗೆ ಬರ್ತಿರೋ ಸಂಬಳ ಮೊಟಕು. ಇದನ್ನೇ ನಂಬ್ಕೊಂಡಿರೋ ಅಪ್ಪ ಅಮ್ಮ ಉಪವಾಸ ಇರಬೇಕಾಗುತ್ತೋ ಏನೋ ಅನಿಸಿ ಸುಮ್ಮನಾದೆ.

ತನ್ನ ಬದುಕಿನ ಅನೇಕ ಪುಟಗಳನ್ನು ತೆರೆದಿಟ್ಟು ನಂತರ ಮಾಣಿ ಕೇಳಿದ "ಬೇಜಾರಾಯ್ತಾ ಸಾರ್... ಏನೇನೋ ಒದರಿಬಿಟ್ಟೆ". "ಖಂಡಿತ ಇಲ್ಲ ,ಆದರೆ ಕನಿಕರ ಮೂಡ್ತಿದೆ. ಎಳೆ ವಯಸ್ಸಿನಲ್ಲಿ ಇಂಥ ಜವಾಬ್ದಾರಿ ಬಿತ್ತಲ್ಲ ಅಂತ." "ಏನ್ ಮಾಡೋದು. ಒಬ್ಬೊಬ್ಬರ ಹಣೆಬರಹ ಒಂದೊಂದು ತರಹ ಅಲ್ವೇ. ಇದೊಂದು ರೀತಿ ಒಳ್ಳೇದೇ ಸಾರ್.... ಅನುಭವ ಬಂತಾ, ಇದರಿಂದ ಮುಂದೆ ಬದುಕೋದು ಸುಲಭ. ಆದರೆ ನಾನು ಹೇಗೆ ಮುಂದೆ ಬರಬಹುದನ್ನೋದಕ್ಕೆ ನಿಮ್ಮಂತಹವರ ಬೆಂಬಲ ಬೇಕು ಸಾರ್. ಒಟ್ನಲ್ಲಿ ನನ್ನ ಕಾಲ ಮೇಲೆ ನಾನು ನಿಂತ್ಕೋಬೇಕು ಅಷ್ಟೇ ಸಾರ್" ಅಂದ. "ಆಯ್ತು ಮಾಣಿ, ಏನು ಮಾಡಬಹುದು ಅಂತ ಯೋಚನೆ ಮಾಡೋಣ" ಅಂದು ಹೆಜ್ಜೆ ಹಾಕಿದೆ.

ಇತ್ತೀಚಿನ ದಿನಗಳಲ್ಲಿ ಇಷ್ಟು ಗಂಭೀರವಾಗಿ ಬೇರಾವ ವಿಷಯವನ್ನೂ ತಲೆಗೆ ಹಚ್ಚಿಕೊಂಡಿರಲಿಲ್ಲ. ಗಹನವಾದ ವಿಷಯ ಅಲ್ಲ ಅನಿಸಿದರೂ, ಒಂದು ಎಳೆ ಜೀವ ಸಮರ್ಥವಾದ ಜೀವನ ಸಾಗಿಸಲು ಎಷ್ಟು ಹೆಣಗುತ್ತಿದೆ ಅನಿಸಿತು. 'ಬೆಳೆಯುವ ಚಿಗುರು ಮೊಳಕೆಯಲ್ಲಿ' ಅನ್ನುವಂತೆ ಈತ ಖಂಡಿತಾ ಆಶಾವಾದಿ. ಬದುಕುವ ದಾರಿ ಗೊತ್ತಿದೆ. ಆದರೆ ಕೊಟ್ಟ ಮರವನ್ನು ಹಿಡಿದೇ ಮೇಲೇರುವ ಆಸೆ ಇದೆ ಅನಿಸಿತು.

ಒಂದು ದಿನ ಅದೇ ದಾರಿಯಲ್ಲಿ ಬರುವಾಗ ಆ ಹೋಟೆಲಿಗೆ ನುಗ್ಗಿದೆ. ಬೇರೊಂದು ಹುಡುಗ ಬಂದು ಆರ್ಡರ್ ತಗೊಂಡ. ಕಾಫಿ ಕುಡಿಯುವಾಗ "ಮಾಣಿ ಎಲ್ಲೋ" ಅಂತ ಕೇಳಿದೆ. "ಗೊತ್ತಿಲ್ಲ" ಅಂದು ಹೊರಟು ಹೋದ. ಬಹುಶಃ ಏನಾದರೂ ಕೆಲಸ ಅಂತ ಹೊರಗಡೆ ಹೋಗಿರಬಹುದು ಅಂದುಕೊಂಡೆ. ಸರಿ, ಎಂದಾದರೊಂದು ದಿನ ಸಿಕ್ತಾನೆ ಅಂದ್ಕೊಂಡು ಸುಮ್ಮನಾದೆ.

ಇನ್ನೊಂದೆಂಟು ದಿನ ಕಳೆದ ನಂತರ ಅದೇ ಹೋಟೆಲಿನಲ್ಲಿ ಮಾಣಿ ಪ್ರತ್ಯಕ್ಷ. ಯಜಮಾನರು ಗಲ್ಲದಲ್ಲಿ ಕೂತಿರಲಿಲ್ಲ. ಕಾಫಿ ತಂದುಕೊಟ್ಟ ಮಾಣಿಗೆ "ಏನು ಮಾಣಿ ಊರಿಗೆ ಹೋಗಿದ್ಯಂತೆ" ಅಂತ ಕೇಳಿದೆ. "ಹೌದು ಅಪ್ಪ ತೀರಿಹೋದ" ಅಂದ ಗಂಭೀರವಾಗಿ. "ಏನಾಗಿತ್ತು ನಿಮ್ಮಪ್ಪಂಗೆ" ಅಂತ ಕೇಳಿದೆ "ಎಂಥದೂ ಇಲ್ಲ, ಸುಸ್ತು, ಸಂಕಟ ಅಂತಿದ್ರು.... ರಾತ್ರಿ ಮಲಗಿದೋರು ಬೆಳಗಾಗೋ ಹೊತ್ತಿಗೆ ಕೊರಡಾಗಿದ್ರು, ಅಮ್ಮನ್ನ ಅಕ್ಕನ ಮನೆಗೆ ಕಳಿಸಿ ನಾನು

ಇತ್ಲಾಗೆ ಬಂದೆ... ಹೇಗಿದ್ದೀರ ಸಾರ್?" ಅಂದ. ಸ್ವಲ್ಪ ಹೊತ್ತಾದ ನಂತರ "ಇನ್ನು ನಾನು ದುಡಿಯೋ ದುಡ್ಡು ನನ್ನ ಕೈಗೆ ಬರುತ್ತೆ. ಅದರಲ್ಲಿ ನನ್ನ ಭವಿಷ್ಯ ನಾನು ರೂಪಿಸ್ಕೊಬಹುದು. ಇವರತ್ರ ಮಾತಾಡಿ ಸಂಬಳ ಎಷ್ಟು ಅಂತ ಕೇಳ್ತೀನಿ. ಇಲ್ಲಿನ ಅನುಭವ ಹೇಳಿ ಬೇರೆ ಕಡೆ ಬೇಕಾದ್ರೂ ಹೆಚ್ಚಿನ ಸಂಬಳಕ್ಕೆ ಹೋಗ್ತೀನಿ.. ಬ್ಯಾಂಕಿಂದ ಸಾಲ ತಗೋತೀನಿ. ಒಂದು ಸಣ್ಣ ಮನೆ ಮಾಡ್ತೀನಿ ನನ್ನಮ್ಮನ್ನ ಇಲ್ಲಿಗೇ ಕರ್ಕೊಂಡ್ ಬರ್ತೀನಿ.... ಹೇಗಿದೆ ನನ್ನ ಪ್ಲಾನು" ಅಂತ ಕೇಳಿದ. "ಚೆನ್ನಾಗಿದೆ ಮಾಣಿ, ನನ್ನಿಂದ ಏನಾದ್ರೂ ಸಹಾಯ ಬೇಕಾದ್ರೆ ಕೇಳು" ಅಂದು ಹೊರಬಂದೆ.

ಇಲ್ಲಿ ನನಗೆ ಅಚ್ಚರಿ ಹುಟ್ಟಿಸಿದ ಅಂಶ ಎಂದರೆ ಆ ಹುಡುಗನಲ್ಲಿ ಅಡಗಿದ್ದ ಆತ್ಮವಿಶ್ವಾಸ, ಬದುಕಬೇಕೆಂಬ ಛಲ. ಸ್ವಾವಲಂಬಿಯಾಗಬೇಕು ಅನ್ನೋ ಉತ್ಸಾಹ. ಇವೇ ತಾನೇ ಬದುಕಿನ ಮೂಲಭೂತ ಅಂಗಗಳು. ಅವನಿಗಿರೋ ಛಲಕ್ಕೆ ಸರಿಯಾಗಿ ಪ್ರೇರಣೆ,ಪ್ರೋತ್ಸಾಹ ಒದಗಿದರೆ ಖಂಡಿತಾ ಅವನು ಸ್ವಾವಲಂಬಿಯಾಗ್ತಾನೆ ಅನಿಸಿತು. ಇದಾದ ಒಂದು ಹದಿನೈದು ದಿವಸಕ್ಕೆ ಅವನನ್ನು ಹೊಸಾ ವೇಷದಲ್ಲಿ ಕಂಡೆ. ಒಂದು ಸ್ಟೀಲ್ ಕ್ಯಾನ್ ಭರ್ತಿ ಕಾಫಿ ತಗೊಂಡು ಒಂದು ಬ್ಯಾಂಕಿನೊಳಕ್ಕೆ ಹೋದ. ಅವನು ವಾಪಾಸ್ ಬರೋವರೆಗೂ ಅಲ್ಲೇ ಕಾದೆ. ಬಂದ ಮೇಲೆ "ಏನು ಮಾಣಿ ಹೊಸಾ ವೇಷ" ಅಂದೆ. "ಹೌದು ಸಾರ್.... ಮೂರು ದಿನ ಆಯ್ತು ಈ ವೇಷ ಹಾಕಿ" ಅಂದ.."ಮತ್ತೆ ಹೋಟೆಲ್ ಕೆಲಸ" ಅಂದೆ..."ಓ, ಅದಾ ಅದನ್ನ ಬಿಟ್ ಬಿಟ್ಟೆ.... ಅಲ್ಲ ಸಾರ್ ಇಷ್ಟು ವರ್ಷ ದುಡಿದದ್ದಕ್ಕೆ ಒಂದು ನಿಯತ್ತು ಬೇಡವಾ... ಸಂಬಳ ಎಷ್ಟು ಅಂದರೆ ಐವತ್ತು ಅಂತಾನೆ. ಐವತ್ತಿಟ್ಕೊಂಡೇನ್ಮಾಡೋದು. ಅದಕ್ಕೆ ನಿನ್ನ ಸಹವಾಸವೇ ಬೇಡ ಅಂತ ಇದು ಶುರು ಮಾಡಿದೆ. ಸಾರ್ ನಿಮ್ಮ ಆಫೀಸಿಗೂ ಕಾಫಿ ಟೀ ಸಪ್ಲೆ ಮಾಡ್ಲಾ... ಬೆಳಗ್ಗೆ ಸಾಯಂಕಾಲ ಎರಡು ಹೊತ್ತು ಸಪ್ಲೈ ಮಾಡ್ತೀನಿ. ಕಾಫಿಗೆ ಎರಡೂವರೆ, ಟೀಗೆ ಎರಡು ರೂಪಾಯಿ" ಅಂದ. "ನಾಳೆ ಬೆಳಿಗ್ಗೆ ಆಫೀಸಿಗೆ ಬಾ, ವ್ಯವಸ್ಥೆ ಮಾಡ್ಕೊಡ್ತೀನಿ" ಅಂದೆ. "ನೋಡಿ ಸಾರ್, ಆ ಬ್ಯಾಂಕ್ ಮ್ಯಾನೇಜರ್ ಇದಾರಲ್ಲ, ಅವರು ದೇವರಂಥ ಮನುಷ್ಯರು. ಅವರೇ ಕೈನಿಂದ ಬಂಡವಾಳ ಹಾಕಿಕೊಟ್ಟಿದ್ದಾರೆ. ಅಲ್ಲೊಂದು ಸಣ್ಣ ರೂಮು ಮಾಡ್ಕೊಂಡಿದ್ದೀನಿ. ಅಲ್ಲೇ ಕಾಫಿ, ಟೀ ಮಾಡಿ ಆಫೀಸುಗಳಿಗೆ ಸಪ್ಲೈ ಮಾಡ್ತೀನಿ. ದಿನಕ್ಕೇನಿಲ್ಲ ಅಂದ್ರೂ ಇಪ್ಪತ್ತು ಮೂವತ್ತು ರೂಪಾಯಿ ಸಂಪಾದನೆ ಮಾಡ್ತೀನಿ. ಬ್ಯಾಂಕಲ್ಲೇ ಅಕೌಂಟ್ ಓಪನ್ ಮಾಡಿದೀನಿ. ಸ್ವಲ್ಪ ದಿವಸ ಕಳೆದ ಮೇಲೆ ಸ್ವಂತವಾಗಿ ಹೋಟೆಲು ತೆಗೆಯೋಕೂ ಲೋನ್ ಕೊಡಿಸ್ತೀನಿ ಅಂದಿದ್ದಾರೆ. ಆದರೆ ನಾನೊಂದಿಷ್ಟು ಹಣ ಕೈಲಿ ಇಟ್ಕೊಂಡಿರಬೇಕು" ಅಂದು ಅವನ ಪ್ಲಾನ್ ವಿವರಿಸಿದ."ಒಳ್ಳೆಯದು ಮಾಣಿ, ಹೀಗೆ ಕಷ್ಟಪಟ್ಟು ದುಡಿಯೋರಿಗೆ ಬೆಂಗಾವಲಾಗಿ ದೇವರಿದ್ದೇ ಇರ್ತಾನೆ. ಯೋಚನೆ ಮಾಡ್ಬೇಡ... ನನ್ನ ಕೈಲಾದ ಸಹಾಯ ಮಾಡ್ತೀನಿ" ಅಂದೆ. ಅದಕ್ಕೆ ಅವನು "ದೇವರನ್ನ ಯಾರು ನೋಡಿದ್ದಾರೆ ಸಾರ್... ಇದಾನೆ, ಸಹಾಯ ಮಾಡ್ತಾನೆ, ಬೆಂಗಾವಲಾಗಿರ್ತಾನೆ ಅಂತಾರೆ. ಆದರೆ ನನ್ನ ಪಾಲಿಗೆ ಸಮಯಕ್ಕೆ ಸರಿಯಾಗಿ ಸಹಾಯ ಮಾಡಿದ ಬ್ಯಾಂಕ್ ಮ್ಯಾನೇಜರ್, ಯಾವಾಗಲೂ ಪ್ರೋತ್ಸಾಹದ ಮಾತಾಡೋ ನೀವೇ ದೇವರು ಸಾರ್. ಒಬ್ಬನ ಏಳಿಗೆ ಕಂಡು ಕರುಬೋ ಜನಗಳಿರೋ ಈ ಸಮಾಜದಲ್ಲಿ ನಿಮ್ಮಂಥೋರು ಬಹಳ ಅಪರೂಪ ಸಾರ್. ನಾ ಬರ್ತೀನಿ ಮೂರು ಗಂಟೆಗೆ ಸರಿಯಾಗಿ ಇನ್ಶೂರೆನ್ಸ್ ಕಂಪನಿಗೆ ಕಾಫಿ ತಗೊಂಡು ಹೋಗ್ಬೇಕು...

ಅಂದಾಗೆ ನಾಳೆ ಬೆಳಗ್ಗೆ ನಿಮ್ಮಾಫೀಸಿಗೆ ಬರ್ತೀನಿ ಸಾರ್" ಅಂದು ಕಾಫಿ ಕ್ಯಾನ್ ಹಿಡಿದು ಹೊರಟ. 'ಭಲೇ ಮಾಣಿ!' ಅನಿಸಿತು. ಸ್ವಚ್ಛಂದವಾಗಿ ಹರಿಯೋ ನೀರು ಮುನ್ನುಗ್ಗಿ, ಕವಲೊಡೆದು, ಅಡೆತಡೆಗಳನ್ನು ಮೀಟಿ ಮುನ್ನುಗ್ಗೋ ಹಾಗೆ ಈ ಮಾಣಿ ಹೊಸ ಹೊಸ ದಾರಿಗಳನ್ನು ಕಂಡುಕೊಂಡು ಬದುಕಿನಲ್ಲಿ ಮುನ್ನುಗ್ಗುತ್ತಿದ್ದಾನಲ್ಲ. ಇದೇ ಜೀವನೋತ್ಸಾಹ ಎಲ್ಲರಲ್ಲೂ ಇದ್ದರೆ ಯಾರೂ ಸೋಮಾರಿಗಳಾಗಿ ಕಾಲ ಕಳೆಯುವ ಪ್ರಮೇಯವೇ ಬರುವುದಿಲ್ಲ ಅನಿಸಿ ಮರುದಿನ ಅವನಿಗೊಂದಿಷ್ಟು ವ್ಯಾಪಾರ ಕುದುರಿಸಿ ಕೊಡಬೇಕೆನಿಸಿತು.

## ಲೇಖಕರ ಪರಿಚಯ



ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಬೇಲೂರು ರಾಮಮೂರ್ತಿ ಅವರು ೧೯೫೦ರ ಜೂನ್ ೩೦ರಂದು ಜನಿಸಿದರು. ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ಕಾದಂಬರಿಗಳು, ಐವತ್ತಕ್ಕಿಂತಲೂ ಹೆಚ್ಚು ಕಿರುಕಾದಂಬರಿಗಳು, ಎಂಟು ಕಥಾಸಂಕಲನಗಳು ಮತ್ತು ಇಪ್ಪತ್ತಮೂರು ಹಾಸ್ಯಲೇಖನ ಸಂಗ್ರಹಗಳನ್ನು ಇವರು ಕನ್ನಡ ಸಾಹಿತ್ಯಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಅಭಿನೇತ್ರಿ, ಜೀವನ ಸಂಧ್ಯ, ಕಪ್ಪುನಕ್ಷತ್ರ,ಅಲೆಗಳು, ಮತ್ತೆ ಬೆಳಗಿದ ಚಂದ್ರಮ, ವಿಷವೃತ್ತ ಮುಂತಾದವು ಅವರ ಪ್ರಮುಖ ಕಾದಂಬರಿಗಳು.ಅತಿಥಿ ,ಸ್ವರ ಸಂಗಮ, ಜೋಡಿರಾಗ, ಅಗ್ನಿ ಜ್ವಾಲೆ, ಮುಂತಾದವು ಅವರ ಕಿರು ಕಾದಂಬರಿಗಳ ಗುಚ್ಛಗಳಾಗಿವೆ. ಪುಣ್ಯಕೋಟಿಯ ನಾಡಿನಲ್ಲಿ, ಕಥಾ ಕುಸುಮ, ಕಥಾಬಿಂಬ, ಆಕಾಶದಿಂದ ಧರೆಗೆ ಮುಂತಾದವು ಇವರ ಕಥಾಸಂಕಲನಗಳಾಗಿವೆ. ಹಾಸ್ಯಪುಷ್ಪ, ನಗೆ ಜೋಗುಳ, ಜಾಲಿ ಜಾಲಿ ಜೋಕಾಲಿ ಮುಂತಾದವು ಹಾಸ್ಯ ಸಂಕಲನಗಳಾಗಿವೆ. ಅಲ್ಲದೆ ಹಲವಾರು ಚಲನಚಿತ್ರಗಳಿಗೆ ಗೀತ ರಚನೆಯನ್ನು ಮಾಡಿರುವ ಇವರು ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿದ್ದರು. ಗೊರೂರು ಪ್ರಶಸ್ತಿ, ರತ್ನ ಪ್ರಶಸ್ತಿ ,ಪರಮಾನಂದ ಪ್ರಶಸ್ತಿ, ಕುವೆಂಪು ಪ್ರಶಸ್ತಿ , ಐವತ್ತೆರಡನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ ಇತ್ಯಾದಿಗಳು ಇವರಿಗೆ ಸಂದ ಪ್ರಶಸ್ತಿಗಳಾಗಿವೆ.

ಪ್ರಸ್ತುತ 'ಛಲ' ಕತೆಯನ್ನು ಬೇಲೂರು ರಾಮಮೂರ್ತಿಯವರ 'ಕಥಾಕುಸುಮ' ಎಂಬ ಕಥಾಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕತೆಗಾರರು ಮಾಣಿಯ ಹೋಟೇಲಿಗೆ ಹೋಗುತ್ತಿದ್ದುದು ಯಾಕಾಗಿ?
2. ಮಾಣಿಗೆ ಕಲಿಯುವ ಆಸೆ ಇದ್ದರೂ ಅದನ್ನು ಮುಂದುವರಿಸಲು ಸಾಧ್ಯವಾಗದಿರಲು ಕಾರಣವೇನು?
3. ಕತೆಗಾರರೊಂದಿಗೆ ದೊಡ್ಡ ಹೋಟೆಲಿಗೆ ಭೇಟಿ ಕೊಟ್ಟ ಮಾಣಿಯ ಪ್ರತಿಕ್ರಿಯೆ ಹೇಗಿತ್ತು?
4. ಮಾಣಿಯ ಕಲಿಯುವ ವಯಸ್ಸಿನಲ್ಲಿ ಹೋಟೇಲಿ ನಲ್ಲಿ ಕೆಲಸಕ್ಕೆ ಸೇರಲು ಕಾರಣವೇನು?
5. ಮಾಣಿಯ ಕುರಿತು ಕತೆಗಾರರು ಅಚ್ಚರಿಪಡಲು ಕಾರಣವೇನು?

## ಔಚಿತ್ಯ ಬರೆಯಿರಿ

‘ಛಲ’ ಪಾಠದ ಶೀರ್ಷಿಕೆಯ ಔಚಿತ್ಯವನ್ನು ಬರೆಯಿರಿ.

## ಪಾತ್ರ ಚಿತ್ರಣ ಮಾಡಿರಿ

‘ಛಲ’ ಕತೆಯಲ್ಲಿ ಬರುವ ಮಾಣಿಯ ಪಾತ್ರ ಚಿತ್ರಣ ಮಾಡಿರಿ.

## ಕಥೆ ಮುಂದುವರಿಸಿ ಬರೆಯಿರಿ

ಹೋಟೆಲಿನ ಕೆಲಸವನ್ನು ಬಿಟ್ಟು ಸ್ವ-ಉದ್ಯೋಗವನ್ನು ಕೈಗೊಂಡ ಮಾಣಿಯ ಮುಂದಿನ ಬದುಕು ಹೇಗೆ ನಡೆಯಬಹುದು ಎಂಬುದನ್ನು ಊಹಿಸಿ ಕಥೆಯನ್ನು ಮುಂದುವರಿಸಿ ಬರೆಯಿರಿ.

## ಲೇಖನ ಬರೆಯಿರಿ

'ಮಕ್ಕಳ ಬಾಲ್ಯವನ್ನು ಕಸಿಯುತ್ತಿರುವ ಬಾಲಕಾರ್ಮಿಕ ಪದ್ಧತಿ' ಎಂಬ ವಿಷಯದಲ್ಲಿ ಲೇಖನ ತಯಾರಿಸಿ ಅದನ್ನು ನಿಮ್ಮ ಶಾಲಾ ಬ್ಲಾಗ್ ನಲ್ಲಿ ಪ್ರಕಟಿಸಿರಿ.

## ಶಿಷ್ಟರೂಪಕ್ಕೆ ಪರಿವರ್ತಿಸಿರಿ

ಕೆಳಗೆ ನೀಡಲಾದ ಗ್ರಾಮ್ಯ ಭಾಷೆಯಲ್ಲಿರುವ ಗದ್ಯಭಾಗವನ್ನು ಶಿಷ್ಟಭಾಷೆಗೆ ಪರಿವರ್ತಿಸಿ ಬರೆಯಿರಿ.

"ರೀ ನಮ್ಮನೆಗೆ ಬೇರೆ ಕೆಲಸದವಳನ್ನು ನೋಡಬೇಕಲ್ಲ" "ಯಾಕೆ ತಿಮ್ಮಕ್ಕ ಬರೋಲ್ಲಂತೇನು" ಅಂತ ಕೇಳಿದೆ. "ಅವಳಿಗೆ ಗಂಡನ ಆಫೀಸಲ್ಲಿ ಪ್ಯೂನ್ ಕೆಲಸ ಸಿಕ್ಕಿದೆಯಂತೆ, ಇನ್ಮೇಲೆ ಯಾರ ಮನೆ ಕೆಲಸವೂ ಮಾಡಲ್ಲ ಅಂದ್ಲು.... ಅವಳು ಪ್ರೈವೇಟ್ ಲ್ಲಿ ಎಸ್.ಎಸ್.ಎಲ್.ಸಿ. ಕಟ್ಟಿದ್ದಲ್ಲ, ಅದೂ ಪಾಸಾಯ್ತಂತೆ. ಸದ್ಯ.... ಬೇರೆಯವರ ಮನೆ ಕೆಲಸ ಮಾಡುವುದು ನನ್ನವರೆಗೆ ಸಾಕು. ನನ್ನ ಮಕ್ಕಳು ಅದನ್ನು ಮುಂದುವರಿಸಿಕೊಂಡು ಹೋಗುವುದು ಬೇಡ ಅಂದಳು."

# ಕುಪ್ಪಿಚೂರು

**ಡಾ. ವೆಂಕಟರಾಜ ಪುಣಿಂಚತ್ತಾಯ**

**(ಸಾಮಾಜಿಕ ನಾಟಕ)**

**ಪಾತ್ರವರ್ಗ:**

ಸುರೇಶ

ಶೇಖರ

ವಿಶ್ವ

ಮೂರ್ತಿ

ಚಂದ್ರು

ಪೊಲೀಸ್

ಡಾಕ್ಟರು

ನರ್ಸ್

ಗೋಪಾಲರಾಯರು

ಭವಾನಿಯಮ್ಮ

**ಸಂದರ್ಭ:** ಕಾಲೇಜು ಹುಡುಗರು ಬೀದಿ ಬದಿಯಲ್ಲಿ ಕುಳಿತಿರುವ ಹುಡುಗರ ಬಳಿ ತಮ್ಮ ಬೂಟ್ ಪಾಲಿಶ್ ಮಾಡಿಸಿಕೊಳ್ಳುತ್ತಾರೆ. ಆದರೆ ಪಾಲಿಶ್ ಮಾಡಿದ್ದಕ್ಕೆ ಕೇಳಿದಷ್ಟು ಹಣವನ್ನು ಕೊಡದೆ ಕಾಲೇಜು ಮಕ್ಕಳು ಅವರನ್ನು ಸತಾಯಿಸುತ್ತಾರೆ. ಅಲ್ಲಿ ನಡೆಯುವ ಮಾತುಕತೆ ಗಲಾಟೆಗೆ ತಿರುಗುತ್ತದೆ. ಕಾಲೇಜು ಹುಡುಗರೆಲ್ಲಾ ಸೇರಿ ಬೂಟ್ ಪಾಲಿಶ್ ಮಾಡುವ ಹುಡುಗನೊಬ್ಬನ ಮೇಲೆ ಹಲ್ಲೆ ಮಾಡುತ್ತಾರೆ. ಪೋಲಿಸರು ಬಂದು ಗಲಾಟೆ ಮಾಡಿದವರಲ್ಲಿ ಮುಂಚೂಣಿಯಲ್ಲಿದ್ದ ಕಾಲೇಜು ಲೀಡರ್ ಅಶೋಕನನ್ನು ಪೋಲಿಸ್ ಠಾಣೆಗೆ ಕರೆದೊಯ್ಯುತ್ತಾರೆ. ಇದನ್ನು ಪ್ರತಿಭಟಿಸಲು ಕಾಲೇಜು ಹುಡುಗರು ಯೋಜನೆ ಹಾಕುತ್ತಾರೆ.

## ದೃಶ್ಯ - ಒಂದು

(ಹಾಸ್ಟೆಲು. ಕತ್ತಲೆ. ಒಂದು ಲಾಂದ್ರ. ಸುರೇಶನು ಸಿಗರೇಟು ಸೇದುತ್ತಾ ಏನನ್ನೋ ಯೋಚಿಸುತ್ತಾ ಕುಳಿತಿರುವನು.)

ವಿಶ್ವ : ಏನು ಸುರೇಶ ! ಯೋಚಿಸುತ್ತಾ ಕುಳಿತಿದ್ದೀ?

ಸುರೇಶ : ಇವತ್ತು ನನಗೆ ಮನೆಯಿಂದ ೧೦೦ ರೂಪಾಯಿ ಮನಿಯಾರ್ಡರ್ ಬರಬೇಕಿತ್ತು. ಇನ್ನೂ ಯಾಕೆ ಬರಲಿಲ್ಲಾಂತ ನನಗೆ ತಲೆಬಿಸಿ .

ವಿಶ್ವ : ಮೊನ್ನೆ ನೀನು ಮನೆಗೆ ಹೋದವನು ಹಣ ತರಲಿಲ್ವೋ?

ಸುರೇಶ : ಮನೆಯಲ್ಲಿ ಹಣ ಇರಲಿಲ್ಲ. ಮೂರು ದಿವಸದೊಳಗೆ ಎಲ್ಲಿಂದಾದ್ರೂ ಹಣ ಮಾಡಿ M.O. ಮಾಡುತ್ತೇನೆಂತ ಅಮ್ಮ ಹೇಳಿದ್ರು.

ವಿಶ್ವ : ಹಾಗಾದ್ರೆ ಅಪ್ಪಾ ಇಲ್ವೋ ಮನೆಯಲ್ಲಿ.

ಸುರೇಶ : ಇದ್ದಾರೆ. ಅವರಿಗೇನೂ ಸುಖವಿಲ್ಲ.

ವಿಶ್ವ : ಎಂತದಾಗುವುದು?

ಸುರೇಶ : ಅವರಿಗೊಂದು ಹೊಟ್ಟೆ ನೋವು. ಸುರುವಾಗಿ ತಿಂಗಳು ಆರಾಯಿತು. ಅವರು ಹೆಚ್ಚಾಗಿ ಮಲಕ್ಕೊಂಡೇ ಇರುವುದು.

ವಿಶ್ವ : ಹಾಗೆ ಮನೆ ಕಾರ್ಬಾರು ಎಲ್ಲ ಅಮ್ಮನೇ ನೋಡುವುದೂಂತ ಕಾಣುತ್ತದೆ, ಅಲ್ವೋ?

ಸುರೇಶ : ಹೌದು. ಅಮ್ಮ ಅಷ್ಟು ಮೇಲೆ ಹೇಳಿದ್ದಾರೆ, ಸೋಮವಾರ ಹೇಗಾದ್ರೂ M.O. ಮಾಡುತ್ತೇನೇಂತ. ಇವತ್ತು ಬುಧವಾರ ಅಲ್ಲೋ? ಇವತ್ತು ಖಂಡಿತಾ ನನಗೆ M.O ಸಿಕ್ಕಬೇಕಿತ್ತು.

ವಿಶ್ವ : ಪರ್ವಾಗಿಲ್ಲ ಇವತ್ತಲ್ಲದಿದ್ರೆ ನಾಳೆ ಸಿಕ್ಕೀತು.

ಸುರೇಶ : ನಾಳೆ ಸಿಕ್ಕಿದರೆ ಸಾಲದು ವಿಶ್ವ. ಇವತ್ತು ಹಾಸ್ಟೆಲಿನ ಬಿಲ್ಲು ಮುಗಿಸುತ್ತೇನೇಂತ ವಾರ್ಡನರಿಗೆ ಮಾತು ಕೊಟ್ಟಿದ್ದೇನೆ. ದುಡ್ಡು ಕೊಡದೆ ರಾತ್ರಿಯ ಊಟಕ್ಕೆ ಹೋಗುವುದು ಹೇಗಂತ ನಾನು ಆ ಕಡೆ ಹೋಗಲೇ ಇಲ್ಲ. ಸುಮ್ಮನೆ ಅಂಗಡಿಗೆ ಹೋಗಿ ಮೂರು ನೇಂದ್ರ ಬಾಳೆಹಣ್ಣು ತಿಂದು ಒಂದು ಗ್ಲಾಸು ನೀರು ಕುಡಿದು ಹೊಟ್ಟೆ ತುಂಬಿಸಿಕೊಂಡು ಬಂದೆ.

ವಿಶ್ವ : ಅದರಲ್ಲೊಂದು ಸಂಗತಿ ಉಂಟು ಸುರೇಶ್. ಈಗ, ನಾಳೆ ನಮ್ಮ ಸ್ಟ್ರೈಕ್ ಜೋರಾದ್ರೆ, ಕಡಿಮೆಯಲ್ಲಿ ಒಂದು ವಾರಕ್ಕಾದ್ರೂ ನಮಗೆ ರಜೆ ಸಿಕ್ಕದೆ ಇರಲಿಕ್ಕಿಲ್ಲ.

ಅಷ್ಟರಲ್ಲಿ ನಿನಗೆ ಊರಿಗೆ ಹೋಗಿ ಹಣ ಹಿಡಕೊಂಡು ಬರಬಹುದು. ನೀನು ತಲೆಬಿಸಿ ಮಾಡುವುದು ಬೇಡ.

ಸುರೇಶ : ಅಲ್ಲ ತಲೆ ಬಿಸಿ ಇಲ್ಲಪ್ಪಾ.

ವಿಶ್ವ : ಅಗೋ. ಎಲ್ಲ ಬಂದ್ರು.

ಮೂರ್ತಿ : ಮೊದಲು ಆ ಬಾಗಿಲು ಹಾಕಿ.

ಚಂದ್ರು : ಬಾಗಿಲು ಹಾಕಿ ಆಗಿದೆ.

ಮೂರ್ತಿ : ದೀಪ ಆರಿಸಿ. ನಮಗೆ ಇಲ್ಲಿ ಸಣ್ಣ ಲಾಟಿನುಂಟು ಅದು ಸಾಕು.

ಚಂದ್ರು : ನೋಡಿ, ಎಲ್ಲರೂ ಸ್ವಲ್ಪ ಮೆಲ್ಲಗೆ ಮಾತಾಡಬೇಕು. ಯಾರೂ ಗಟ್ಟಿ ಮಾತಾಡಬಾರದು.

ಮೂರ್ತಿ : ನಾಳೆ ನಮ್ಮ ಮೊದಲನೆಯ ಪ್ರೋಗ್ರಾಮ್ ಸರಕಾರೀ ಬಸ್ಸನ್ನು ತಡೆದು ನಿಲ್ಲಿಸುವುದು.

ಶೇಖರ : ಆದೀತು .ಎಲ್ಲರೂ ಹೋಗಿ ಡಾಮರ್ ರೋಡಿನಲ್ಲಿ ಮಲಗುವಾ.

ಮೂರ್ತಿ : ಅದು ಪ್ರಯೋಜನವಿಲ್ಲ.

ವಿಶ್ವ : ನಾನು ಹೇಳುತ್ತೇನೆ. ನಾವು ಎಲ್ಲರೂ ಸೇರಿ ಬಸ್ಸನ್ನು ಲೂಟಿ ಮಾಡಬೇಕು.

ಮೂರ್ತಿ : ಅದಾದೀತು.ಎಲ್ಲರೂ ಅದಕ್ಕೆಬೇಕಾದ ಸಿದ್ಧತೆ ಮಾಡಿಕೊಂಡು ಬನ್ನಿ.ಏನು?

ಎಲ್ಲರೂ : ಆದೀತು, ಆದೀತು.

ಮೂರ್ತಿ : ಹೋಗಿ.ಈಗಲೇ ಸಿದ್ಧತೆ ಮಾಡಿ.

## ದೃಶ್ಯ - ಎರಡು

(ಬಸ್ಸಿನ ಹಾರ್ನ್ ಕೇಳಿಸುವುದು. "ವಿದ್ಯಾರ್ಥಿ ಸಂಘಟನೆಗೆ ಜಯವಾಗಲಿ ವಿದ್ಯಾರ್ಥಿ ಸಂಘಟನೆಗೆ ಜಯವಾಗಲಿ,"ಎಂಬ ಘೋಷಣೆ ಕೇಳಿಸುವುದು. ಜೊತೆಯಲ್ಲಿ ಬಸ್ಸಿಗೆ ಕಲ್ಲು ಹೊಡೆಯುವ ಶಬ್ದ, ಸೋಡಾ ಬಾಟ್ಲಿ ಒಡೆದ ಶಬ್ದ, ಮಗುವಿನ ಚೀರಾಟ ಇತ್ಯಾದಿ ಬೊಬ್ಬೆ ಕೇಳಿಸುವುದು)

ಮೂರ್ತಿ : ವಿದ್ಯಾರ್ಥಿ ಸಂಘಟನೆಗೆ...

ಎಲ್ಲರೂ : ಜಯವಾಗಲಿ.

(ಎಲ್ಲರೂ ಪ್ರವೇಶಿಸುವರು. ವಿಶ್ವ ಕೊನೆಗೆ ಬರುವನು)

ವಿಶ್ವ : ಘು ಘು ಘು ಘು ನಿಲ್ಲಿಸಿ...

ಮೂರ್ತಿ : ಎಂತದಕ್ಕೆ?

ವಿಶ್ವ : ಒಂದು ಸಲ ನಿಲ್ಲಿಸಿ ಬೊಬ್ಬೆ. ಅಲ್ಲಿ ಅನರ್ಥ ಆಯಿತು.

ಮೂರ್ತಿ : ಎಂತದಾಯಿತು?

ವಿಶ್ವ : ಕೇಳಿ , ಶಬ್ದ ಕೇಳಿ.

(ಒಳಗಿನಿಂದ ಹೆಂಗಸರು, ಮಕ್ಕಳ ಚೀರಾಟ ಕೇಳಿಸುವುದು)

ಮೂರ್ತಿ : ಏನಾಯ್ತು ವಿಶ್ವ?

ವಿಶ್ವ : ನೀವೆಲ್ಲ ಬಸ್ಸಿನ ಒಳಗೆ ಕಲ್ಲು ಹೊಡೆದದ್ದು ಯಾಕೆ?

ಮೂರ್ತಿ : ಒಳಗಲ್ಲ ಹೊಡೆದದ್ದು. ಬಸ್ಸಿನ ಹಿಂಭಾಗಕ್ಕಲ್ವೋ?

ವಿಶ್ವ : ಅಲ್ಲ, ಯಾರೋ ಒಳಗೆ ಹೊಡೆದಿದ್ದಾರೆ.

ಶೇಖರ : ಯಾರೋ ಒಳಗೆ ಸೋಡ ಬಾಟ್ಲಿ ಬಿಸಾಡಿದ್ದಾರೆ.

ವಿಶ್ವ : ನಾಲ್ಕೈದು ಜನರಿಗೆ ಸೀರಿಯಸ್ ಆಗಿದೆ. ಇಬ್ಬರಿಗೆ ಬೋಧವೇ ಇಲ್ಲ.ಅದು ಗೊತ್ತುಂಟ?

ಚಂದ್ರು : ಈಗ ಅನರ್ಥವಾಯಿತಲ್ಲ. ಎಂತದು ಮಾಡುವುದೀಗ?

ವಿಶ್ವ : ಮಾಡುವುದೆಂತದು ಲೂಟಿ ಮಾಡಿದ್ದು ನಮ್ಮಲ್ಲಿ ಯಾರೂಂತಲೇ ಗೊತ್ತಾಗಬಾರದು. ಎಲ್ಲ ಸಭ್ಯರ ಹಾಗೆ ಹೋಗಿ ಕ್ಲಾಸಿನೊಳಗೆ ಕೂತುಕೊಳ್ಳುವ.

ಶೇಖರ : ಅದು ಹೌದು, ನಮ್ಮ ಕಾಲೇಜಿನ ಸಾವಿರ ಮಕ್ಕಳಲ್ಲಿ ತಪ್ಪು ಮಾಡಿದ್ದು ಯಾರೂಂತ ಕಂಡು ಹುಡುಕುವುದು ಹೇಗೆ ?ಬನ್ನಿ. ಓಡಿ ಓಡಿ ಎಲ್ಲ.

(ಎಲ್ಲರೂ ಓಡುವರು. ಅಷ್ಟರಲ್ಲಿ ಎದುರುಗಡೆಯಿಂದ ಪೊಲೀಸು ಬಂದು ಒಬ್ಬಿಬ್ಬರನ್ನು ಹಿಡ್ಕೊಂಡು ಹೋಗುವರು)

## ದೃಶ್ಯ - ಮೂರು

(ಆಸ್ಪತ್ರೆ, ನರ್ಸ್, ಡಾಕ್ಟರ್ ಎಲ್ಲ ಇರುವರು)

(ಎರಡು ಬೆಂಚಿನಲ್ಲಿ ಇಬ್ಬರು ಗಾಯಾಳುಗಳು ಮಲಗಿರುವರು. ಭವಾನಿಯಮ್ಮನ ಪ್ರವೇಶ)

ಡಾಕ್ಟರು : ಹೆಸರೇನು?

ಭವಾನಿ : ಭವಾನಿಯಮ್ಮ.

ಡಾಕ್ಟರು : ಸಿಸ್ಟರ್, ಇವರ ಯಜಮಾನರು ಇರುವ ಬೆಡ್ಡು ಯಾವುದು?

ನರ್ಸು : ನೋಡಿ, ಇದೇ ಇಲ್ಲಿದ್ದಾರೆ. (ಎಂದು ಬೆಡ್ ತೋರಿಸುವರು)

| | | |
|---|---|---|
| ಭವಾನಿ | : | (ಹತ್ತಿರ ಬಂದು ಕುಳಿತು) ಎಂತದಾಯಿತು ನಿಮಗೆ? ಅಯ್ಯೋ! ತಲೆ ಎಲ್ಲ ಒಡೆದಿದೆಯಲ್ಲ. |
| ಗೋಪಾಲ | : | ಆ... ಯಾರು... |
| ನರ್ಸು | : | ನಿಮ್ಮ ಹೆಂಡತಿ ಭವಾನಿಯಮ್ಮ ಬಂದಿದ್ದಾರೆ. ನೀವಲ್ವೋ ಹೇಳಿದ್ದು ಅವರನ್ನು ಕಾಣಬೇಕೂಂತ. |
| ಗೋಪಾಲ | : | ಆಂ. |
| ಭವಾನಿ | : | ನಿಮ್ಮಲ್ಲಿ ನಾನು ಹೇಳ್ಲಿಲ್ವೋ. ಸೌಖ್ಯವಿಲ್ಲದ ನೀವು ಯಾಕೆ ಪೇಟೆಗೆ ಹೊರಟದ್ದು ನೋಡುವಾ. |

(ಗೋಪಾಲನು ನರಳುವನು. ಏನೋ ಕೈ ಸನ್ನೆ ಮಾಡುವನು. ಡಾಕ್ಟರ್ ಬಂದು ಪರೀಕ್ಷಿಸುವರು)

| | | |
|---|---|---|
| ಭವಾನಿ | : | ಡಾಕ್ಟರರೇ! ಹೇಗಿದೆ ಈಗ? |
| ಡಾಕ್ಟರ್ | : | ಎಂತದು ಹೇಳಬೇಕಾದ್ರೂ ಹೊಟ್ಟೆಯ ಎಕ್ಸ್-ರೇ ನೋಡಿ ಆಗಬೇಕು. ಅವರು ಆಗಾಗ ಹೊಟ್ಟೆ ನೋವೂಂತ ಹೇಳುತ್ತಾ ಇದ್ದಾರಲ್ಲ. |
| ಭವಾನಿ | : | ಹಾಗೆ ಮೊದಲೇ ಅವರಿಗೊಂದು ಹೊಟ್ಟೆ ನೋವು ಇತ್ತು. ಅದೇ ಈಗ ಜೋರಾಗಿದ್ದೋ ಏನೋ. |
| ಡಾಕ್ಟರು | : | ಆ ಹೊಟ್ಟೆನೋವು ಈಗ ಜೋರಾಗಲಿಕ್ಕೆ ಕಾರಣವಿಲ್ಲ. |
| ಭವಾನಿ | : | ಮತ್ತೆಂತದಾಗಿದೆ ಡಾಕ್ಟ್ರೆ. ಒಂದು ಸಲ ಅವರನ್ನು ಗುಣಪಡಿಸಿ ಬಿಡಿ. ಜೀವದ ಮೋರೆಯಲ್ಲಿ ಅವರನ್ನು ನೋಡುವ ಭಾಗ್ಯ ಆ ಮಕ್ಕಳಿಗೆ ಸಿಗುತ್ತಿದ್ರೆ ಸಾಕಾಗುತ್ತಿತ್ತು. (ಅಳುವಳು) |
| ಡಾಕ್ಟರ್ | : | ಅಳಬೇಡಿ ಅಮ್ಮ. ಹಾಗೇನು ತೊಂದರೆ ಬರಲಿಕ್ಕಿಲ್ಲ. ಎಕ್ಸ್-ರೇ ನೋಡಿದ ನಂತರ ಒಂದು ವೇಳೆ ಆಪರೇಷನೇ ಮಾಡಬೇಕಾಗಿ ಬಂದ್ರೂ ಗಾಬರಿಯಿಲ್ಲ.ಇಲ್ಲಿ ಅದಕ್ಕೆ ಬೇಕಾದ ಎಲ್ಲ ಸೌಕರ್ಯಗಳೂ ಉಂಟು. ನಾನೇ ಆಪರೇಷನ್ ಮಾಡುವವನು. |
| ಭವಾನಿ | : | ನನ್ನ ಹಣೆಯ ಕುಂಕುಮವನ್ನು ನಿಮಗೊಪ್ಪಿಸಿದ್ದೇನೆ ಒರೆಸಿ ಬಿಡಬೇಡಿ ಡಾಕ್ಟ್ರೆ! |
| ಡಾಕ್ಟರು | : | ದೇವರು ಕಾಪಾಡುತ್ತಾನೆ. ನೀವು ಸ್ವಲ್ಪ ಸಮಾಧಾನ ತೆಕ್ಕೊಳ್ಳಿ. ನಾನು ಎಕ್ಸ್-ರೇ ರಿಸಲ್ಟ್ ನೋಡಿ ಬರುತ್ತೇನೆ. (ನರ್ಸ್ ನೊಡನೆ) ಸಿಸ್ಟರ್, ಇವರಿಗೆ ಬೇಕಾದರೆ ಮುಸುಂಬಿ ರಸಕ್ಕೆ ಸ್ವಲ್ಪ ಗ್ಲುಕೋಸ್ ಹಾಕಿ ಕೊಡಬಹುದು.ನಾನು ಬೇಗ ಬರುತ್ತೇನೆ. |

(ಡಾಕ್ಟರರು ಹೋಗುವರು)

## ದೃಶ್ಯ - ನಾಲ್ಕು

(ಹಾಸ್ಟೆಲ್)

(ಸುರೇಶನನ್ನು ಉಳಿದ ಹುಡುಗರು ತಡೆದು ನಿಲ್ಲಿಸುತ್ತಿರುವರು. ಅವನು ಅವರ ಕೈಯಿಂದ ತಪ್ಪಿಸಿ ಓಡಲು ಯತ್ನಿಸಿರುವನು)

ಶೇಖರ : ಎಲ್ಲಿಗೋ ಓಡುವುದು. ಹಾಗೆಲ್ಲ ತಪ್ಪಿಸಿ ಓಡಲಿಕ್ಕೆ ನಾವು ಬಿಡಲಿಕ್ಕಿಲ್ಲ.

ಸುರೇಶ : ಬಿಡಿ ನನ್ನನ್ನು ಮರ್ಯಾದೆಯಲ್ಲಿ ಬಿಡಿ.

ವಿಶ್ವ : ಬಿಡಬೇಡಿ ,ಬಿಡಬೇಡಿ. ಅವನು ಒಬ್ಬ ಹೋದರೆ ನಮ್ಮ ಗುಟ್ಟೆಲ್ಲ ರಟ್ಟಾದೀತು. ಇಷ್ಟರತನಕ ನಮ್ಮನ್ನು ಪೊಲೀಸರಿಗೆ ಅರೆಸ್ಟ್ ಮಾಡಲಿಕ್ಕಾಗಲಿಲ್ಲ.

ಚಂದ್ರು : ಹೌದು .ಅರೆಸ್ಟ್ ಮಾಡುವುದು ಹೇಗೆ? ಇಷ್ಟು ಮಂದಿ ಕಾಲೇಜು ಹುಡುಗರಲ್ಲಿ ಲೂಟಿ ಮಾಡಿದವರು ಯಾರೂಂತ ಗೊತ್ತಾದರೆ ಅಲ್ವೋ? ನಮ್ಮ ಕಡೆಯಲ್ಲಿ ಹುಡುಗರೆಲ್ಲ ಒಗ್ಗಟ್ಟಾಗಿದ್ದಾರೆ. ತಪ್ಪು ಮಾಡಿದವರು ಯಾರೂಂತ ಗೊತ್ತಾದ್ರೆ ಅಲ್ವೋ ಅರಸ್ಟ್ ಮಾಡುವುದು?

ಸುರೇಶ : ತಪ್ಪು ಮಾಡಿದ್ದು ಯಾರೂಂತ ಗೊತ್ತಾಗಲಿ. ನನ್ನನ್ನು ಅರೆಸ್ಟ್ ಮಾಡಲಿ.

ಶೇಖರ : ಹೌದು ನೀನೊಬ್ಬ ಅರೆಸ್ಟಾದ ಮಾತ್ರಕ್ಕೇ ಈ ಕೇಸು ಮುಗಿಯುವುದಿಲ್ಲ. ನಿನ್ನ ಬಾಯಿಯಿಂದ ಅವರು ನಮ್ಮೆಲ್ಲರ ಹೆಸರನ್ನೂ ಹೇಳಿಸುತ್ತಾರೆ.

ಸುರೇಶ : ನಾನು ಯಾರ ಹೆಸರನ್ನೂ ಹೇಳಲಿಕ್ಕೆ ಹೋಗುವುದಿಲ್ಲ. ನನ್ನನ್ನು ಮಾತ್ರ ಬಿಡಿ .

ಮೂರ್ತಿ : ಬಾಸುಂಡೆ ಬರುವ ಹಾಗೆ ನಿನಗೆ ಲಾಟಿ ಏಟು ಬಿದ್ದಾಗ, ನೀನು ನಮ್ಮ ಹೆಸರು ಹೇಳದೆ ಇರಲಿಕ್ಕಿಲ್ಲ. ಖಂಡಿತಾ ಇರಲಿಕ್ಕಿಲ್ಲ.

ಸುರೇಶ : ನನಗೆ ಏಟು ಬೀಳಲಿ. ನಾನು ಏಟು ತಿಂದು ಸಾಯುತ್ತೇನೆ. ನಿಮಗೆ ಯಾರಿಗೂ ದ್ರೋಹ ಮಾಡದೆ ನಾನು ಸಾಯುತ್ತೇನೆ. ನನ್ನನ್ನು ಬಿಡಿ.

ವಿಶ್ವ : (ಉಳಿದವರೊಡನೆ) ಇವತ್ತಿನ ಪತ್ರಿಕೆ ಓದಿದ ನಂತರ ಅವನು ಇಷ್ಟೆಲ್ಲ ಚೇಂಜ್ ಆದದ್ದು. ಬಿಡಬೇಡಿ ಅವನನ್ನು. ಇಂಥ ಅರೆ ಹುಚ್ಚರನ್ನೆಲ್ಲ ಕಟ್ಟಿಕೊಂಡರೆ ಹೀಗೆಯೇ ಆಗುವುದು.

ಸುರೇಶ : ನನ್ನನ್ನು ಬಿಡುತ್ತೀರೋ ಇಲ್ಲವೋ. ಬಿಡದಿದ್ದರೆ ನಿಮ್ಮನ್ನು ತುಳಿದೇನು. (ಎಂದು ಗದರಿಸಿ ಹೇಗಾದ್ರೂ ಮಾಡಿ ತಪ್ಪಿಸಿಕೊಂಡು ಹೋಗುವನು)

ಚಂದ್ರು : ಒಂದು ಅನರ್ಥ ಮಾಡಿ ಹಾಕುತ್ತಾನೆ ಇವ!

## ದೃಶ್ಯ - ಐದು

(ಆಸ್ಪತ್ರೆ ಆಪರೇಷನ್ ಥೀಯೇಟರ್ ಎಂಬ ಬೋರ್ಡ್ ಕಾಣಿಸುತ್ತಿದೆ)

ಸುರೇಶ : ಅಮ್ಮ, ಇದೇನಮ್ಮ ನೀವು ಇಲ್ಲಿ? ಏನಾಗುತ್ತದಮ್ಮ?

ಭವಾನಿ : ನಿನಗೆ ಸಂಗತಿ ಗೊತ್ತಿಲ್ವೋ?. ನನ್ನ ಕಾಗದ ಸಿಕ್ಲಿಲ್ವೋ.

ಸುರೇಶ : ಇಲ್ಲಮ್ಮ.

ಭವಾನಿ : ನಿನ್ನಪ್ಪನಿಗೆ ಸೀರಿಯಸ್ ಅಲ್ವೋ?

ಸುರೇಶ : ಎಂತದಾಯಿತಮ್ಮ?

ಭವಾನಿ : ಅವರು ನಿನಗೆ ಹಣ ಕೊಡಲಿಕ್ಕೇಂತ ಬುಧವಾರ ಬೆಳಗ್ಗೆ ಮನೆಯಿಂದ ಹೊರಟಿದ್ರು. ದಾರಿಯಲ್ಲಿ ಯಾರೋ ಬಸ್ಸಿಗೆ ಕಲ್ಲು ಹೊಡೆದು,ಅವರಿಗೆ ತುಂಬಾ ಸೀರಿಯಸ್ಸಾಗಿದೆ.

ಸುರೇಶ : ಅಮ್ಮಾ (ಅಳುವನು) ಅಪ್ಪ ಎಲ್ಲಿದ್ದಾರೆ ಈಗ?

ಭವಾನಿ : (ಆಪರೇಷನ್ ಥಿಯೇಟರಿಗೆ ಕೈ ತೋರಿಸಿ ) ಇದರೊಳಗೆ ಇದ್ದಾರೆ. ಹೊಟ್ಟೆಗೆ ಪೆಟ್ಟಾಗಿ ಒಳಗೆ ಏನೋ ಸೇರಿಕೊಂಡಿದೆಯಂತೆ.

(ಸ್ಕ್ರೀನ್ ತೆರೆದು ಡಾಕ್ಟರ್ ರ ಪ್ರವೇಶ)

ಡಾಕ್ಟರು : ಅಪರೇಷನ್ ಆಯಿತಮ್ಮ. ಇವರು ಯಾರು?

ಭವಾನಿ : ಮಗ, ಸುರೇಶಾಂತ. ಕಾಲೇಜಿನಲ್ಲಿ ಓದುತ್ತಿದ್ದಾನೆ.

ಡಾಕ್ಟರ್ : ನೋಡಿ ಇದು ಹೊಟ್ಟೆಯೊಳಗಿದ್ದದ್ದು.



| | | |
|---|---|---|
| ಭವಾನಿ | : | ಎಂತದು ಡಾಕ್ಟ್ರೆ ಅದು? |
| ಡಾಕ್ಟರ್ | : | ಕುಪ್ಪಿಚೂರು |
| ಸುರೇಶ | : | ಕುಪ್ಪಿಚೂರು? |
| ಭವಾನಿ | : | ಕುಪ್ಪಿಚೂರು? |
| ಸುರೇಶ | : | (ತಂದೆಯ ಬಳಿ ಹೋಗಿ) ಅಪ್ಪಾ! ನನ್ನನ್ನು ಕ್ಷಮಿಸಿ ಅಪ್ಪಾ! ಬಸ್ಸಿನೊಳಗೆ ಸೋಡಾ ಬಾಟ್ಲಿ ಬಿಸಾಡಿದ ಪಾಪಿ ನಾನು ಅಪ್ಪಾ! ನೀವು ಆ ಬಸ್ಸಿನಲ್ಲಿ ಬರುವಿರೀಂತ. ನಾನು ಊಹಿಸಲಿಲ್ಲ.ಆವೇಶದ ಭರದಲ್ಲಿ ನನ್ನಿಂದ ಅವಿವೇಕ ನಡೆದುಹೋಯಿತು. ನನ್ನನ್ನು ಕ್ಷಮಿಸಿ ಅಪ್ಪಾ! ನನ್ನನ್ನು ಕ್ಷಮಿಸಿ. |
| ಡಾಕ್ಟರ್ | : | ಸ್ವಲ್ಪ ಈಚೆಗೆ ನಿಲ್ಲಿ. ಅವರಿಗೆ ಇನ್ನೂ ಸರಿಯಾಗಿ ಸ್ಮೃತಿಯಾಗಲಿಲ್ಲ. ಈಗ ನೀವು ಎಂತದು ಹೇಳಿದರೂ ಅವರಿಗೆ ತಲೆಗೆ ಹೋಗಲಿಕ್ಕಿಲ್ಲ. ಅವರಿಗೆ ಸ್ವಲ್ಪ ವಿಶ್ರಾಂತಿ ಕೊಡಿ. ಅವರೀಗ ಅರೆ ನಿದ್ರೆಯ ಸ್ಥಿತಿಯಲ್ಲಿದ್ದಾರೆ. |
| ಸುರೇಶ | : | (ಅಲ್ಲಿಂದ ಮುಂದೆ ಬಂದು ತಲೆಗೆ ಕೈಯಿರಿಸಿ ಅಳುವನು) |
| ಡಾಕ್ಟರು | : | (ಸುರೇಶನ ಹತ್ತಿರ ಬಂದು) ನೋಡಿ ,ಈ ಬೆಡ್ಡುಗಳಲ್ಲಿ ಮಲಗಿದ ರೋಗಿಗಳೆಲ್ಲ ನಿಮ್ಮ ಕುಪ್ಪಿಚೂರಿಗೆ ಆಹುತಿಯಾದವರು. |
| ಸುರೇಶ | : | ಡಾಕ್ಟರೇ! ಇವರನ್ನೆಲ್ಲ ಒಮ್ಮೆ ಬದುಕಿಸಿಕೊಡಿ ಡಾಕ್ಟ್ರೆ! |
| ನರ್ಸು | : | (ರೋಗಿಯ ಬಳಿಯಿಂದಲೇ) ಸಾರ್! (ಡಾಕ್ಟರರು ಧಾವಿಸುವರು. ಭವಾನಿಯಮ್ಮ, ಸುರೇಶರೂ ಧಾವಿಸುವರು. ಎಲ್ಲರೂ ರೋಗಿಯನ್ನೇ ನೋಡುತ್ತಾ ನಿಂತಿರುವರು) |
| ಭವಾನಿ | : | ಎಂತದಾಯಿತು ಡಾಕ್ಟ್ರೆ? |
| ಡಾಕ್ಟರು | : | ಗಡಿಯಾರದ ಮುಳ್ಳು ನಿಂತಿತು. |
| ಭವಾನಿ | : | ಅಯ್ಯೋ! |
| ಸುರೇಶ | : | ಅಪ್ಪಾ ! (ಎಂದು ತಂದೆಯ ಬಳಿ ಕುಸಿದು ಬೀಳುವನು.) |

*ಮಾನವಕೋಟಿಗೆ ತಂಬಾಕಿನಿಂದಾಗಿರುವ ದುಷ್ಪರಿಣಾಮ ಅಷ್ಟಿಷ್ಟಲ್ಲ. ಅದರ ಜಾಲದಲ್ಲಿ ಸಿಲುಕಿದವರು ಅಷ್ಟು ಸುಲಭವಾಗಿ ಬಿಡಿಸಿಕೊಳ್ಳಲಾರರು. ಧೂಮಪಾನ ಮಾಡುವವರು ಇತರರ ಭಾವನೆಗಳಿಗೆ ಸ್ಪಂದಿಸದಂಥ ಒರಟರಾಗುತ್ತಾರೆ. ಹೃದಯ ಹೀನರಾಗುತ್ತಾರೆ.*

ಗಾಂಧೀಜಿ

## ಲೇಖಕರ ಪರಿಚಯ



ಪು.ವೆಂ.ಪು ಕಾವ್ಯನಾಮದಿಂದ ಪ್ರಸಿದ್ಧರಾದ ಡಾ. ಪುಂಡೂರು ವೆಂಕಟರಾಜ ಪುಣಿಂಚತ್ತಾಯರು ಕಾಸರಗೋಡು ಜಿಲ್ಲೆಯ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾಗಿದ್ದಾರೆ. ಪ್ರಸಿದ್ಧ ಕವಿ, ಸಾಹಿತಿ, ವಿದ್ವಾಂಸ, ಸಂಶೋಧಕ ಮತ್ತು ಯಕ್ಷಗಾನ ಪಂಡಿತರಾಗಿದ್ದ ವೆಂಕಟರಾಜ ಪುಣಿಂಚತ್ತಾಯರು ವೃತ್ತಿಯಿಂದ ಶಿಕ್ಷಕರಾಗಿದ್ದರು. ಯಕ್ಷಗಾನ ಕಲೆಗೂ ಕನ್ನಡ ಸಾಹಿತ್ಯಕ್ಕೂ ತುಳು ಸಂಶೋಧನಾ ಕ್ಷೇತ್ರಕ್ಕೂ ಅಪಾರ ಕೊಡುಗೆಗಳನ್ನು ನೀಡಿರುವ ಶ್ರೀಯುತರು ಕನ್ನಡ, ತುಳು, ಸಂಸ್ಕೃತ ಭಾಷೆಗಳಲ್ಲಾಗಿ ೬೭ ಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ಅವರು ಸಂಶೋಧಿಸಿದ ತುಳು ಗ್ರಂಥಗಳಾದ ಶ್ರೀ ಭಾಗವತೊ, ಕಾವೇರಿ, ದೇವಿ ಮಹಾತ್ಮೆ ,ತುಳು ಮಹಾಭಾರತೊ ಸೇರಿದಂತೆ ಪ್ರಕಟಿತ ,ಅಪ್ರಕಟಿತ ಕೃತಿಗಳೂ ಸೇರಿವೆ. ಸುಭಾಷಿತ ರಸಾಸ್ವಾದ, ರುದ್ರಗೀತೆ, ಸುಭಾಷಿತ ಲಹರಿ, ಪರ್ಜನ್ಯಾಯ ಪ್ರಣಾಯತ, ನನ್ನಜ್ಜನಿಗೊಂದಾನೆಯಿತ್ತು, ಶೈಲೂಷಿ, ಆಲಡೆ, ಮೊದಲಾದವುಗಳು ಅವರ ಕೆಲವು ಕೃತಿಗಳಾಗಿವೆ . ಅಭಿನಂದನ ಪ್ರಶಸ್ತಿ, ಸಂದೇಶ ಮಾಧ್ಯಮ ಪ್ರಶಸ್ತಿ, ಕಯ್ಯಾರ ಪ್ರಶಸ್ತಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಪರಶುರಾಮ ಪ್ರಶಸ್ತಿ, ಉತ್ತಮ ಶಿಕ್ಷಕ ರಾಷ್ಟ್ರಪ್ರಶಸ್ತಿ, ಗೌರವ ಡಾಕ್ಟರೇಟ್ ಪ್ರಶಸ್ತಿಗಳು ಇವರಿಗೆ ಲಭಿಸಿದೆ. ಪುಣಿಂಚತ್ತಾಯರು ತನ್ನ ೭೫ನೇ ವಯಸ್ಸಿನಲ್ಲಿ ಬೆಳ್ಳೂರು ಐತನಡ್ಕದಲ್ಲಿರುವ ಸ್ವಗೃಹದಲ್ಲಿ ನಿಧನರಾದರು.

'ಕುಪ್ಪಿಚೂರು' ನಾಟಕವನ್ನು ಅವರು ಬರೆದ 'ಭದ್ರಗಜ ಮತ್ತಿತರ ನಾಟಕಗಳು' ಕೃತಿಯಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಸುರೇಶನು ಹಾಸ್ಟೆಲ್ ನಲ್ಲಿ ಚಿಂತೆಯಿಂದಿರಲು ಕಾರಣವೇನು?
2. ಗೋಪಾಲನನ್ನು ಆಸ್ಪತ್ರೆಗೆ ಸೇರಿಸಲು ಕಾರಣವೇನು?
3. ಗಾಯಾಳು ಗೋಪಾಲನ ಕುರಿತು ಭವಾನಿಯಲ್ಲಿ ಡಾಕ್ಟರ್ ಏನೆಂದು ಹೇಳಿದರು?
4. ಹಾಸ್ಟೆಲ್ ನಿಂದ ಹೊರಟ ಸುರೇಶನನ್ನು ಗೆಳೆಯರು ತಡೆಯಲು ಕಾರಣವೇನು?
5. ಸುರೇಶನು ಆಸ್ಪತ್ರೆಗೆ ಬಂದಾಗ ಅಲ್ಲಿನ ಸನ್ನಿವೇಶ ಹೇಗಿತ್ತು?

## ಕರಪತ್ರ ರಚಿಸಿರಿ

ನಾವು ಎಲ್ಲರೂ ಸೇರಿ ಬಸ್ಸನ್ನು ಲೂಟಿ ಮಾಡಬೇಕು.

ಸೋಡಾ ಬಾಟಲ್ ಒಡೆದ ಶಬ್ದ.......................................

'ಕುಪ್ಪಿಚೂರು' ನಾಟಕದಲ್ಲಿ ಬಂದಿರುವ ಈ ಸಾಲುಗಳ ಆಧಾರದಲ್ಲಿ ಸಾರ್ವಜನಿಕ ಸೊತ್ತುಗಳ ರಕ್ಷಣೆಯ ಮಹತ್ವವನ್ನು ಮನವರಿಕೆ ಮಾಡಿಸಲು ಕರಪತ್ರವನ್ನು ರಚಿಸಿರಿ.

## ಕಥಾರೂಪಕ್ಕೆ ಪರಿವರ್ತಿಸಿರಿ

ಕುಪ್ಪಿಚೂರು ಸಾಮಾಜಿಕ ನಾಟಕವನ್ನು ಕಥಾರೂಪದಲ್ಲಿ ಬರೆಯಿರಿ.

## ಭಿತ್ತಿಪತ್ರ ರಚಿಸಿರಿ

ನಿಮ್ಮ ಶಾಲೆಯಲ್ಲಿ ಪ್ರದರ್ಶನಗೊಳ್ಳಲಿರುವ ಕುಪ್ಪಿಚೂರು ನಾಟಕದ ಪ್ರಚಾರಕ್ಕಾಗಿ ಒಂದು ಭಿತ್ತಿ ಪತ್ರ ರಚಿಸಿರಿ.

## ಪ್ರಶ್ನೆ ತಯಾರಿಸಿರಿ

ಕೆಳಗೆ ನೀಡಲಾದ ಗದ್ಯ ಭಾಗವನ್ನು ಓದಿ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

ಬಂದ್‌ನ ದಿನ ಸಾರ್ವಜನಿಕ ಸೇವಾ ಸಂಸ್ಥೆಗಳು, ಸಾರಿಗೆ ವ್ಯವಸ್ಥೆಗಳು ಸ್ಥಗಿತಗೊಳ್ಳುವುದರಿಂದ ಸಾಮಾನ್ಯ ನಾಗರಿಕರು ತಮ್ಮ ಅನಿವಾರ್ಯ ಅವಶ್ಯಕತೆಗಳಿದ್ದರೂ ಪೂರೈಯಿಸಿಕೊಳ್ಳುವ ಹಾಗಿಲ್ಲ. ತುರ್ತು ಚಿಕಿತ್ಸೆ ಅಗತ್ಯವುಳ್ಳ ರೋಗಿಗಳನ್ನು ಆಸ್ಪತ್ರೆಗೆ ಕೊಂಡುಹೋಗಲು ಸಾಧ್ಯವಾಗದಿರುವುದು, ಅವಶ್ಯ ಔಷಧಿಗಳು ಲಭ್ಯವಿಲ್ಲದಿರುವುದು, ಅನಿವಾರ್ಯವಾಗಿ ಕೈಗೊಳ್ಳಬೇಕಾದ ಪ್ರಯಾಣ ಸಾಧ್ಯವಾಗದಿರುವುದು, ಜೀವನಾವಶ್ಯಕ ವಸ್ತುಗಳು ದೊರಕದಿರುವುದು ಇತ್ಯಾದಿ ತೊಂದರೆಗಳಿವೆ.(ಕೆಲವೊಮ್ಮೆ ತುರ್ತು ಸೇವೆಗಳಾದ ಆಸ್ಪತ್ರೆ ,ಔಷಧದ ಅಂಗಡಿ, ಹಾಲಿನ ಸರಬರಾಜು ,ವಾರ್ತಾ ಪತ್ರಿಕೆ ಮುಂತಾದವುಗಳಿಗೆ ಬಂದ್ ನಿಂದ ವಿನಾಯಿತಿ ಕೊಡುವುದಿದೆ). ಶಾಲಾ ಮಕ್ಕಳಿಗೆ ಶಾಲೆಗಳಿಲ್ಲ. ದಿನಗೂಲಿಗಳಿಗೆ ಆ ದಿನದ ಸಂಪಾದನೆ ಇಲ್ಲ. ಸಣ್ಣಪುಟ್ಟ ಬೀದಿ ವ್ಯಾಪಾರ ಮಾಡಿ ಜೀವಿಸುವವರಿಗೆ ದಿನದ ಸಂಪಾದನೆಯಿಲ್ಲ. ಕಾರ್ಖಾನೆಯ ಕಾರ್ಯಗಳು, ಕುಶಲಕರ್ಮಿಗಳ ಕೆಲಸಗಳು ಸ್ಥಗಿತಗೊಳ್ಳುವುದರಿಂದ ಎಷ್ಟೋ ಉತ್ಪಾದನೆ ನಷ್ಟ. ಮೇಲಾಗಿ ಸಾರ್ವಜನಿಕ ಸ್ವತ್ತುಗಳಾದ ವಾಹನಗಳಿಗೆ

ಬೆಂಕಿ ಹಚ್ಚುವುದು, ಕಛೇರಿಗಳಿಗೆ ಹಾನಿ ಮಾಡುವುದು, ಮರಗಳನ್ನು ಕೆಡವಿ ರಸ್ತೆ ತಡೆಗಳನ್ನು ನಿರ್ಮಿಸುವುದು ಇತ್ಯಾದಿಗಳಿಂದ ಜನರ ತೆರಿಗೆಯ ಹಣದಿಂದಲೇ ನಿರ್ಮಾಣವಾದ ಸೊತ್ತುಗಳ ನಾಶದಿಂದ ದೇಶಕ್ಕೆ ಅಪಾರ ನಷ್ಟ ಉಂಟಾಗುತ್ತದೆ.

## ಪ್ರಬಂಧ ಬರೆಯಿರಿ

'ಸುರೇಶನು ಸಿಗರೇಟ್ ಸೇದುತ್ತಾ ಆಲೋಚನಾ ಮಗ್ನನಾಗಿ ಕುಳಿತಿದ್ದಾನೆ' ನಾಟಕದಲ್ಲಿ ಬಂದಿರುವ ಈ ವಾಕ್ಯವು ಯುವಜನಾಂಗದಲ್ಲಿರುವ ತಂಬಾಕಿನಂತಹ ಅಮಲು ಪದಾರ್ಥದ ಸೇವನೆಯ ಚಟವನ್ನು ತಿಳಿಸುತ್ತದೆ.ಅಮಲು ಪದಾರ್ಥದ ಸೇವನೆಯಿಂದ ಸಮಾಜದ ಸ್ವಾಸ್ಥ್ಯಕ್ಕೆ ಆತಂಕವೊಡ್ಡುವ ಸಾಕಷ್ಟು ಘಟನೆಗಳು ನಮ್ಮ ಸುತ್ತಮುತ್ತಲು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ 'ಮಾದಕ ದ್ರವ್ಯ ಮುಕ್ತ ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಯುವಜನತೆಯ ಪಾತ್ರ' ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

## ಅಭಿನಯಿಸಿರಿ

ಕುಪ್ಪಿಚೂರು ನಾಟಕವನ್ನು ಅಭಿನಯಿಸಿರಿ. ಅದನ್ನು ಚಿತ್ರೀಕರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

* * *

# ಜಾಲತಾಣದ ಮೋಹಜಾಲಗಳು

**ವಿಕ್ರಮ್ ಜೋಶಿ**



ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯಾ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದೊಡೆಂತಯ್ಯಾ?
ಸಂತೆಯೊಳಗೊಂದು ಮನೆಯಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯಾ

ವಚನಕಾರ್ತಿ ಅಕ್ಕಮಹಾದೇವಿಯವರ ವಚನದ ಈ ಮೇಲಿನ ಸಾಲುಗಳಂತೆ 'ಮೊಬೈಲ್ ಮತ್ತು ಕಂಪ್ಯೂಟರ್ ಬಳಸುವವರು ಸೈಬರ್ ವಂಚನೆಯ ಬಗ್ಗೆ ಹೆದರಿದರೆ ಹೇಗಯ್ಯಾ?' ಎಂದು ಕೇಳಬೇಕಾಗುತ್ತದೆ. ನಾವು ಚಾಪೆಯ ಕೆಳಗೆ ತೂರಿಕೊಂಡರೆ ಸೈಬರ್ ವಂಚಕರು ರಂಗೋಲಿಯ ಕೆಳಗೆ ನುಸುಳುವ ಕೌಶಲ್ಯವನ್ನು ಹೊಂದಿರುತ್ತಾರೆ. ಹಾಗಾಗಿ ಈ ಬಗ್ಗೆ ನಾವು ಎಷ್ಟು ಎಚ್ಚರದಿಂದಿದ್ದರೂ ಸಾಲದು.

ನಮ್ಮ ದೇಶವು ಮೊಬೈಲ್ ತಯಾರಿಕೆಯ ಸ್ಪರ್ಧೆಯಲ್ಲಿ ಎರಡನೆಯ ಸ್ಥಾನದಲ್ಲಿದೆ. ಡಾಟಾ ಬಳಕೆಯಲ್ಲಿ ಮೊದಲ ಸ್ಥಾನವನ್ನು ಹೊಂದಿದೆ. ಹಾಗಾಗಿಯೇ ಭಾರತವು ಸೈಬರ್ ಅಪರಾಧದ ಮುಖ್ಯ ಕೇಂದ್ರವಾಗಿದೆ. 'ಸೈಬರ್ ವಂಚನೆ' ಯೆಂಬುದು ಹತ್ತು ತಲೆಯ ರಾವಣ. ಕಂಪ್ಯೂಟರ್, ಮೊಬೈಲ್, ಟ್ಯಾಬ್ಲೆಟ್ ಹೀಗೆ ಸಂವಹನಶೀಲ ವಿದ್ಯುನ್ಮಾನ ಸಾಧನಗಳನ್ನು ಬಳಸಿ ವ್ಯಕ್ತಿಯ, ಸಂಸ್ಥೆಯ ಹಾಗೂ ದೇಶದ ಮಾನಹಾನಿ ಮಾಡುತ್ತಾರೆ. ಆಧುನಿಕ ವಿದ್ಯುನ್ಮಾನ

ಉಪಕರಣಗಳನ್ನು ಬಳಸಿ ಹಣಕಾಸಿನ ವಂಚನೆ, ಆಸ್ತಿಯ ಕಳ್ಳತನ, ಕೊಲೆ, ಸುಲಿಗೆ ಮಾಡುವುದನ್ನು ಸೈಬರ್ ಅಪರಾಧ ಎನ್ನಬಹುದು. ಈ ಅಪರಾಧದಲ್ಲಿ ಹಣಕಾಸಿನ ವಂಚನೆಯದ್ದೇ ಸಿಂಹಪಾಲು. ಸೈಬರ್ ವಂಚನೆಯ ಕುರಿತ ಜಾಗೃತಿ ನಮ್ಮಲ್ಲಿರಬೇಕಾದುದು ಇಂದು ಅತಿ ಅಗತ್ಯವಾಗಿದೆ.

ಭಾರತವು ಡಿಜಿಟಲ್ ಹಣದ ವ್ಯವಹಾರದಲ್ಲಿ ಜಗತ್ತಿನಲ್ಲಿಯೇ ಮೊದಲ ಸ್ಥಾನದಲ್ಲಿದೆ. ಸಂಪಿಗೆ ಮರದ ಬುಡದಲ್ಲಿಯೇ ನಾಗರ ಹಾವಿನ ವಾಸ್ತವ್ಯವಿರುವಂತೆ ಆನ್ ಲೈನ್ ಮೂಲಕ ನಡೆಯುವ ಹಣದ ವ್ಯವಹಾರದಲ್ಲಿಯೇ ಹಣಕಾಸಿಗೆ ಸಬಂಧಿಸಿದ ಸೈಬರ್ ಕ್ರೈಮ್ ಗಳು ನಡೆಯುತ್ತವೆ. ಇಂದು ನಡೆಯುವ ಸೈಬರ್ ಕ್ರೈಮ್ ನಲ್ಲಿ 77% ಭಾಗ ಆನ್ ಲೈನ್ ವ್ಯವಹಾರಗಳಲ್ಲಿ ನಡೆಯುವ ಹಣಕಾಸಿನ ವಂಚನೆಯಾಗಿದೆ.

ಆನ್ ಲೈನ್ ಆಟ ಹಾಗೂ ಜೂಜಾಟದ ಮೂಲಕವೂ ಅನೇಕ ಅಮಾಯಕರು ತಮ್ಮ ಹಣವನ್ನು ಕಳೆದುಕೊಳ್ಳುತ್ತಿದ್ದಾರೆ. ಮೊಬೈಲ್ ಗಳಲ್ಲಿ ಹಲವಾರು ಬಗೆಯ ಆನ್ ಲೈನ್ ಆಟಗಳ ಆ್ಯಪ್ ಗಳಿದ್ದು ಜನರ ಕಿಸೆಗಳಿಗೆ ಇದು ಕತ್ತರಿಯಾಗಿದೆ.

ಗೆಲುವೆ ನಾನಂಜದಿರು ಪಾಂಡವ
ರಳವಳವ ನಾನರಿವೆ ನೃಪನ
ಗ್ಗಳದ ಧರ್ಮಜ್ಞನು ವಿಶೇಷ ದ್ಯೂತಲೋಲುಪನು
ಗೆಲುವ ಮೋಡಿಯನರಿಯನಾತನ
ನೆಲೆಯ ಬಲ್ಲೆನು ಜೂಜುಗಾರರ
ಕುಲಶಿರೋಮಣಿ ತಾನೆಯೆಂದನು ಶಕುನಿ ಕೌರವಗೆ

ಕುಮಾರವ್ಯಾಸ ಭಾರತದ ಸಭಾ ಪರ್ವದಲ್ಲಿ ಬರುವ ಈ ಮಾತನ್ನು ಶಕುನಿಯು ಕೌರವನಲ್ಲಿ ಹೇಳುತ್ತಾನೆ. ಮಹಾಭಾರತದಲ್ಲಿ ಹಲವಾರು ತಿರುವುಗಳಿವೆ. ಶಕುನಿ ಹೆಣೆದ ಕುತಂತ್ರದ ಜೂಜಾಟವು ಅದರಲ್ಲೊಂದು. ಧರ್ಮಜ್ಞನೂ ಧರ್ಮರಕ್ಷಕನೂ ಜ್ಞಾನಿಯೂ ಆಗಿರುವ ಧರ್ಮರಾಯನು ಜೂಜಾಟದ ಮೇಲಿನ ಅತಿ ಪ್ರೀತಿಯಿಂದ ಜೂಜಾಟದ ಕುಲಶಿರೋಮಣಿಯಾದ ಶಕುನಿಯ ಜೊತೆ ಜೂಜಾಡಿ ಸರ್ವಸ್ವವನ್ನು ಕಳೆದುಕೊಳ್ಳುತ್ತಾನೆ. ಅವನಿಂದಾಗಿ ಪಾಂಡವರೆಲ್ಲರೂ ವನವಾಸದ ಕಷ್ಟಗಳನ್ನು ಅನುಭವಿಸಬೇಕಾಯಿತು.

ಜೂಜು ಪಾಂಡವರ ಬದುಕನ್ನು ದಿಕ್ಕಾಪಾಲುಮಾಡಿದಂತೆ ಇಂದು ಆನ್ ಲೈನ್ ಜೂಜು ಲಕ್ಷಾಂತರ ಸಂಸಾರವನ್ನು ಬೀದಿಗೆ ತರುತ್ತಿವೆ. ಮಕ್ಕಳು ಓದಿನಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಯುವಕರು ಸಾಲ ಮಾಡಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಮಹಿಳೆಯರು ಈ ಚಕ್ರವ್ಯೂಹಕ್ಕೆ ಸಿಕ್ಕಿ ಹೊರಬರಲಾಗದೆ ಚಿತ್ರಹಿಂಸೆ ಅನುಭವಿಸುತ್ತಿದ್ದಾರೆ. 'ಬ್ಲೂ ವೇಲ್' ನಂತಹ ಅನ್ ಲೈನ್ ಆಟಗಳಿಗೆ ಮಕ್ಕಳು ಬಲಿಪಶುವಾದ ಸುದ್ದಿಗಳು ಬರುತ್ತಿವೆ. ಇದು ಹೀಗೆಯೇ ಮುಂದುವರಿದರೆ ಸಮಾಜಕ್ಕೆ ಇದೊಂದು ಹುಲಿಯ ಹುಣ್ಣಾಗದೆ ಇರುವುದರಲ್ಲಿ ಸಂಶಯವಿಲ್ಲ.

ಮಕ್ಕಳ ವಿಷಯದಲ್ಲಿ ಸಾಮಾಜಿಕ ಜಾಲತಾಣದ ಪ್ರಯೋಜನ ಕಿಂಚಿತ್, ದುಷ್ಪರಿಣಾಮವು ಅತಿ ಹೆಚ್ಚು. ವಿದ್ಯುನ್ಮಾನ ಉಪಕರಣಗಳ (ಗ್ಯಾಜೆಟ್) ಉಪಯೋಗದಿಂದ ಮಕ್ಕಳ ಬುದ್ಧಿಮಾಂದ್ಯತೆ ಹೆಚ್ಚುತ್ತದೆ. ಭಾರತದಲ್ಲಿ ಶೇಕಡ 50 ರಷ್ಟು ಮಕ್ಕಳು ದಿನದಲ್ಲಿ ಮೂರು ಗಂಟೆಗಿಂತಲೂ ಹೆಚ್ಚು ಕಾಲ ಮೊಬೈಲ್ ಗೇಮ್, ಇನ್ ಸ್ಟಾಗ್ರಾಂ ನಂತಹ ಜಾಲತಾಣಗಳಲ್ಲಿ ಮೈಮರೆತಿರುತ್ತಾರೆ. ಇದರ ಪರಿಣಾಮವಾಗಿ ಮಕ್ಕಳು ಸೈಬರ್ ಕಿರುಕುಳಕ್ಕೆ ತುತ್ತಾಗುತ್ತಿರುವ ಪ್ರಮಾಣವು ಹೆಚ್ಚುತ್ತಿದೆ. ಸೈಬರ್ ಬುಲ್ಲಿಂಗ್ ಅಂದರೆ ಸೈಬರ್ ಬೆದರಿಕೆ ಅಥವಾ ಸೈಬರ್ ಕಿರುಕುಳವು ಇಂದು ಮಕ್ಕಳು ಎದುರಿಸುತ್ತಿರುವ ಅತಿ ಗಂಭೀರವಾದ ಸಮಸ್ಯೆಯಾಗಿದೆ. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯನ್ನು ಉದ್ದೇಶಪೂರ್ವಕವಾಗಿ ವಿದ್ಯುನ್ಮಾನದ ಅಂದರೆ ಮೊಬೈಲ್ ಕರೆ, ಸಂದೇಶ, ಸಾಮಾಜಿಕ ಜಾಲತಾಣ, ಇ-ಮೇಲ್ ಇತ್ಯಾದಿಗಳ ಮೂಲಕ ಸತತವಾಗಿ ಬೆದರಿಕೆ ಒಡ್ಡುವುದನ್ನು, ಮಾನಸಿಕ ಹಿಂಸೆ ಕೊಡುವುದನ್ನು ಸೈಬರ್ ಕಿರುಕುಳ ಅಥವಾ ಸೈಬರ್ ಬೆದರಿಕೆ ಎನ್ನಬಹುದು. ಸೈಬರ್ ಕಿರುಕುಳದಿಂದಾಗಿ ಮಕ್ಕಳು ಮಂಕಾಗುತ್ತಾರೆ. ಅವರಲ್ಲಿ ವಿದ್ಯಾಭ್ಯಾಸದ ಅಭಿರುಚಿ ಕುಂದುತ್ತದೆ. ಶಾಲೆಗೆ ಅಥವಾ ಸಾರ್ವಜನಿಕ ಸ್ಥಳಗಳಿಗೆ ಹೋಗಲು ಭಯಪಡುತ್ತಾರೆ. ಇದಕ್ಕೆಲ್ಲಾ ಮೂಲ ಕಾರಣ ಮೊಬೈಲ್ ಸಾಧನದ ಅತಿಯಾದ ಬಳಕೆ. ಈಗ ಮಕ್ಕಳು ನೈಜ ಪ್ರಪಂಚದೊಳಗೆ ಬದುಕುವುದಕ್ಕಿಂತ ಹೆಚ್ಚು ಕಾಲ ಮೊಬೈಲ್‌ನ ಭ್ರಮಾಲೋಕದಲ್ಲಿ ಇರುವ ಅಭ್ಯಾಸ ಮಾಡಿಕೊಂಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಮಾಹಿತಿಗಳಿವೆ. ಕಲಿಕೆಗೆ ಬೇಕಾದ ಸಾಕಷ್ಟು ಪಠ್ಯಪುಸ್ತಕಗಳಿವೆ. ಎಲ್ಲಾಸರಿ, ಆದರೆ ಅದರಿಂದ ಆಗುವ ದುಷ್ಪರಿಣಾಮಗಳ ಪ್ರತಿಯೊಬ್ಬರಿಗೂ ಅರಿವು ಇರಬೇಕು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ಹತ್ತು ಹಲವು ಬೇಡವಾದ ವಿಷಯಗಳು ಮಕ್ಕಳಲ್ಲಿ ಓದಲು ಬೇಕಾದ ಏಕಾಗ್ರತೆಯನ್ನು ಕಡಿಮೆ ಮಾಡುತ್ತವೆ. ಗಿಡವನ್ನು ನೆಟ್ಟು ಬೆಳೆಸುವುದು ಸುಲಭವೇ? ದಿನವೂ ನೀರುಣಿಸಬೇಕು, ಜಾನುವಾರುಗಳು ಬಂದು ಮೇಯದಂತೆ ಕಾಪಾಡಬೇಕು. ಮಕ್ಕಳನ್ನು ಸಾಕುವುದು ಹೀಗೆಯೇ ಅಲ್ಲವೇ? ಮೊಬೈಲನ್ನು ಮಕ್ಕಳಿಗೆ ಕೊಡುವುದು ಅಂದರೆ ಹೆತ್ತತಾಯಿಯೇ ತನ್ನ ಶಿಶುವಿಗೆ ಕೈಯಾರೆ ವಿಷವನ್ನು ಉಣಿಸಿದಂತೆ. ನಮಗೆ ಗೊತ್ತಿಲ್ಲದ ಹಾಗೆ ಅಗೋಚರ ಅಸುರರು ಬಂದು ಮಗುವಿನ ಸೃಜನಶೀಲತೆಯನ್ನು ಕೊಂದು ವಿಚಾರವೆಂಬ ರಕ್ತವನ್ನು ಕುಡಿದುಹೋಗುತ್ತಾರೆ. ಪಾಲಕರು ಸ್ವಲ್ಪ ಎಡವಿದರೂ ಮುಂದಿನ ಜಗತ್ತು ಮೂರ್ಖರು ಅಲೆದಾಡುವ ನೆಲವಾಗುತ್ತದೆ.

## ಲೇಖಕರ ಪರಿಚಯ



ವಿಕ್ರಮ ಜೋಶಿಯವರು ಮೂಲತಃ ಉತ್ತರ ಕನ್ನಡದವರು. ಪ್ರಾಥಮಿಕ, ಪ್ರೌಢ ಹಾಗೂ ಪದವಿ- ಪೂರ್ವ ಶಿಕ್ಷಣವನ್ನು ಹುಟ್ಟಿದೂರಿನಲ್ಲಿಯೇ ಪಡೆದ ಶ್ರೀಯುತರು ಉನ್ನತ ಶಿಕ್ಷಣವನ್ನು ಹುಬ್ಬಳ್ಳಿಯ ಪ್ರಸಿದ್ಧ ಬಿ.ವಿ. ಭೂಮರೆಡ್ಡಿ ಅಭಿಯಾಂತ್ರಿಕ ಕಾಲೇಜಿನಲ್ಲಿ ಮುಂದುವರಿಸಿದರು. ಕೆಲವು ವರ್ಷಗಳ ಕಾಲ ಉದ್ಯೋಗ ಮಾಡಿ, ಬಹುರಾಷ್ಟ್ರೀಯ ಕಂಪನಿಗಳಲ್ಲಿ ಅನುಭವ ಪಡೆದು, ಅಮೇರಿಕಾದ ಯುನಿವರ್ಸಿಟಿ ಆಫ್ ಮಿಷಿಗನ್ನಲ್ಲಿ ವ್ಯಾಸಂಗ ಮಾಡಿ ಸ್ನಾತಕೋತ್ತರ ಪದವಿಯನ್ನೂ ಗಳಿಸಿದರು.

ಭಾರತದ ಹಲವಾರು ನಗರಗಳಲ್ಲಿ ಹಾಗೂ ವಿದೇಶದ ಬೇರೆ ಬೇರೆ ಪಟ್ಟಣಗಳಲ್ಲಿ ಕೆಲಸ ನಿರ್ವಹಿಸಿದ ಅನುಭವ ಇರುವ ಇವರು ಪ್ರಸ್ತುತ ಮುಂಬಯಿಯಲ್ಲಿ ನೆಲೆಸಿದ್ದಾರೆ. ತಂತ್ರಜ್ಞಾನ, ವಿಜ್ಞಾನ, ಅಂತರಾಷ್ಟ್ರೀಯ ವಿದ್ಯಮಾನ, ವ್ಯಕ್ತಿತ್ವ ವಿಕಸನ, ಮತ್ತು ಆರ್ಥಿಕತೆಯ ಕುರಿತು ನಾಡಿನ ಹಲವಾರು ದಿನಪತ್ರಿಕೆ, ವಾರಪತ್ರಿಕೆ ಹಾಗೂ ಮಾಸಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದಾರೆ. 'ಐ ಲವ್ ಸೋಮವಾರ' ಇವರ ಚೊಚ್ಚಲ ಕೃತಿ. 'ಜಾಲತಾಣದ ಮೋಹಜಾಲಗಳು' ಎಂಬ ಪಾಠವನ್ನು ಅವರ 'ಸೈಬರ್ ವಂಚನೆ - ಅಂತರಜಾಲದ ಕರಾಳಮುಖ' ಎಂಬ ಕೃತಿಯಿಂದ ಆರಿಸಲಾಗಿದೆ.

## ವಿಶದೀಕರಣ

**ಹುಲಿಯ ಹುಣ್ಣು :** ಸುಲಭವಾಗಿ ವಾಸಿಯಾಗದ ಹುಣ್ಣು, ಮಾಯದ ಗಾಯ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1 ಸೈಬರ್ ಅಪರಾಧ ಎಂದರೇನು?

2. ಆನ್ ಲೈನ್ ಜೂಜಾಟದಿಂದ ಉಂಟಾಗುವ ವಿಪತ್ತುಗಳೇನು?

3. ಸೈಬರ್ ಕಿರುಕುಳ ಎಂದರೇನು?

4. ಸೈಬರ್ ಕಿರುಕುಳವು ಮಕ್ಕಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ?

## ಪತ್ರಿಕಾ ವರದಿ ತಯಾರಿಸಿರಿ

ನಿಮ್ಮ ಶಾಲೆಯ ಸೇಫ್ಟಿ ಕ್ಲಬ್ (ಸುರಕ್ಷಾ ಕ್ಲಬ್) ನ ಆಶ್ರಯದಲ್ಲಿ ನಡೆದ 'ಸೈಬರ್ ಸುರಕ್ಷಾ ಜಾಗೃತಿ' ಕಾರ್ಯಕ್ರಮದ ಕುರಿತು ಪತ್ರಿಕಾ ವರದಿಯನ್ನು ತಯಾರಿಸಿರಿ.

## ಸಂದರ್ಶನ ಲೇಖನ ತಯಾರಿಸಿರಿ

ನಿಮ್ಮ ಶಾಲೆಯ ಐ.ಟಿ. ಕೋರ್ಡಿನೇಟರ್‌ರವರನ್ನು ಸಂದರ್ಶಿಸಿ 'ಮೊಬೈಲ್ ಬಳಕೆಯು ಜನ ಜೀವನದ ಮೇಲೆ ಬೀರುವ ಪರಿಣಾಮಗಳು' ಎಂಬ ವಿಷಯದ ಕುರಿತು ಮಾಹಿತಿ ಸಂಗ್ರಹಿಸಿ ಸಂದರ್ಶನ ಲೇಖನ ತಯಾರಿಸಿರಿ.

**ಲಭಿಸಬೇಕಾದ ಮಾಹಿತಿಗಳು (ಒಳಿತು - ಕೆಡುಕುಗಳು)**

ಸುಲಭ ಸಂಪರ್ಕ

ಬಹುಪಯೋಗ

........

ವಂಚನೆಗಳು

ಆರೋಗ್ಯ ಸಮಸ್ಯೆ

## ಸಂಕ್ಷೇಪಿಸಿ ಬರೆಯಿರಿ

ಕೆಳಗೆ ನೀಡಲಾದ ಗದ್ಯಭಾಗವನ್ನು ಸಂಕ್ಷೇಪಿಸಿ ಬರೆಯಿರಿ.

ಸ್ಟೀವ್ ಜಾಬ್ ತಮ್ಮ ಮಕ್ಕಳ ಕೈಗೆ ಐಪ್ಯಾಡ್ ಕೊಡುತ್ತಿರಲಿಲ್ಲ! ಐಪ್ಯಾಡ್, ಐಫೋನ್ ಸೃಷ್ಟಿಸಿದ ಬ್ರಹ್ಮ ಸ್ಟೀವ್ ಜಾಬ್, ಅವರೇ ಅದನ್ನು ತಮ್ಮ ಮಕ್ಕಳಿಂದ ದೂರ ಇಟ್ಟಿದ್ದರು ಎನ್ನುವುದು ಸೋಜಿಗ. ಐಪ್ಯಾಡ್, ಐಫೋನ್ ನಂತಹ ಇಲೆಕ್ಟ್ರಾನಿಕ್ ಸಾಧನಗಳು ಮಕ್ಕಳಿಗೆ ಮಾರಕ ಚಟವಾಗಿ ಪರಿಣಮಿಸಿ ಅವರ ಭವಿಷ್ಯವನ್ನು ಹಾಳುಮಾಡುತ್ತವೆ ಎಂದು ಅರಿತಿದ್ದ ದೂರದರ್ಶಿ, ಉದ್ಯಮಿ ಸ್ಟೀವ್ ಜಾಬ್ ಅವುಗಳನ್ನು ಮಕ್ಕಳಿಂದ ದೂರ ಇಟ್ಟಿದ್ದರು. ಕಂಪ್ಯೂಟರ್ ಜಗತ್ತಿನ ಪಿತಾಮಹ ಬಿಲ್ ಗೇಟ್ಸ್, ಒಂದು ದಿನ ಅವರಿಗೆ ತಮ್ಮ ಮಗಳು ವಿಡಿಯೋ ಗೇಮ್ ಚಟಕ್ಕೆ ಬಲಿಯಾಗಿರುವುದು ಗೊತ್ತಾಗುತ್ತದೆ. ಹೀಗೆಯೇ ಮುಂದುವರಿದರೆ ಮಗಳು ವಿಡಿಯೋ ಗೇಮ್ ಮಾಯೆಗೆ ಅಂಟಿಕೊಂಡು ಬಿಡುತ್ತಾಳೆ ಎಂದು ಪರದೆ ಸಮಯಕ್ಕೆ (ಸ್ಕ್ರೀನ್ ಟೈಮ್) ಮಿತಿ ಹೇರುತ್ತಾರೆ. ಯಾವ ಮಗುವಿನ ಸ್ಕ್ರೀನ್ ಟೈಮ್ ಮೂರು

ತಾಸಿಗೂ ಹೆಚ್ಚಿರುತ್ತದೆಯೋ ಆ ಮಗುವಿನೊಳಗೆ ಆತ್ಮಹತ್ಯೆ ಮನೋಭಾವ ಹೆಚ್ಚಾಗುತ್ತದೆ ಎಂದು ಅಮೇರಿಕಾದ ಸಂಸ್ಥೆಯೊಂದು ಹೇಳಿದೆ. ಬಿಲ್ ಗೇಟ್ಸ್ ವಿಚಾರಕ್ಕೆ ಮರಳಿ ಬಂದರೆ ಅವರ ಪ್ರಕಾರ ಮಕ್ಕಳಿಗೆ ಹದಿನಾಲ್ಕು ವರ್ಷ ಆಗುವ ತನಕ ಮೊಬೈಲ್ ಕೊಡಲೇಬಾರದು. ಆದರೆ ಇಂದು ಮಕ್ಕಳ ಕೈಗೆ ಅವರದ್ದೇ ಮೊಬೈಲ್ ಸಿಗುವ ಸರಾಸರಿ ವಯಸ್ಸು ಎಷ್ಟು ಗೊತ್ತಾ? ಕೇವಲ ಹತ್ತು ವರ್ಷ. ಹದಿನಾಲ್ಕಲ್ಲ, ಬಿಲ್ ಗೇಟ್ಸ್ ಅವರ ಪ್ರಕಾರ ವಿದ್ಯಾಭ್ಯಾಸ ಆಗುವ ತನಕ ಮಕ್ಕಳಿಗೆ ಮೊಬೈಲ್ ಖರೀದಿ ಮಾಡಿಕೊಡಬಾರದು.

## ಸಂವಾದಿ ಪದಗಳನ್ನು ಬರೆಯಿರಿ

ಮಾದರಿ :

ಕಂಪ್ಯೂಟರ್ - ಗಣಕಯಂತ್ರ

ಪ್ರೈವೇಟ್ - ಖಾಸಗಿ

ಈ ಮೇಲೆ ನೀಡಲಾದ ಮಾದರಿಯಂತೆ ಈ ಘಟಕದಲ್ಲಿ ಬಂದಿರುವ ಆಂಗ್ಲ ಪದಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬರೆಯಿರಿ.

* * *

# 2. ಭೂಮಿಗೀತ

ಮನುಷ್ಯ ಪ್ರಕೃತಿಯ ಕೂಸು. ತನ್ನ ಬುದ್ಧಿ ಕೌಶಲ್ಯದಿಂದ ವಿವೇಚನಾಶಕ್ತಿಯಿಂದ ಅವನು ಪ್ರಕೃತಿಯನ್ನು ನಿಯಂತ್ರಿಸಲು, ಪ್ರಕೃತಿಯ ನಿಗೂಢತೆಯನ್ನು ಭೇದಿಸಲು ಪ್ರಯತ್ನಿಸಿದನು. ಅನೇಕ ಅದ್ಭುತಗಳನ್ನು ಸಾಧಿಸಲು ಮಾನವನಿಂದ ಸಾಧ್ಯವಾಯಿತು. ಮಾನವನ ಬುದ್ಧಿಶಕ್ತಿಗೂ ವಿವೇಚನೆಗೂ ಮೀರಿದ ಅನೇಕ ವಿದ್ಯಮಾನಗಳು ಪ್ರಕೃತಿಯಲ್ಲಿ ದಿನನಿತ್ಯವೂ ನಡೆಯುತ್ತಲೇ ಇವೆ. ಹವಾಮಾನ ವೈಪರೀತ್ಯವು ಇವುಗಳಲ್ಲೊಂದಾಗಿದೆ.

ಮಾನವನು ಪ್ರಕೃತಿಯ ಮೇಲೆ ಮಾಡುತ್ತಿರುವ ದೌರ್ಜನ್ಯವು ಇದಕ್ಕೆ ಪ್ರಧಾನ ಕಾರಣವಾಗಿದೆ. ಅರಣ್ಯನಾಶ, ನಗರೀಕರಣ, ಅವೈಜ್ಞಾನಿಕ ನಿರ್ಮಾಣಗಳು, ಹೆಚ್ಚುತ್ತಿರುವ ಮಾಲಿನ್ಯಗಳು ಇವೆಲ್ಲ ಭೂಮಿಯ ಮೇಲಿನ ಬದುಕನ್ನು ದುರಂತಮಯವಾಗಿಸುತ್ತಿವೆ. ಪ್ರಕೃತಿಯ ಮೇಲಿನ ಶೋಷಣೆಯನ್ನು ಕಡಿಮೆ ಮಾಡುವುದರ ಮೂಲಕ, ವೈಜ್ಞಾನಿಕ ಉಪಕರಣಗಳ ಸಹಾಯದಿಂದ ದುರಂತಗಳನ್ನು ಮೊದಲೇ ಅರಿತು ಆ ಸ್ಥಳದಿಂದ ದೂರ ಸರಿಯುವುದರ ಮೂಲಕ ಹವಾಮಾನ ವೈಪರೀತ್ಯದಿಂದುಂಟಾಗುವ ಜೀವ ಹಾನಿಯನ್ನು ತಕ್ಕಮಟ್ಟಿಗೆ ತಡೆಯಬಹುದು.

ಪ್ರಕೃತಿ ವಿಕೋಪ, ಮನುಷ್ಯ ನಿರ್ಮಿತ ದುರಂತಗಳು ಮತ್ತು ಪ್ರಕೃತಿ ವಿಕೋಪ ನಿರ್ವಹಣೆಯೇ ಮೊದಲಾದ ಆಶಯಗಳನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸಲು ಸುಧಾ ಆಡುಕಳರ 'ಕಾಯುವ ಕರಗಳು' ಅಂಕಣ ಬರಹ, ಡಾ. ಮೋಹನ ಕುಂಟಾರು ಅವರ 'ಪ್ರಳಯ ಕೇರಳ' ಹಾಗೂ ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಬೂತಯ್ಯನ ಮಗ ಅಯ್ಯು' ಕತೆಯ ಸಂಕ್ಷಿಪ್ತ ರೂಪವಾದ 'ಕಟ್ಟೆ ಒಡೆದಾಗ' ಪಾಠಗಳನ್ನು ಈ ಘಟಕದಲ್ಲಿ ಕೊಡಲಾಗಿದೆ.



ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ!

**ಬಸವಣ್ಣ**

ಅಡುಗೆ ಮನೆಯ ಒಲೆ ಹೊತ್ತಿ ಉರಿದರೆ ಅಲ್ಲಿಯೇ ಬದಿಯಲ್ಲಿ ನಿಲ್ಲಬಹುದು. ಆದರೆ ಇಡೀ ಭೂಮಿಯೇ ಹೊತ್ತಿ ಉರಿದರೆ ನಿಲ್ಲಲು ಸಾಧ್ಯವಿಲ್ಲ. ಕಟ್ಟೆ ಅಥವಾ ದಡವೇ ಕಟ್ಟಿ ನಿಲ್ಲಿಸಿದ ನೀರನ್ನು ಹೀರಿದರೆ, ಬೆಳೆಯನ್ನು ರಕ್ಷಿಸಬೇಕಾದ ಬೇಲಿಯೇ ಅದನ್ನು ಮೇಯಲು ತೊಡಗಿದರೆ, ತನ್ನ ಮನೆಯಲ್ಲಿ ಸಂಪತ್ತನ್ನು ರಕ್ಷಿಸಬೇಕಾದ ಹೆಣ್ಣೇ ಕಳ್ಳತನ ಮಾಡಲು ತೊಡಗಿದರೆ, ತಾಯಿಯ ಎದೆಹಾಲೇ ಮಗುವಿಗೆ ವಿಷವಾಗಿ ಬದಲಾದರೆ ಇಂಥದ್ದನ್ನೆಲ್ಲ ಯಾರೊಡನೆ ಹೇಳಿಕೊಳ್ಳುವುದು? ರಕ್ಷಿಸಬೇಕಾದವರೇ ನಾಶ ಮಾಡಲು ತೊಡಗಿದರೆ ಕಾಪಾಡುವವರು ಯಾರೂ ಇಲ್ಲ ಎಂಬ ತಾತ್ಪರ್ಯ.

- ಮೇಲೆ ನೀಡಿದ ವಚನದ ಕುರಿತು ನಿಮ್ಮ ಅನಿಸಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ಕಾಯುವ ಕರಗಳು

**ಸುಧಾ ಆಡುಕಳ**

ಜೀರ್ ಎಂದು ಸುರಿಯುವ ಮಳೆಗಾಲದ ದಿನವದು. ಮನೆಯ ಸಂದಿಗಳಲ್ಲಿರುವ ಇರುವೆ ಗೂಡೊಳಗೆ ಕೊಂಚ ನೀರು ನುಗ್ಗಿರಬೇಕು. ದೊಡ್ಡ, ಚಿಕ್ಕ ಇರುವೆಗಳ ದಂಡು ಇದ್ದಕ್ಕಿದ್ದಂತೆ ಮೇಲೆದ್ದು ಬಂದು ನೆಲದ ಮೇಲೆ ಕಾಲಿಡದಂತೆ ವ್ಯಾಪಿಸಿಬಿಟ್ಟಿದ್ದವು. ಕೊಂಚ ಮಳೆಯ ನೀರು ಎರಚುವ ಹೊರ ಚಾವಡಿಗೆ ಇರುವೆಗಳು ಕಾಲಿಟ್ಟಿರಲಿಲ್ಲ. ಊಟಮಾಡಲು ಬಿಡದಂತೆ ಆವರಿಸಿದ ಇರುವೆಗಳನ್ನು ನೋಡಿ ಕೋಪಗೊಂಡ ನೀಲಿಯ ಅಪ್ಪ ಮಡಲಿನ ಸೂಡಿ ಹೊತ್ತಿಸಿ ಅವುಗಳನ್ನೆಲ್ಲ ಸುಟ್ಟುಬಿಡಲು ಯೋಚಿಸಿದರು. ಆದರೆ ನೀಲಿಯ ಅಮ್ಮ ಮಾತ್ರ ಸುತಾರಾಂ ಇರುವೆಗಳ ಕಗ್ಗೊಲೆಗೆ ಒಪ್ಪಲೇ ಇಲ್ಲ. “ಮಳೆಯಲ್ಲಿ ನಮ್ಮನೆ ತೊಳೆದು ಹೋಯ್ತು ಅಂದ್ರೆ ಏನು ಮಾಡ್ತೇವೆ? ಹತ್ತಿರದವರ ಮನೆಯ ಬಾಗಿಲು ತಟ್ಟುದೆಯಾ. ಅವುಗಳಿಗೂ ಇದು ಅಂಥದ್ದೇ ಕಷ್ಟಕಾಲ. ಇಲ್ಲದಿದ್ರೆ ಹೀಗೆ ಎದ್ದು ನಮಗೆ ಉಪದ್ರ ಮಾಡ್ತಿದ್ವಾ? ಸುಡೂದು ಗಿಡೂದು ಏನೂ ಬ್ಯಾಡ. ಸುಮ್ನೆ ಹೊರಗೆ ಚಾವಡಿಯಲ್ಲಿ ಕೂತ್ಕೊಳ್ಳಿ. ಅಲ್ಲಿಗೇ ತಂದು ಬಡಿಸ್ತೇನೆ” ಎಂದು ಟೊಂಕ ಕಟ್ಟಿದರು. ಎಲ್ಲರೂ ಮನೆಯ ಚಾವಡಿಯಲ್ಲಿಯೇ ಕುಳಿತು ಊಟ ಮಾಡುವುದು ಒಂಥರಾ ಮಜವೆಂದು ನೀಲಿಗೆ ಅನಿಸಿತು. ಆದರೆ ಊಟದ ನಡುವೆಯೇ ಕಪ್ಪು ಚಾರಟೆ ಹುಳವೊಂದು ಹರೆದು ಬಂದು ಮಜಾವನ್ನು ಕಸಿದುಬಿಟ್ಟಿತು. ಅಮ್ಮ ಹಿಡಿಸೂಡಿ ತಾಗಿಸಿದ ಕೂಡಲೇ ಚಕ್ಕುಲಿಯಂತೆ ಮುರುಟಿಕೊಂಡು ನಿಶ್ಚಲವಾಯಿತು. ಮತ್ತೆ ಊಟ ಶುರುಮಾಡುವುದರೊಳಗೆ ಮರಿಕಪ್ಪೆಯೊಂದು ಹಾರುತ್ತಾ ಬಂದು ಇನ್ನೆಲ್ಲಿ ಊಟದ ತಟ್ಟೆಗೆ ಹಾರಿಬಿಡುವುದೋ ಎಂದು ಗಾಬರಿಯಾಯಿತು. ಅದನ್ನಿನ್ನು ಓಡಿಸಿದರೆ ಯಾರಾದರೊಬ್ಬರ ಮೈಮೇಲೆ ಜಿಗಿದು ಅಧ್ವಾನವಾದೀತೆಂದು ಅಮ್ಮ ಅದರ ಮೇಲೊಂದು ಲೋಟವನ್ನು ಬೋರಲು ಹಾಕಿದರು. ಅರೆ! ಎಂಥ ಉಪಾಯವಿದು ಎನಿಸಿತು ನೀಲಿಗೆ.

ಊಟ ಮುಗಿದ ಕೂಡಲೇ ಬೀಡಿ ಹೊತ್ತಿಸಲೆಂದು ಒಳಗೆ ಹೋದ ಅಪ್ಪ ಕಾಲನ್ನು ಕೆರೆದುಕೊಳ್ಳುತ್ತಾ, “ದರಿದ್ರ ಇರುವೆಗಳು. ರಾತ್ರಿಯೇ ಬಂದು ತ್ರಾಸು ಕೊಡ್ತವೆ. ಆಚೆಗೆ ಸುಟ್ಟು ಬಿಸಾಕುವ ಅಂದ್ರೆ ಇವಳದ್ದೊಂದು ವರಾತ.” ಎಂದು ಅಮ್ಮನಿಗೆ ರೇಗಿದರು. ಅಮ್ಮ ಒಂದಿನಿತೂ ಬೇಸರಿಸಿಕೊಳ್ಳದೇ ತನ್ನನ್ನು, ಅಪ್ಪನನ್ನು ದಿಟ್ಟಿಸುತ್ತಿದ್ದ ನೀಲಿಯನ್ನು ನೋಡುತ್ತಾ ಹೇಳತೊಡಗಿದಳು, “ನಾವು ಇಲ್ಲಿ ಬಂದು ಮನೆ ಕಟ್ಕೊಂಡು ಇದು ನಮ್ದು ಅಂತ ಅಹಂಕಾರ ಪಡ್ತೇವೆ. ನಾವು ಮನೆ ಕಟ್ಟೋದಕ್ಕೆ ಮುಂಚೇನೆ ಅವೆಲ್ಲ ಇಲ್ಲಿದ್ವು ಅನ್ನೋದನ್ನ ಮರೆತುಬಿಡ್ತೇವೆ. ಗೂಡಿಗೇನೋ ನೀರು ಹೋಗಿರಬೇಕು, ಗಾಬರಿಯಿಂದ ಹೊರಗೆ ಬಂದಿವೆ. ಇಲ್ಲಾಂದ್ರೆ ಇರುವೆಗಳು ಸಾಲು ಬಿಟ್ಟು ಹೀಗೆ ಬರೋದುಂಟೆ? ನಾಳೆ ಬೆಳಗಾದ್ರೆ ಇನ್ನೆಲ್ಲೋ ದಾರಿ ಹುಡುಕಿ ಹೋಗ್ತವೆ.” ನೀಲಿಗೆ ಇದೊಂದು ಭಯಂಕರ ವಿಪರ್ಯಾಸವೆನಿಸಿ ಅಮ್ಮನನ್ನು ಕೇಳಿದಳು, “ಇರುವೆ ಬಂದರೆ ಸರಿ, ಹಾವು ಬಂದ್ರೂ ಮನೆಯೊಳಗೆ ಇಟ್ಕೊಳ್ತೀಯೋ ಹೇಗೆ?” ಅಮ್ಮ ನೀಲಿಯ ಕಿವಿಹಿಡಿದು ಹೇಳಿದಳು, “ಹೌದು, ಹಾವು ಬಂದ್ರೆ ನಿನ್ನ ಜಡೆಗೆ ಸೇರಿಸಿ

ಹೆಣೆದು ಇಡ್ತೇನೆ ನೋಡು. ಆಗ ನಿನ್ನ ಮೋಟು ಜಡೆ ಉದ್ದ ಆಗ್ತದೆ.” ಅಮ್ಮನ ಮಾತಿಗೆ ನೀಲಿ, “ಇಶ್ಶೀ...” ಎಂದು ಮೋಟು ಜಡೆಯನ್ನು ಅಲ್ಲಾಡಿಸಿದಳು.

ಅಂತೂ ಇರುವೆಯ ಕಾರಣದಿಂದಾಗಿ ಎಲ್ಲರೂ ಅಂಗಳದ ನೀರು ತುಸುವೇ ಸಿಡಿಯುತ್ತಿದ್ದ ಚಾವಡಿಯಲ್ಲಿಯೇ ಉದ್ದಕ್ಕೆ ಹಸೆ ಹಾಸಿ ಮಲಗಿಯಾಯಿತು. ನಿದ್ದೆ ಪೂರ್ತಿ ಆವರಿಸಿದ ಹೊತ್ತು ಗೋಡೆಯಂಚಿಗೆ ಮಲಗಿದ್ದ ನೀಲಿಯ ಮೈ ತಣ್ಣಗಾಗುತ್ತ ಬಂದಂತಾಯಿತು. ತಿರುಗಿ ಮಲಗಿದ ಅವಳಿಗೆ ಅರೆನಿದ್ದೆಯಲ್ಲಿ ಕನಸು. ಹರಿವ ನೀರಿನಲ್ಲಿ ತೇಲಿ ಹೋಗುತ್ತಿದ್ದ ಹಾಗೆ, ತನ್ನೊಂದಿಗೆ ಹೊಳೆಯ ಮೀನುಗಳು ಈಜುತ್ತಿದ್ದ ಹಾಗೆ, ಅವುಗಳನ್ನು ಎರಡೂ ಕೈಯ್ಯಲ್ಲಿ ಬಾಚಿ ಹಿಡಿದು ಪುಳಕ್ಕನೆ ಬಿಟ್ಟ ಹಾಗೆ.......... ಹಾಗೆ ಹಿಡಿದಾಗೊಮ್ಮೆ ಉದ್ದದ ಮೀನು ಕೈಗೆಟುಕಿ, ಅದನ್ನು ಹೀಗೆ ಹಿಡಿದು ಮೇಲೆತ್ತಿದಾಗ ಹಾವೆಂದು ತಿಳಿದು ಬೆಚ್ಚಿಬಿದ್ದಳು. ಅವಳು ಕಿರುಚಿದ ಸದ್ದಿಗೆ ಅಮ್ಮ ಎಚ್ಚೆತ್ತು ಅಲ್ಲಿಯೇ ಇದ್ದ ಬ್ಯಾಟರಿಯಿಂದ ಬೆಳಕು ಬಿಟ್ಟಳು. ಅರೆ! ನೀಲಿಯ ಹಸೆ ನೀರಿನಲ್ಲಿ ತೇಲುವಷ್ಟು ಒದ್ದೆಯಾಗಿತ್ತು. ತಕ್ಷಣ ಗಡಬಡಿಸಿ ಎಲ್ಲರನ್ನೂ ಎಬ್ಬಿಸಿದವಳೇ ಹೊರಬಂದು ನೋಡಿದರೆ ಮನೆಯ ಅಂಚಿನಲ್ಲಿರುವ ಧರೆ ಮನೆಯ ಮೇಲೆಯೇ ಕುಸಿದಿತ್ತು. ಮನೆಯ ಹಿಂದಿನ ಅರ್ಧಭಾಗವನ್ನು ಆಕ್ರಮಿಸಿ ಚಾವಡಿಯವರೆಗೂ ಮಣ್ಣಿನ ರಾಶಿ ಚಾಚಿಕೊಂಡಿತ್ತು. ಇನ್ನೇನು ಮನೆ ಕುಸಿದೇ ಬೀಳುವುದೆಂಬ ಸ್ಥಿತಿಯಲ್ಲಿ ಎಲ್ಲರೂ ಗಡಬಡಿಸಿ ಹೊರಬಂದರು. ನೀಲಿಯ ಅಪ್ಪ ಬ್ಯಾಟರಿ ಹಿಡಿದು ಅಕ್ಕಪಕ್ಕದವರ ಮನೆಯವರನ್ನು ಕರೆತಂದರು. ನಡುರಾತ್ರಿಯಲ್ಲಿ ಏನು ಮಾಡಲೂ ತೋಚದೇ, ದುಡ್ಡು, ಕಾಸು, ಪಾತ್ರೆ, ಪಗಡೆಗಳನ್ನು ಕಟ್ಟಿಕೊಳ್ಳಲು ಒಳಹೋಗಲೂ ಭಯವಾಗಿ ಉಟ್ಟ



ಬಟ್ಟೆಯಲ್ಲಿಯೇ ಪಕ್ಕದ ಮನೆಗೆ ಹೋಗಿ ಮಲಗಿದರು. ಬೆಳಗಾಗೆದ್ದ ಅಪ್ಪ ಎಲ್ಲರಲ್ಲಿಯೂ "ನಮ್ಮೂರ ಮಾರಮ್ಮನೇ ನಿನ್ನೆ ಇರುವೆಗಳ ರೂಪದಲ್ಲಿ ಬಂದಿರಬೇಕು. ಇಲ್ಲವಾದಲ್ಲಿ ಈ ಮಕ್ಕಳು ಹೆಂಗಸರೆಲ್ಲ ಮನೆಯೊಳಗೆ, ನಾನೊಬ್ಬನೇ ಹೊರಗೆ ಮಂಚದಲ್ಲಿ ಮಲಗುತ್ತಿದ್ದೆ. ದರೆ ಕುಸಿದು ಇಡಿಯ ಮನೆ ಮೈಮೇಲೆ ಬಿದ್ದರೂ ಎಚ್ಚರವಾಗುತ್ತಿರುಲಿಲ್ಲ." ಎಂದು ಢಂಗೂರ ಸಾರಿದರು. ನೀಲಿಯ ಅಮ್ಮ ಮಾತ್ರ, "ನಾವು ಒಬ್ರನ್ನು ಕಾಯ್ದರೆ ನಮ್ಮನ್ನು ಕಾಯುವವನು ಇನ್ನೊಬ್ಬನಿರುತ್ತಾನೆ." ಎಂದು ಆಧ್ಯಾತ್ಮ ನುಡಿದರು.

ಇಡಿಯ ಮನೆಯೇನು ಉರುಳದಿದ್ದರೂ ಮರುದಿನವಿಡೀ ಮನೆಯೊಳಗೆ ಹೋಗಲಾರದಷ್ಟು ಅಧ್ವಾನಗಳು ಆಗಿಹೋಗಿದ್ದವು. ಹೊಳೆಸಾಲಿನ ಎಲ್ಲರೂ ಸಾಲಲ್ಲಿ ಬಂದು ಮೊದಲು ಮನೆಯ ಮಾಡಿನವರೆಗೂ ಕುಸಿದ ಮಣ್ಣಿನ ರಾಶಿಯನ್ನು ಖುಲ್ಲ ಮಾಡಿದರು. ಮತ್ತೆ ಮನೆಯ ಗೋಡೆಯಿರುವಲ್ಲಿಗೆ ಮರದ ಒಂದಿಷ್ಟು ಎಳೆಗಳನ್ನು ಆಧಾರವಾಗಿ ಸಿಕ್ಕಿಸಿ ಮಾಡು ಬೀಳದಂತೆ ಎತ್ತಿ ನಿಲ್ಲಿಸಿದರು. ನೀರು ಮನೆಯೊಳಗೆ ನುಗ್ಗದಂತೆ ಬಸಿಗಾಲುವೆಗಳನ್ನು ದರೆಯಂಚಿಗೆ ತೋಡಿದರು. ಎಷ್ಟಾದರೂ ಇನ್ನು ಮನೆಯೊಳಗಿರುವುದು ಅಪಾಯವೆ ಎಂಬ ಮಾತು ಎಲ್ಲರಿಂದಲೂ ಕೇಳಿಬಂತು ಸುರಿವ ಮಳೆಗಾಲದಲ್ಲಿ ಹೋಗುವುದಾದರೂ ಎಲ್ಲಿಗೆಂದು ತಿಳಿಯದೇ ನೀಲಿಯ ಅಪ್ಪ, ಅಮ್ಮ ಗಾಬರಿಗೊಂಡರು. ಅಂತೂ ಮಳೆಯೊಂದು ಕಡಿಮೆಯಾಗುವವರೆಗೆ ಹಗಲಿಡೀ ಆ ಮನೆಯಲ್ಲಿದ್ದು ರಾತ್ರಿ ಮಲಗಲು ಸುಭದ್ರಮ್ಮನ ಮನೆಗೆ ಹೋಗುವುದೆಂದು ಮಾತುಕತೆಯಾಯಿತು. ನೀಲಿಯ ಅಮ್ಮ ತನ್ನ ಟ್ರಂಕಿನಲ್ಲಿರುವ ಪುಡಿಗಾಸು ಮತ್ತು ತೊಲ ತೂಕದ ಚಿನ್ನವನ್ನೆಲ್ಲ ಸುಭದ್ರಮ್ಮನ ಕಪಾಟಿಗೆ ವರ್ಗಾಯಿಸಿದಳು.

ಸುಂದರ ಭುವಿ ನಮಗಿತ್ತ ಅಗೋಚರ

ದಿವ್ಯ ಚೇತನವೇ, ಈ ಭುವಿ ನಮಗೆ

ನೀನಿತ್ತ ವರ, ಮನೋಹರ ಕಲಾಕೃತಿ.

ನಾವದರ ಮೈ ಮಡಿಲು ಸೀಳಿ, ಗೆರೆಗಳ

ಎಳೆದೆಳೆದು, ವಿಕೃತಿಗೈವ ಅಂದಗೇಡಿ

ನಾಗರಿಕ ಅನಾಗರಿಕರು, ಕ್ಷಮಿಸೆಮ್ಮ!

ವಾಸುದೇವ ಖರೀದಿ

ಆದರೆ ಈ ದರೆಯ ಕುಸಿತ ತೀರ ಅನಿರೀಕ್ಷಿತವೇನೂ ಆಗಿರಲಿಲ್ಲ. ಹೆಂಚಿನ ಮಣ್ಣಿನ ಸಾಗಾಟಕ್ಕೆಂದು ಮಾಡಿದ್ದ ಮಣ್ಣಿನ ರಸ್ತೆಗೆ ಡಾಂಬರು ಬೇಕೆಂದು ಹೊಳೆಸಾಲು ಯುವಕ ಸಂಘ ಮೇಲಿನವರಿಗೆ ಅರ್ಜಿ ಸಲ್ಲಿಸಿತ್ತು. ಯುವಪಡೆಯ ಮಾತಿಗೆ ಮನ್ನಣೆ ದೊರೆತು ರಸ್ತೆ ಮಾಡುವ ಯೋಜನೆಯೂ ಜಾರಿಗೆ ಬಂತು. ಆದರೆ ಇದ್ದ ರಸ್ತೆಗೆ ಜೆಲ್ಲಿ ಹಾಸಿ ಡಾಂಬರು ತುಂಬಿಸಿ ಹೋಗುತ್ತಾರೆಂಬ ಹಳ್ಳಿಯವರ ನಿರೀಕ್ಷೆ ಮಾತ್ರ ಸುಳ್ಳಾಯಿತು. ಟೇಪು ಹಿಡಿದು ಅಳೆಯುತ್ತ ಬಂದ ತಂಡ ಅದೇನೋ ನಕಾಶೆ ನೋಡುತ್ತ, ಅದಕ್ಕೆ ಸರಿಯಾಗಿ ಬಾಂದು ಕಲ್ಲುಗಳನ್ನು ನೆಡುತ್ತ, ಎಲ್ಲಿಂದೆಲ್ಲಿಗೋ ಗೆರೆ ಎಳೆಯುತ್ತ ನಡೆಯಿತು. ಹಾಗೆ ಎಳೆದ ಗೆರೆ ನೀಲಿಯ ಮನೆಯ ಮೇಲಿರುವ ದರೆಯ ಮೇಲೆಯೇ ಹಾದುಹೋಗುತ್ತಿತ್ತು. ಅಲ್ಲಿ ದರೆಯ ತುದಿಯನ್ನು ಅಗೆದು ಮಣ್ಣನ್ನು ಮನೆಯಿರುವ ತಗ್ಗಿಗೆ ಎರಚುತ್ತ ಬಂದಾಗಲೇ ನೀಲಿಯ ಅಪ್ಪ ಹೋಗಿ ತಕರಾರು ಮಾಡಿದ್ದರು. ಅಲ್ಲಿಂದ ಕೆಳಗೆ ಈಗಾಗಲೇ ಇರುವಲ್ಲಿಯೇ ರಸ್ತೆ ಮಾಡಿರೆಂದು ವಿನಂತಿಸಿದ್ದರು. ಆದರೆ ರಸ್ತೆ ಕಂತ್ರಾಟುದಾರ ಮಾತ್ರ ಹಾಗೆಲ್ಲ ಸರಕಾರಿ ರಸ್ತೆಯನ್ನು ಎಲ್ಲೆಂದರಲ್ಲಿ ಮಾಡಲಾಗದೆಂದೂ, ಅದು ಸರಕಾರಿ ಜಮೀನಿನಲ್ಲಿ ಮಾತ್ರವೇ ಹಾದುಹೋಗಬೇಕೆಂದು ಕಾನೂನು ಹೇಳಿದ್ದ. ಕೆಳಗಿದ್ದ ಜಾಗವೂ ಸರಕಾರದ್ದೇ ಅಲ್ಲವೆ? ಎಂಬ ನೀಲಿಯ ಅಪ್ಪನ ಪ್ರಶ್ನೆಗೆ ಅಲ್ಲವೆಂದು ತಲೆಯಲ್ಲಾಡಿಸಿದ್ದ. ಅನೂಚಾನವಾಗಿ ತಮ್ಮ ಜಮೀನಿನ ಮೇಲಿದ್ದ ಜಾಗವೆಲ್ಲವೂ ಸರಕಾರದ್ದೇ ಎಂದು ನಂಬಿದ್ದ ಊರಿನವರು ರಸ್ತೆ ಮಾಡಿಸುವವರಿಗೆ ತಲೆ ಸರಿಯಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದರು. ಹಾಗಾದರೂ ಸುರಿವ ಮಳೆಯಲ್ಲಿ ಮಣ್ಣು ಕುಸಿಯಬಹುದೆಂದು ಎಲ್ಲರಿಗೂ ಅರಿವಿತ್ತು. ರಾತ್ರಿ ಕುಸಿದರೂ ಯಾರಿಗೂ ಏನೂ ಆಗದಿರುವುದೇ ದೇವರ ದಯೆಯೆಂದು ಎಲ್ಲರೂ ನಿಟ್ಟುಸಿರು ಬಿಟ್ಟಿದ್ದರು.

## ಲೇಖಕರ ಪರಿಚಯ



ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಆಡುಕಳ ಗ್ರಾಮದವರಾದ ಸುಧಾ ಆಡುಕಳ ಪ್ರಸ್ತುತ ಉಡುಪಿಯ ಕಾಲೇಜಿನಲ್ಲಿ ಗಣಿತ ಉಪನ್ಯಾಸಕರು. ಅನೇಕ ಮಕ್ಕಳ ನಾಟಕಗಳನ್ನು ಮತ್ತು ಸ್ತ್ರೀ ಕೇಂದ್ರಿತ ಏಕವ್ಯಕ್ತಿ ನಾಟಕಗಳನ್ನು ರಚಿಸಿದ್ದಾರೆ. ರವೀಂದ್ರನಾಥ ಠಾಗೋರರ ಕೆಂಪುಕಣಗಿಲೆ, ಚಿತ್ರಾ ನಾಟಕಗಳನ್ನು ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ಕೃತಿ ಗೀತಾಂಜಲಿಯನ್ನು ಕನ್ನಡಕ್ಕೆ ತಂದಿದ್ದಾರೆ. ಇವರ ಅಂಕಣ ಬರಹ 'ಬಕುಲದ ಬಾಗಿಲಿನಿಂದ' ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಒಂದು ಇಡಿಯ ಬಳಪ, ನೀಲಿ ಮತ್ತು ಸೇಬು ಕಥಾಸಂಕಲನಗಳು ಪ್ರಕಟಗೊಂಡಿವೆ. ಓರಿಯಾನ ಫಲಾಚಿಯವರ ಕಾದಂಬರಿ 'ಎಂದೂ ಹುಟ್ಟದ ಮಗುವಿಗೆ ಪತ್ರ'ವನ್ನು ಕನ್ನಡಕ್ಕೆ ತಂದಿದ್ದಾರೆ. 'ಮಗುವಿನ ಭಾಷೆ ಮತ್ತು ಶಿಕ್ಷಕ' ಎಂಬ ಅನುವಾದ ಪುಸ್ತಕವನ್ನು ದೆಹಲಿಯ ನ್ಯಾಶನಲ್ ಬುಕ್ ಟ್ರಸ್ಟ್ ಪ್ರಕಟಿಸಿದೆ. ಇವರು ತಮ್ಮ ಕೃತಿಗಳಿಗಾಗಿ ಕ. ಸಾ. ಪ. ದತ್ತಿನಿಧಿ ಪ್ರಶಸ್ತಿ ಹಾಗೂ ಕರ್ನಾಟಕ ಲೇಖಕ ಮತ್ತು ವಾಚಕಿಯರ ಸಂಘದ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇವರ ಕಥೆ, ಕವನ ಮತ್ತು ಲೇಖನಗಳು ನಾಡಿನ ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪ್ರಸ್ತುತ ಬರಹವನ್ನು 'ಹೊಳೆಸಾಲು' ಅಂಕಣಬರಹದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ನೀಲಿಯ ಅಮ್ಮ ಇರುವೆಗಳ ಕಗ್ಗೊಲೆಗೆ ಒಪ್ಪದಿರಲು ಕಾರಣವೇನು?
2. ನೀಲಿಗೆ ವಿಪರ್ಯಾಸವೆನಿಸಿದ ಅಮ್ಮನ ಮಾತುಗಳು ಯಾವುವು?
3. ನೀಲಿಯು ರಾತ್ರಿ ಕಂಡ ಕನಸೇನಾಗಿತ್ತು?
4. ನೀಲಿಯ ಮನೆಯ ಮೇಲೆ ದರೆ ಕುಸಿಯಲು ಕಾರಣವೇನು?
5. ದರೆ ಕುಸಿದಾಗ ಊರವರು ನೀಲಿಯ ಮನೆಯವರಿಗೆ ಹೇಗೆ ನೆರವಾದರು?

## ಟಿಪ್ಪಣಿ ಬರೆಯಿರಿ

ಕಾಯುವ ಕರಗಳು ಪಾಠಭಾಗದಲ್ಲಿ ಪ್ರಾಕೃತಿಕ ದುರಂತದ ಬಗ್ಗೆ ತಿಳಿದುಕೊಂಡಿರುವಿರಿ. ಈ ಹಿನ್ನೆಲೆಯಲ್ಲಿ ಪ್ರಾಕೃತಿಕ ದುರಂತದಂತಗಳು ಸಂಭವಿಸಿದಾಗ ಸಂತ್ರಸ್ತರಿಗೆ ನಾವು ಯಾವ ರೀತಿಯ ಸಹಾಯ ಮಾಡಬಹುದು ಎನ್ನುವುದರ ಕುರಿತು ಟಿಪ್ಪಣಿ ಬರೆಯಿರಿ.

## ಮನವಿ ಪತ್ರ ಬರೆಯಿರಿ

ನೀಲಿಯ ಮನೆಯ ಬಳಿ ಅವೈಜ್ಞಾನಿಕವಾಗಿ ರಸ್ತೆ ನಿರ್ಮಾಣ ನಡೆಯಿತಲ್ಲವೇ? ಈ ಕಾರಣದಿಂದ ನಡೆದ ದುರಂತದಲ್ಲಿ ನೀಲಿಯ ಮನೆಯು ನಾಶವಾಯಿತು. ಆ ದುರಂತಕ್ಕೆ ಕಾರಣವಾದ ಅಂಶಗಳನ್ನು ಉಲ್ಲೇಖಿಸುತ್ತಾ ಅವರಿಗೆ ಪುನರ್ವಸತಿ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರ ಬರೆಯಿರಿ.

## ಲೇಖನ ಬರೆಯಿರಿ

ನಾವು ಇಲ್ಲಿ ಬಂದು ಮನೆ ಕಟ್ಕೊಂಡು ಇದು ನಮ್ದು ಅಂತ ಅಹಂಕಾರ ಪಡ್ತೇವೆ. ನಾವು ಮನೆ ಕಟ್ಟೋದಕ್ಕೆ ಮುಂಚೇನೆ ಅವೆಲ್ಲ ಇಲ್ಲಿದ್ವು ಅನ್ನೋದನ್ನ ಮರೆತುಬಿಡ್ತೇವೆ. - ಈ ಮಾತುಗಳ ಆಧಾರದಲ್ಲಿ 'ಪ್ರಕೃತಿ ಮತ್ತು ಮಾನವ' ಎನ್ನುವ ವಿಷಯದ ಕುರಿತು ಲೇಖನ ಬರೆಯಿರಿ.

## ವಿಶ್ಲೇಷಣ ಟಿಪ್ಪಣಿ ಬರೆಯಿರಿ

ನೀಲಿಯ ಹಸೆ ನೀರಿನಲ್ಲಿ ತೇಲುವಷ್ಟು ಒದ್ದೆಯಾಗಿತ್ತು ........... ಹೊರಬಂದು ನೋಡಿದರೆ ಮನೆಯ ಅಂಚಿನಲ್ಲಿರುವ ದರೆ ಮನೆಯ ಮೇಲೆಯೇ ಕುಸಿದಿತ್ತು ......... ಅಮ್ಮ ಎಚ್ಚೆತ್ತು ಅಲ್ಲಿಯೇ ಇದ್ದ ಬ್ಯಾಟರಿಯಿಂದ ಬೆಳಕು ಬಿಟ್ಟಳು ..............

ದುರಂತಗಳು ನಡೆಯುವಂತಹ ಸಮಯಗಳಲ್ಲಿ ನಮ್ಮಲ್ಲಿರಬೇಕಾದ ಅಗತ್ಯ ಪರಿಕರಗಳನ್ನು ಪಟ್ಟಿ ಮಾಡಿ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

## ಸರಳ ವಾಕ್ಯಗಳಾಗಿ ಬರೆಯಿರಿ

ಕೆಳಗೆ ಕೊಟ್ಟಿರುವ ಸಂಯುಕ್ತ ವಾಕ್ಯಗಳನ್ನು ಮಾದರಿಯಂತೆ ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ

ಮಾದರಿ :

ಮಳೆಗೆ ಪೂರ್ತಿಯಾಗಿ ಮನೆಯೇನೂ ಉರುಳದಿದ್ದರೂ ಮರುದಿನವಿಡೀ ಮನೆಯೊಳಗೆ ಹೋಗಲಾರದಷ್ಟು ಅಧ್ವಾನಗಳು ಆಗಿಹೋಗಿದ್ದವು.

ಮಳೆಗೆ ಪೂರ್ತಿಯಾಗಿ ಮನೆಯೇನೂ ಉರುಳಲಿಲ್ಲ. ಆದರೂ ಮರುದಿನವಿಡೀ ಮನೆಯೊಳಗೆ ಹೋಗಲಾರದಷ್ಟು ಅಧ್ವಾನಗಳು ಆಗಿಹೋಗಿದ್ದವು.

- ಹೊಲದಲ್ಲಿದ್ದ ದೊಡ್ಡ ಸೌತೆಕಾಯಿಯನ್ನು ಕಂಡ ನಂಜಪ್ಪನು ಅಷ್ಟು ದೊಡ್ಡ ಕಾಯನ್ನು ತಾನೆಂದೂ ನೋಡಿರಲಿಲ್ಲವೆಂದನು.
- ಅಭಿವೃದ್ಧಿಯ ಹೆಸರಿನಲ್ಲಿ ಮಾನವನು ಪ್ರಕೃತಿಯನ್ನು ಶೋಷಣೆ ಮಾಡಿದುದರಿಂದ ಹವಾಮಾನ ವೈಪರೀತ್ಯಗಳುಂಟಾಗುತ್ತವೆ.
- ಗಿರಿ-ಕಾನನಗಳು ಹಾಗೂ ಚಹಾ ತೋಟಗಳ ಸೌಂದರ್ಯದಿಂದ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ ಕೇರಳದ ವಯನಾಡು ಜಿಲ್ಲೆಯ ಚೂರಲ್ಮಲಾ, ಮುಂಡಕ್ಕೈ ಗ್ರಾಮಗಳು ಭಾರಿ ಭೂಕುಸಿತದಿಂದಾಗಿ ನಾಮಾವಶೇಷಗೊಂಡವು.

### ಭೂ ಕುಸಿತಕ್ಕೆ ಕಾರಣಗಳು

**ನೈಸರ್ಗಿಕ ಕಾರಣಗಳು**

- ವಿಪರೀತ ಮಳೆ ಮತ್ತು ನೆಲವು ಮಳೆನೀರು ಹೀರಿಕೊಳ್ಳುವ ಪೂರ್ಣ ಹಂತ ತಲುಪಿದರೆ ಭೂಕುಸಿತ ಸಂಭವಿಸುತ್ತದೆ.
- ಅಂತರ್ಜಲದಲ್ಲಿ ವಿಪರೀತ ಹೆಚ್ಚಳ ಅಥವಾ ಪೋರ್ ವಾಟರ್ (ಶಿಲೆಗಳ ನಡುವೆ ಸಂಗ್ರಹವಾದ ನೀರು) ಒತ್ತಡದಲ್ಲಿನ ಬದಲಾವಣೆ.
- ಭೂಮಿ ಬಿರುಕು ಮತ್ತು ಸೀಳುಗಳಲ್ಲಿನ ಹೈಡ್ರೋಸ್ಟಾಟಿಕ್ ಒತ್ತಡ.
- ಮಣ್ಣಿನ ಪೋಷಕಾಂಶಗಳು ಮತ್ತು ಮಣ್ಣಿನ ರಚನೆಯ ವ್ಯತ್ಯಾಸ ಭೂಕಂಪಗಳು ಮತ್ತು ಜ್ವಾಲಾಮುಖಿ ಸ್ಫೋಟಗಳು ಭೂಕುಸಿತಕ್ಕೆ ಕಾರಣ.

**ಮಾನವ ಹಸ್ತಕ್ಷೇಪ ಕಾರಣಗಳು**

- ಕಟ್ಟಡ ನಿರ್ಮಾಣ ಚಟುವಟಿಕೆಗಳು, ಕೃಷಿ ಹಾಗೂ ಮರಗಳ ಹನನ
- ಘಟ್ಟ ಪ್ರದೇಶಗಳಲ್ಲಿ ರಸ್ತೆಗಳ ನಿರ್ಮಾಣ, ಡ್ರಿಲ್ಲಿಂಗ್ ಹಾಗೂ ಮೈನಿಂಗ್, ಅಣೆಕಟ್ಟು ನಿರ್ಮಾಣ ಇತ್ಯಾದಿಗಳು
- ಭೂರಚನೆ ಬದಲಾವಣೆ, ಮಣ್ಣು ಗಟ್ಟಿ ಹಿಡಿದುಕೊಂಡಿರುವ ಮರಗಳ ನಾಶ

# ಪ್ರಳಯ ಕೇರಳ

**ಡಾ. ಮೋಹನ ಕುಂಟಾರ್**

1

ಪ್ರಳಯ ಪ್ರತಾಪಕೆ ಭೂಮಿ ಜಲಗಳ
ಪ್ರಣಯ ಕೇಳಿಗೆ ಘಾಸಿಗೊಂಡಿದೆ ಕೇರಳ
ಸುರಿದ ಮಳೆಯ ಬಿರಿದ ಭೂಮಿಯ
ಕುಸಿದ ನೆಲದಲ್ಲಿ ಕಸಿದ ಬದುಕಲ್ಲಿ
ಮುಳುಗಿ ಹೋಗಿದೆ ಮನುಷ್ಯ ಸೃಷ್ಟಿಯು
ಬೆವೆತು ನಿಂತಿದೆ ಮೇಘಜಾಲವು
ನೆಲವ ಕೊರೆದು ಗಣಿಯ ಬಗಿದು
ಬಸಿರ ಹಿಂಡಿದ ಜನರ ದಾಹವು
ನೀರ ಹರಿವಿನ ದಾರಿ ಕಸಿಯುತ
ಕಟ್ಟಿ ಮನೆಗಳ ನೆಲೆಯ ಕಂಡರು
ರುದ್ರ ನೃತ್ಯದ ನೆರೆಯ ವೇಗಕೆ
ತಾಳಲಾರದೆ ಭೂಮಿ ಭಾರವ
ಜಡಿದು ನಿಂತಿದೆ ಕಡಲ ತೆಕ್ಕೆಗೆ !

2.

ಮನೆಯ ಹೊರಗಡೆ ಸುಳಿಯಲಾರದೆ
ಜಲಧಿಯಾಯಿತು ಸುತ್ತ ಪರಿಸರ
ಸುಪ್ತವಾಯಿತು ಜನರ ಜೀವನ
ಕಾಲ ವರ್ಷದ ಕಾಲ ಭೈರವ
ರೌದ್ರರೂಪದ ಬಾನು ಕೋಪವು
ಭೀಮರೂಪದ ಬಿರುಮಳೆ'
ಇಳಿದು ಬಂದಿವೆ ನೆಲದ ಒಡಲಿಗೆ
ಸುಳಿದು ಸುತ್ತಿದೆ ಬಿಡದೆ ಬೀಡನು
ಚದುರಿ ಚೆಲ್ಲಿದೆ ಚದುರ ನಾಡನು
ಪಕ್ಷಪಂಥದ ಭೇದ ಗಣಿಸದೆ
ಎಡದ ಬಲದ ವಾದ ಹೂಡದೆ
ಮುಕ್ಕಿ ಮುಗಿಸಿದೆ ಜಲನಿಧಿ
ಪ್ರಳಯ ಕಾಲದ ರುದ್ರ ನರ್ತನ
ಜಲದ ರೂಪವ ತಳೆದು ಹರಿದಿದೆ!



## ಕವಿ ಪರಿಚಯ



ಕಾಸರಗೋಡಿನವರಾದ ಡಾ. ಎ. ಮೋಹನ ಕುಂಟಾರ್ ಅವರು 25.05.1963 ರಂದು ಜನಿಸಿದರು. ಪಿ.ಎಚ್.ಡಿ. ಪದವೀಧರರಾದ ಅವರು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಭಾಷಾಂತರ, ಸಾಹಿತ್ಯ, ಸಂಸ್ಕೃತಿ ಮತ್ತು ಯಕ್ಷಗಾನ ಇವರ ಪ್ರಮುಖ ಆಸಕ್ತಿಯ ಕ್ಷೇತ್ರಗಳಾಗಿವೆ. ಕೇರಳ ಕಥನ, ಸಮುದಾಯಗಳ ಕನ್ನಡ ಪರಂಪರೆ, ಕನ್ನಡ ಮಲೆಯಾಳಂ ಭಾಷಾಂತರ ಪ್ರಕ್ರಿಯೆ ಇವೇ ಮುಂತಾಗಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಕನ್ನಡ ಅನುವಾದ ಸಾಹಿತ್ಯ', 'ಸಮುದಾಯಗಳಲ್ಲಿ ಲಿಂಗಸಂಬಂಧಿ ನೆಲೆಗಳು' ಇವರ ಪ್ರಮುಖ ಸಂಶೋಧನ ಲೇಖನಗಳಾಗಿವೆ. ಪ್ರಸ್ತುತ ಕವನವನ್ನು 'ಲೋಕಾಂತದ ಕಾವು' ಎನ್ನುವ ಕವನಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಕೇರಳವು ಘಾಸಿಗೊಂಡದ್ದು ಹೇಗೆ?
2. ಮಾನವರು ಮನೆಗಳ ಕಟ್ಟಿ ನೆಲೆಯ ಕಂಡುಕೊಂಡಾಗ ಪ್ರಕೃತಿಗಾದ ಹಾನಿಗಳೇನು?
3. ಕಾಲವರ್ಷದ ಪರಿಣಾಮವನ್ನು ಕವನದಲ್ಲಿ ಹೇಗೆ ವರ್ಣಿಸಲಾಗಿದೆ?
4. ಭೂಮಿಯು ಭಾರವನ್ನು ತಾಳದಿರಲು ಕಾರಣವೇನೆಂದು ಕವಿ ಹೇಳುತ್ತಾರೆ?

## ಆಶಯ ಬರೆಯಿರಿ

'ಪ್ರಳಯ ಕೇರಳ' ಕವನದ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಕವನದ ಸಾಲುಗಳ ಸ್ವಾರಸ್ಯ ಬರೆಯಿರಿ.

- ಮುಳುಗಿ ಹೋಗಿದೆ ಮನುಷ್ಯ ಸೃಷ್ಟಿಯು

  ಬೆವೆತು ನಿಂತಿದೆ ಮೇಘಜಾಲವು

- ರೌದ್ರರೂಪದ ಬಾನು ಕೋಪವು

  ಭೀಮರೂಪದ ಬಿರುಮಳೆ'

## ಅಭಿಪ್ರಾಯ ಟಿಪ್ಪಣಿ ಬರೆಯಿರಿ

ಕೆಳಗೆ ನೀಡಲಾದ ಕವನದ ಸಾಲುಗಳ ಆಧಾರಲ್ಲಿ ಪ್ರಕೃತಿಯ ಮೇಲಿನ ಮಾನವನ ಹಸ್ತಕ್ಷೇಪವು ಹೇಗೆ ದುರಂತಕ್ಕೆ ಕಾರಣವಾಗುವುದು ಎನ್ನುವುದನ್ನು ವಿವರಿಸಿ ಟಿಪ್ಪಣಿ ಬರೆಯಿರಿ.

ನೆಲವ ಕೊರೆದು ಗಣಿಯ ಬಗಿದು

ಬಸಿರ ಹಿಂಡಿದ ಜನರ ದಾಹವು

ನೀರ ಹರಿವಿನ ದಾರಿ ಕಸಿಯುತ

ಕಟ್ಟಿ ಮನೆಗಳ ನೆಲೆಯ ಕಂಡರು

## ಲಿಖಿತ ಭಾಷಣ ತಯಾರಿಸಿರಿ

ಕೇರಳದಲ್ಲಿ ಇತ್ತೀಚೆಗೆ ಘಟಿಸಿದ ಪ್ರಾಕೃತಿಕ ವಿಕೋಪಗಳ ಹಿನ್ನೆಲೆಯಲ್ಲಿ 'ಪ್ರಾಕೃತಿಕ ವಿಕೋಪಗಳು: ಕಾರಣ ಮತ್ತು ಪರಿಹಾರಗಳು' ಎಂಬ ವಿಷಯದ ಕುರಿತು ಲಖಿತ ಭಾಷಣ ತಯಾರಿಸಿರಿ.

## ಭಿತ್ತಿಪತ್ರ ರಚಿಸಿರಿ

ನಿಮ್ಮ ಶಾಲೆಯಲ್ಲಿ ನಡೆಯುವ ಪರಿಸರ ದಿನಾಚರಣೆಯಲ್ಲಿ ಪ್ರದರ್ಶಿಸಲು ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವ ಭಿತ್ತಿಪತ್ರವನ್ನು ಇಂಕ್‌ಸ್ಕೇಪ್ ಸಾಫ್ಟ್‌ವೇರ್‌ನ ಸಹಾಯದಿಂದ ರಚಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

# ಕಟ್ಟೆ ಒಡೆದಾಗ

**ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಬೂತಯ್ಯನವರು ನಮ್ಮ ಪ್ರಾಂತಕ್ಕೆ ಪಾಳಯಗಾರರಂತಿದ್ದರು. ಅವರು ದುಷ್ಟರು, ಘಾತಕರು ಎಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಅವರಿಗೆ ಯಾರ ಮೇಲಾದರೂ ಕೋಪ ಬಂದರೆ, ಅವನ ಮನೆಯನ್ನು ಸುಟ್ಟು ಬೂದಿಯನ್ನು ನೆತ್ತಿಗೆ ಹಚ್ಚಿಕೊಳ್ಳುತ್ತಿದ್ದರು.

ಅವರ ಸ್ವಭಾವ ಬಹುಹಿಡಿತ, ಎಂಜಲು ಕೈಯಲ್ಲಿ ಕಾಗೆಯನ್ನು ಸಹ ಓಡಿಸಿದವರಲ್ಲ. ಅವರು ವಾಸವಾಗಿದ್ದುದು ಜಾಲಹಳ್ಳಿ ಗ್ರಾಮದಲ್ಲಿ. ತಮ್ಮ ಮಗನಾದ ಅಯ್ಯುವಿಗೆ ಅವರು ನಿತ್ಯವೂ "ಒಕ್ಕಲಿಗನ ನಂಟು ಒಡವೆ ಗೇಡು; ತಿಗಳರು ನಿನಗೆ ಕೈ ಮುಗಿದರೆ, ನಿನ್ನೊಂದಿಗೆ ಒಂದು ಒಳ್ಳೆಯ ಮಾತನಾಡಿದರೆ ನಿನ್ನಿಂದ ಏನೋ ಕಸಿಯಲು ಈ ಸಿದ್ಧತೆಯನ್ನು ಮಾಡುತ್ತಾರೆ, ನೀನು ಎಚ್ಚರಿಕೆಯಿಂದ ಇರಬೇಕು" - ಮುಂತಾಗಿ ಉಪದೇಶ ಮಾಡುತ್ತಿದ್ದರು.

ತಂದೆ ಸಾಯುವಾಗ ಅಯ್ಯುವಿಗೆ ಇಪ್ಪತ್ತೈದು ವಯಸ್ಸಾಗಿದ್ದಿತು. ಅಯ್ಯು ಕಿರಾತನೇ ಆಗಿದ್ದರೂ ಒಂದೊಂದು ಸಲ ಅವನಿಗೆ ರೈತರನ್ನು ಕಂಡು ಅವರೂ ಮನುಷ್ಯರೇ ಎಂಬ ಯೋಚನೆಯುಂಟಾಗುತ್ತಿದ್ದಿತು. ಆದರೆ ಮರುಕ್ಷಣದಲ್ಲಿಯೇ ಬೂತಯ್ಯನವರು ಹೇಳಿದ್ದ 'ಇವರನ್ನು ನಂಬಿದರೆ ತಲೆಗೆ ಕಲ್ಲು' ಎಂಬ ಮಾತು ಜ್ಞಾಪಕಕ್ಕೆ ಬಂದು, ಅವನ ಮನುಷ್ಯ ಸ್ವಭಾವ ಅಲ್ಲೇ ಅದುಮಿ ಹೋಗಿ ಅವನು ಪಿಶಾಚಿಯಾಗುತ್ತಿದ್ದನು.

ಜಾಲಹಳ್ಳಿಯ ತಿಗಳರ ಪೈಕಿ ಗುಳ್ಳನೆಂಬುವನು ಸ್ವಲ್ಪ ಪುಷ್ಟನಾಗಿದ್ದನು. ಅವನು ಅಯ್ಯುವಿನಷ್ಟೇ ಪ್ರಾಯದವನಾಗಿದ್ದನು. ಗುಳ್ಳನು ಒಂದಿಲ್ಲೊಂದು ಕಾರಣದಿಂದ ಯಾವಾಗಲೂ ಇತರರೊಂದಿಗೆ ಜಗಳವನ್ನು ತೆಗೆಯುತ್ತಿದ್ದರೂ ಬೂತಯ್ಯನವರ ತಂಟೆಗೆ ಮಾತ್ರ ಬಂದಿರಲಿಲ್ಲ. ಆದರೆ ಅಯ್ಯುವಿನ ಮನಸ್ಸು ಒಂದೊಂದು ಸಲ ಸ್ವಲ್ಪ ಮೃದುವಾಗುವುದೆಂದು ಅವನಿಗೆ ಗೊತ್ತಾದ ಕೂಡಲೇ "ನಾನು ಅಯ್ಯನನ್ನು ನುಂಗಿ ನೀರು ಕುಡಿದೇ ಬಿಡುತ್ತೇನೆ" ಎಂದುಕೊಂಡನು. ಹಾಗಾಗಿ ತಾನು ಅಯ್ಯುವಿಗೆ ಕೊಡಬೇಕಾದ ರೂಪಾಯಿಯನ್ನು ತಿಂದುಕೊಳ್ಳಬಹುದೆಂದು ಗುಳ್ಳನಿಗೆ ತೋರಿತು. ಅವನು ಒಬ್ಬಿಬ್ಬರೊಂದಿಗೆ, "ಅಯ್ಯ ಕೊಟ್ಟದ್ದು ತಕೋತಾನೆ, ಕೊಟ್ಟರೆ ತಕೋತಾನೆ, ನಾನು ಮೂವತ್ತು ವರುಷದಿಂದ ಹುಲ್ಲು ಬೆಳೀಲಿ ಬಿಡಲಿ, ದಂಡದ ಗುತ್ತಿಗೆ ತೆರತಾ ಬಂದಿದೀನಿ, ಈ ಬಾರಿ ರೂಪಾಯಿ ಅಯ್ಯ ತಕೊಳೋದ ನೋಡ್ತೀನಿ" ಎಂದನು. ಅಯ್ಯುವು, "ಗುತ್ತಿಗೆ ರೂಪಾಯನ್ನು ಕೊಡು. ಇಲ್ಲದಿದ್ದರೆ ಜಮೀನಿಗೆ ದನಗಳನ್ನು ಬಿಟ್ಟು ಮೇಯಿಸಬೇಡ" ಎಂಬುದಾಗಿ ಗುಳ್ಳನಿಗೆ ಹೇಳಿ ಕಳುಹಿಸಿದನು. ಗುಳ್ಳನು ರೂಪಾಯಿಯನ್ನು ಕೊಡಲಿಲ್ಲ, ದನಗಳನ್ನು ಮೇಯಿಸುವುದನ್ನೂ ಬಿಡಲಿಲ್ಲ. ಅಯ್ಯುವು ಹುಲ್ಲುಗಾವಲಿಗೆ ಹೋಗಿ ದನಗಳನ್ನು ದೊಡ್ಡಿಗೆ ಕೂಡಿಸಿದನು. ಗುಳ್ಳನು ಕೊಬ್ಬಿ ಅಯ್ಯುವಿಗೆ ನಾಲ್ಕು ಬಾರಿಸಿದನು. ಅಯ್ಯು ಗುಳ್ಳನ ಮೇಲೆ ಒಂದು ಕ್ರಿಮಿನಲ್

ಮೊಖದ್ದಮೆಯನ್ನೂ ಒಂದು ಸಿವಿಲ್ ಮೊಖದ್ದಮೆಯನ್ನೂ ಹೂಡಿದನು. ವೈರವು ಇಬ್ಬರಿಗೂ ಪೂರ್ಣವಾಗಿ ಮಸೆಯಿತು. ಒಬ್ಬರನ್ನೊಬ್ಬರು ನಿರ್ನಾಮ ಮಾಡಬೇಕೆಂದು ದೃಢ ಸಂಕಲ್ಪರಾದರು. ಗುಳ್ಳನು ಕೋರ್ಟಿಗೆ ತಿರುಗಲು ಪ್ರಾರಂಭಿಸಿದ ಮೇಲೆ ಮನೆಯಲ್ಲಿದ್ದ ಹಣವು ಖರ್ಚಾದುದಲ್ಲದೆ ಸಾಲವೂ ಆಯಿತು.

ಇತ್ತ ಅಯ್ಯುವಿನ ಲಾಯರು ಅವನಿಂದ ತೆಗೆಯಬೇಕಾದ ಫೀಸನ್ನೆಲ್ಲಾ ತೆಗೆದುಕೊಂಡನಂತರ, "ಸಾಕ್ಷಿಗಳಿಲ್ಲದಿದ್ದರೆ ಮೊಖದ್ದಮೆಯು ನಿನಗೆ ವಿರೋಧವಾಗುತ್ತೆ. ಇಲ್ಲಿ ಸರಿಯಾದ ಸಾಕ್ಷಿಗಳಿಲ್ಲದಿದ್ದರೆ ಮೇಲಿನ ಕೋರ್ಟಿಗೆ ಹೋಗುವುದು ಕಷ್ಟ" ಎಂದು ಹೇಳಿಬಿಟ್ಟರು. ಅಯ್ಯುವು ಊರಿಗೆ ಬಂದು ರೈತರನ್ನೆಲ್ಲಾ ನಿಜವಾದ ಸ್ಥಿತಿಯನ್ನು ಸಾಕ್ಷಿ ಹೇಳಬೇಕೆಂದು ಕೇಳಿದನು. ಬೂತಯ್ಯನವರ ಕೈಯಲ್ಲಿ ಬರೆಗಳನ್ನು ತಿಂದಿದ್ದ ರೈತರು ಒಬ್ಬರೂ ಅಯ್ಯುವಿನ ಪರವಾಗಿ ಸಾಕ್ಷಿ ಹೇಳಲು ಒಪ್ಪಲಿಲ್ಲ. ಬೂತಯ್ಯನವರ ಮಗನಾಗಿದ್ದುದೇ ಅಯ್ಯುವಿನ ವಿರೋಧವಾದ ಒಂದು ಬಲವಾದ ಸಾಕ್ಷಿಯಾಗಿದ್ದಿತು. ಊರಿನವರಲ್ಲಿ ಒಬ್ಬನಾದರೂ ಸತ್ಯವಂತನು ಇಲ್ಲದ್ದನ್ನು ಕಂಡು ಅಯ್ಯುವಿಗೆ ಆಶ್ಚರ್ಯವಾಯಿತು. ಅಷ್ಟು ಜನರೂ ಒಟ್ಟಾಗಿ ತನ್ನನ್ನು ದ್ವೇಷಿಸುವುದರ ಕಾರಣವೂ ಅವನಿಗೆ ತಿಳಿಯಲಿಲ್ಲ. "ಈ ಜನರು ಸ್ವಭಾವತಃ ಪಶುಗಳು, ಕಾಡುಮನುಷ್ಯರು; ಆದರೆ ದುಷ್ಟರು. ಇದನ್ನು ತಿಳಿದೇ ನಮ್ಮ ತಂದೆ ಇವರನ್ನು ಅರೆಯುತ್ತಿದ್ದುದು. ನನಗೂ ಇವತ್ತಿನವರೆಗೆ ಇವರಲ್ಲಿ ಅಲ್ಪಸ್ವಲ್ಪ ನಂಬಿಕೆ ಇದ್ದಿತು. ಇನ್ನು ಮೇಲೆ ಎಲ್ಲಾ ಹೋಯಿತು. ಇವರಲ್ಲಿ ಒಬ್ಬನಿಗೂ ಅಯ್ಯೋ ಎನ್ನಬಾರದು" ಎಂದುಕೊಂಡು ಅವನು ರೈತರನ್ನೂ ಗುಳ್ಳನನ್ನೂ ಹಣ್ಣುಮಾಡುವ ಉಪಾಯಗಳನ್ನು ಚಿಂತಿಸತೊಡಗಿದನು.

ಅಯ್ಯುವನ್ನು ಜೈಲಿನಲ್ಲಿರಿಸಲು ಗುಳ್ಳನು ತನ್ನ ಸರ್ವಸ್ವವನ್ನೂ ಆಗಲೇ ಕಳೆದಿದ್ದನು. ಗುಳ್ಳನನ್ನು ನುಂಗಿ ನೀರುಕುಡಿಯಲು ಅಯ್ಯುವು ತನ್ನ ಸರ್ವಸ್ವವನ್ನೂ ವೆಚ್ಚಮಾಡಲು ಸಿದ್ಧನಾಗಿದ್ದನು. ಅವನು ಗುಳ್ಳನ ಮೆಲೆಒಂದು ಡಿಕ್ರಿಯನ್ನು ತೆಗೆದುಕೊಂಡು ಅವನ ಮನೆಯನ್ನು ಹರಾಜಿಗೆ ಕೋರ್ಟಿನಲ್ಲಿ ಕೇಳಿದನು.

ಗುಳ್ಳನ ಮನೆಯನ್ನು ಹರಾಜಿಗೆ ಕೇಳಿದುದು ಗುಳ್ಳನಿಗೆ ಗೊತ್ತಾದಾಗ ಅವನಿಗೆ ಬಹಳ ಕೋಪ ಬಂದಿತು. ಹಣವನ್ನು ಕೊಡಲು ಅವನ ಕೈಯಲ್ಲಿ ಒಂದು ಕಾಸೂ ಇರಲಿಲ್ಲ. ಅಯ್ಯುವು ಬಾಯಲ್ಲಿ ಅಕ್ಕಿಕಾಳು ಹಾಕಿಕೊಳ್ಳುವಂತೆ ಮಾಡಿದ್ದ. ತನ್ನನ್ನು ಅವನು ಹುಚ್ಚು ನಾಯನ್ನು ಓಡಿಸುವಂತೆ ತನ್ನ ಮನೆಯಿಂದ ಓಡಿಸುವುದು ಅವನಿಗೆ ಸಹಿಸದಾಯಿತು. ಆ ರಾತ್ರಿ ಗುಳ್ಳನು ಮಚ್ಚನ್ನು ಒಂದೇ ಸಮನಾಗಿ ಹರಿತ ಮಾಡುತ್ತಿದ್ದನು. ಅದರ ಹರಿತವನ್ನು ನೋಡಿ ಗುಳ್ಳನಿಗೆ ಬಹಳ ಸಮಾಧಾನವಾಯಿತು. ಗುಳ್ಳನ ಸ್ವಭಾವವನ್ನು ಅರಿತಿದ್ದ ಅವನ ಹೆಂಡತಿಗೆ ಅವನ ಮುಖಭಾವವನ್ನೂ ಅವನು ಮಸೆಯುತ್ತಿದ್ದ ಮಚ್ಚನ್ನೂ ನೋಡಿ ಭಯವಾಯಿತು. ಅವಳು, "ಏನು ಮಾಡೋಕ ಹೀಗೆ ಮಚ್ಚನ್ನು ಮಸೀತೀರಿ?" ಎಂಬುದಾಗಿ ಕೇಳಿದಳು. ಗುಳ್ಳನು "ಆಯ್ಯನ ಬುಂಡೆ ಹಾರಿಸತೀನಿ" ಎಂದನು.

ಗುಳ್ಳನ ಹೆಂಡತಿಗೆ ಮೈಯಲ್ಲಿ ನಡುಕವುಂಟಾಯಿತು. ಕೈಕಾಲು ಬೆವರಿದುವು. ಆ ರಾತ್ರಿಯೆಲ್ಲಾ ಅವಳಿಗೆ ಭಯದ ಹೊರತು ಮತ್ತೇನೂ ತೋರಲಿಲ್ಲ. ಈ ಹೊಡೆದಾಟದಲ್ಲಿ ಬಂದೂಕದ ಏಟಿನಿಂದ ಗುಳ್ಳನು ಮೊದಲು ನಾಯಿಯಂತೆ

ಸಾಯುವುದು ಖಂಡಿತವೆಂದು ಅವಳಿಗೆ ನಂಬಿಕೆಯಾಯಿತು. ಒಂದು ತಿಂಗಳೊಳಗೆ ತಾಯಿಯಾಗಲಿರುವ ಆಕೆ ಬೇಸರಿಕೆಯಿಂದ ಊರ ಮುಂದೆ ಪೂರ್ಣ ಪ್ರವಾಹದಲ್ಲಿ ಹರಿಯುತ್ತಿದ್ದ ನದಿಗೆ ಬಿದ್ದು ಬಿಟ್ಟಳು. ಒಂದು ನಿಮಿಷದಲ್ಲಿ ಹೊ ಹೊ ಎಂದು ಗದ್ದಲವಾಯಿತು. ಊರಿಗೆ ಊರೇ ಹೊಳೆಯ ತೀರಕ್ಕೆ ಮಗುಚಿಕೊಂಡಿತು. ಆದರೆ ನೀರಿಗೆ ಇಳಿಯಲು ಯಾರಿಗೂ ಧೈರ್ಯವಿರಲಿಲ್ಲ. ಅಯ್ಯು ಒಬ್ಬನು ಮಾತ್ರ ಆ ನದಿಯನ್ನು ಪ್ರವಾಹದಲ್ಲಿ ಈಜಿದ್ದನು. ನದಿಯ ತೀರದಲ್ಲಿ ಎಲ್ಲೂ ಗುಳ್ಳನೂ ಕಾಣಲಿಲ್ಲ. ಅವರೆಲ್ಲರ ಲಕ್ಷ್ಯವೂ ಸ್ವಾಭಾವಿಕವಾಗಿ ಅಯ್ಯುವಿನ ಕಡೆಗೆ ಹೋಯಿತು. “ಅಯ್ನೋರು ಒಂದು ಪಕ್ಸ ನೀರಿಗೆ ಬಿದ್ದಿದ್ರೆ ಹಿಡಕೊಂಡು ಬರೋರು” ಎಂದು ಕೆಲವರು ಹೇಳಿಕೊಳ್ಳುತ್ತಿದ್ದರು. ಮತ್ತೆ ಕೆಲವರು “ಅಯ್ನೆ, ಗುಳ್ಳನ ಹೆಂಡ್ತಿನ ಬದುಕಿಸೋಕೆ ಸತ್ತರೂ ಅಯ್ಯ ನೀರಿಗೆ ಇಳಿಯೋಕಿಲ್ಲ” ಎಂದರು. ಆ ವೇಳೆಗೆ ಅಯ್ಯುವು ನದಿಯ ತೀರಕ್ಕೆ ಬಂದನು. ಪಂಚೆಯನ್ನು ಮೇಲಕ್ಕೆ ಬಿಗಿದು ಕಟ್ಟಿ ಸುಳಿ ಸುಳಿಯಾಗಿಯೂ ನೊರೆನೊರೆಯಾಗಿಯೂ ಭೋರ್ಗರೆಯುತ್ತಿದ್ದ ಪ್ರವಾಹದಲ್ಲಿ ಮುಳುಗಿಹೋದನು. ಅವನು ಬಿದ್ದ ಜಾಗದಿಂದ ಮೇಲಕ್ಕೆ ಹತ್ತಿದ ಜಾಗ ಸುಮಾರು ಮುನ್ನೂರು ಗಜ ದೂರದಲ್ಲಿದ್ದಿತು. ಅಯ್ಯುವು ಗುಳ್ಳನ ಹೆಂಡತಿಯನ್ನು ಹಿಡಿದುಕೊಂಡು ಬರುತ್ತಿರುವುದನ್ನು ತಿಗಳರೂ ಒಕ್ಕಲಿಗರೂ ನೋಡಿದರು. ಆ ಗಳಿಗೆಯಲ್ಲಿ ತಾವು ಆಜನ್ಮ ವೈರಿಗಳೆಂಬುದು ಅವರ ದೃಷ್ಟಿಯಿಂದ ಮರೆಯಾಗಿ ಊರಿಗೆ ಊರೇ ಆನಂದದ ಕೇಕೆ ಹಾಕಿತು.

ಒಂದುವಾರ ಗುಳ್ಳ ಅಯ್ಯುವಿಗೆ ಮುಖವನ್ನೇ ತೋರಿಸಲಿಲ್ಲ. ಅವನಿಗೆ ಬಹಳ ಪಶ್ಚಾತ್ತಾಪವಾಗಿರಬೇಕೆಂದು ಅಯ್ಯು ಯೋಚಿಸುತ್ತಿದ್ದನು. 'ಹಾಳು ವ್ಯಾಜ್ಯಕ್ಕೆ ಬೆಂಕಿ ಹಾಕಲಿ, ಸದ್ಯ ಆ ಮಹಾರಾಯ್ತಿ ಬದುಕಿಕೊಂಡಳಲ್ಲ. ಅವಳಿಗೆ ಇರುವಷ್ಟು ವಿವೇಕ ನಮಗೆ ಇಲ್ಲವಲ್ಲ. ನಾವು ಎರಡು ಕಾಲಿನ ದನಗಳು. ಇನ್ನು ಈ ಬಡಿದಾಟ ಸಾಕು. ಎಲ್ಲಾ ವೈರವನ್ನೂ ಕೊನೆಗಾಣಿಸಬೇಕು. ಎಲ್ಲಾ ಕೇಸುಗಳನ್ನೂ ಇಬ್ಬರೂ ವಾಪಾಸು ತೆಗೆದುಕೊಳ್ಳಬೇಕು' ಎಂದು ಭಾವಿಸಿದನು.

ಗುಳ್ಳನ ಮೊದಲನೆಯ ವ್ಯಾಜ್ಯದಲ್ಲೇ ಚಿನ್ನ ಬಿತ್ತಿದರೆ ಚಿನ್ನ ಬೆಳೆಯುವಂತಿದ್ದ ಖರ್ಜೂರದ ಮಣ್ಣಿನ ಹೊಲಗದ್ದೆಗಳೆಲ್ಲ ಲಾಯರ ಫೀಸಿಗೂ ಸಾಕ್ಷಿಗಳ ಲಂಚ ಮತ್ತು ಖುಮತ್ತಿಗೂ ಹೋಯಿತು.ಉಳಿದ ಬೋರೆಯ ಮೇಲಿನ ತಮಟೆ ಅಗಲದ ಪಾಳು ಹೊಲ ಕಂದಾಯದ ಬಾಕಿಗೆ ಹರಾಜಾಗಿ ಸರ್ಕಾರಕ್ಕೆ ಸೇರಿಕೊಂಡಿತು. ಕರು ಸತ್ತರೂ ಸೆಗಣಿಯ ನಾತ ತಪ್ಪಲಿಲ್ಲವೆಂಬಂತೆ ವ್ಯಾಜ್ಯ ಕೊನೆಗೂಂಡರೂ ಲಾಯರಫೀಸು ಪೂರ್ತಿ ಪಾವತಿಯಾಗಿರಲಿಲ್ಲ. ಲಾಯರ್ ಕೋರ್ಟಿನಲ್ಲಿ ದಾವಾ ಹಾಕಿದನು. ವಾರಂಟು ಬಂದಾಗ ಮನೆಯಬಾಗಿಲಲ್ಲಿ ಕುಳಿತಿದ್ದ ಗುಳ್ಳನನ್ನು ಅಮೀನನು ದಸ್ತಗಿರಿಮಾಡಿದನು, ವಿಚಾರ ಊರವರಿಗೆಲ್ಲಾ ತಿಳಿದಂತೆ ಅಯ್ಯುವಿಗೆ ತಿಳಿಯಿತು.ಅಯ್ಯುವು ಬಂದು ತಾನೇ ಗುಳ್ಳನ ಹಣವನ್ನು ಕೊಡುವುದಾಗಿ ಅಮೀನನಿಗೆ ಹೇಳಿದನು, ಮೊದಲು ಮೊದಲು ಗುಳ್ಳ ಏನುಮಾಡಿದರೂ ಅಯ್ಯುವಿನ ಹಣದಿಂದ ಬಿಡುಗಡೆ ಹೊಂದಲು ಒಪ್ಪಲಿಲ್ಲ, ಕೊನೆಗೆ ಅಯ್ಯುವು, “ನೀನು ನನ್ನ ಮನೆಯಲ್ಲಿ ಕೆಲಸಮಾಡಿ ಈ ಹಣವನ್ನು ತೀರಿಸುವಿಯಂತೆ” ಎಂದು ಹೇಳಿದ ಮೇಲೆ ಮಾತ್ರ ಗುಳ್ಳನು ಅಯ್ಯುವಿನಿಂದ ಹಣವನ್ನು ತೆಗೆದುಕೊಂಡನು.

ಅಯ್ಯುವು ಗುಳ್ಳ ಮಾಡಿದಷ್ಟು ಕೆಲಸ ಮಾಡಲಿ ಎಂದು ಸುಮ್ಮನೆ ಇದ್ದರೂ ಗುಳ್ಳನು ಮಾತ್ರ, ಒಂದು ಗಳಿಗೆಯೂ ಪೋಲುಮಾಡದ ಇತರ ಆಳುಗಳಿಗಿಂತ ಹೆಚ್ಚು ಶ್ರದ್ಧೆಯಿಂದ ದುಡಿಯುತ್ತಿದ್ದನು. ಅಯ್ಯು ಕೊಟ್ಟ ಸಾಲ ಬಡ್ಡಿಯೊಂದಿಗೆ ತೀರಿಸಬೇಕು ಎಂಬುದಷ್ಟೇ ಅವನ ಹಂಬಲವಾಗಿತ್ತು. ಮೃದು ಭಾವನೆಗಳು ಅವನ ಮನಸ್ಸನ್ನು ಹೊಕ್ಕಿರಲೇ ಇಲ್ಲ. ಅಯ್ಯುವಿನ ಮೇಲಿನ ದ್ವೇಷ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಸಾಲದ ಹಣ ಅವನು ತೀರಿಸಬೇಕಾದದ್ದು ಇಲ್ಲದಿದ್ದರೆ, ಅವನು ಎಂದೋ ಆಯ್ಯುವಿನ ಮೇಲೆ ಬಿದ್ದಿರುತ್ತಿದ್ದನು. ಬರಿಯ ಕೆಲಸದ ದೃಷ್ಟಿಯಿಂದ ಹೊರಗಡೆ ನೋಡುವವರಿಗೆ ಗುಳ್ಳನಂತಹ ಆಳೇ ಲೋಕದಲ್ಲಿ ಇಲ್ಲವೆಂದು ತೋರುತ್ತಿದ್ದಿತು. ಸಾಧನೆಯನ್ನು ಮಾಡುವ ಯೋಗಿಯಂತೆ ಗುಳ್ಳನು ಗೊತ್ತು ಮಾಡಿಕೊಂಡಿದ್ದ ಹತ್ತು ವರ್ಷ ಜೀತವನ್ನು ದೇವರೂ ಮನುಷ್ಯರೂ ಒಪ್ಪುವ ರೀತಿಯಲ್ಲಿ ದುಡಿದು ಹಣವನ್ನು ತೀರಿಸಿ ಬಿಟ್ಟನು.

ಹೀಗಿರಲು ಆ ದಿನ ಮಾರಿ ಜಾತ್ರೆಯಾದುದರಿಂದ ಯಾವ ಜೀತದ ಆಳೂ ಅಯ್ಯುವಿನ ಮನೆಗೆ ಮಲಗಲು ಬರಲಿಲ್ಲ. ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ಅಯ್ಯುವಿಗೆ ಸ್ವಲ್ಪ ಜೊಂಪು ಬಂದಿತು. ತಮಟೆಯ ಭೋರಾಟದಿಂದ ಅವನಿಗೆ ನಿದ್ರೆ ಬರಲಿಲ್ಲ. ಅರ್ಧರಾತ್ರಿಯ ಹೊತ್ತಿಗೆ ಯಾರೋ ಬಾಗಿಲನ್ನು ತಟ್ಟಿದರು. ಅಯ್ಯುವು ಲಾಂದ್ರವನ್ನು ದಪ್ಪಮಾಡಿಕೊಂಡು ಬಂದು ಬಾಗಿಲನ್ನು ತೆರೆದನು. ಬಾಗಿಲನ್ನು ಅರ್ಧ ತೆಗೆದ ನಂತರ ಅಯ್ಯುವು ಸ್ವಲ್ಪ ಬೆಚ್ಚಿ ಬಿದ್ದನು. ಆದರೆ ಅದನ್ನು ತೋರಿಸಿಕೊಳ್ಳದೆ ಬಾಗಿಲನ್ನು ಪೂರ್ತಿ ತೆಗೆದು ಹೊರಕ್ಕೆ ಬಂದನು. ಅವನ ಕಣ್ಣಿಗೆ ಮೊದಲು ಬಿದ್ದವನು ಗುಳ್ಳ, ಅವನು ಅಯ್ಯುವನ್ನ ನಂಗುವಂತೆ ನೋಡುತ್ತಿದ್ದನು. ಅವನ ಕಣ್ಣಿನಲ್ಲಿ ಆಗ ಕಂಡಷ್ಟು ದ್ವೇಷವೂ ಪಿಶಾಚತನವೂ ರಾಕ್ಷಸಭಾವವೂ ಅಯ್ಯುವಿಗೆ ಮತ್ತಾವಾಗಲೂ ಕಂಡಿರಲಿಲ್ಲ. ಗುಳ್ಳನ ಕೈಲಿ ದೊಣ್ಣೆಯಾಗಲಿ ಮಚ್ಚಾಗಲಿ ಇರಲಿಲ್ಲ. ಅವನ ಹಿಂದುಗಡೆ. ಊರಿನವರೆಲ್ಲಾ ಸಾಲಾಗಿ ಮಾತನಾಡದೆ ನಿಂತಿದ್ದರು. ಪ್ರತಿಯೊಬ್ಬನ ಕೈಲೂ ಒಂದೊಂದು ಆಯುಧ ಹೊಳೆಯುತ್ತಿತ್ತು. ಯಾವ ಕ್ಷಣದಲ್ಲೂ ಸಿಡಿಯುವ ಸಿಡಿಮದ್ದುಗಳಂತೆ ಇದ್ದ ಆ ರೈತರು ಗುಳ್ಳನ ಕಡೆಯೇ ನೋಡುತ್ತಾ ಅವನ ಸೂಚನೆಯನ್ನೇ ನಿರೀಕ್ಷಿಸುತ್ತಿದ್ದರು, ಅಯ್ಯುನ ಕೈಯಲ್ಲಿ ರಿವಾಲ್ವರ್ ಇದ್ದುದನ್ನು ಗುಳ್ಳನ ಹೊರತು ಮತ್ತಾರೂ ನೋಡಲಿಲ್ಲ. ಬಂದಿದ್ದವರು ಸಿಕ್ಕಿದುದನ್ನೆಲ್ಲಾ ಲೂಟಿಮಾಡಿದರು. ಮನೆಯಲ್ಲಿದ್ದ ಸೀರೆ ಪಂಚೆಗಳನ್ನೆಲ್ಲಾ ತೆಗೆದುಕೊಂಡರು. ಬೆಳ್ಳಿ ಪಾತ್ರೆಗಳೂ ಹಿತ್ತಾಳೆ ಪಾತ್ರೆಗಳೂ ರೈತರ ಪಾಲಾದುವು. ಇದ್ದ ಮಡಕೆಗಳೆಲ್ಲಾ ಅವರ ದೊಣ್ಣೆಗಳಿಗೆ ಆಹುತಿಯಾದುವು. ಒಬ್ಬನು ಕೊಡಲಿಯಿಂದ ಅಯ್ಯುವಿನ ಕಬ್ಬಿಣದ ಪೆಟ್ಟಿಗೆಗೆ ಒಂದು ಬಿಟ್ಟನು. ಆ ಏಟಿಗೆ ಅದು ಜಗ್ಗದುದರಿಂದ ಇನ್ನೂ ನಾಲ್ಕು ಐದು ದರೋಡೆಗಾರರು ಕೊಡಲಿಗಳೊಂದಿಗೆ ಅದರ ಹತ್ತಿರ ಬಂದರು. ಅಯ್ಯು ಪೆಟ್ಟಿಗೆಯ ಬೀಗದ ಕೈಯನ್ನು ಅವರ ಮುಂದೆ ಎಸೆದನು. ಅವರಿಗೆ ಬೀಗವನ್ನು ತೆಗೆಯಲು ಬಾರದುದರಿಂದ ತಾನೇ ಬೀಗವನ್ನು ತೆಗೆದುಕೊಟ್ಟನು. ಅದರಲ್ಲಿ ಕಾಗದ ಪತ್ರಗಳ ಗಂಟೂ ಕೆಲವು ಬೆಳ್ಳಿಯ ಪಾತ್ರೆಗಳೂ ಸ್ವಲ್ಪ ಹಣವೂ ಇದ್ದಿತು. ಕಳ್ಳರು ಎಲ್ಲವನ್ನೂ ತೆಗೆದುಕೊಂಡರು. ಅಯ್ಯುವಿನ ಹೆಂಡತಿಯು ಕೈಯಲ್ಲಿದ್ದ ಬಳೆಗಳನ್ನೂ ಕೆಳಕ್ಕೆ ಹಾಕಿದಳು. ಅದನ್ನು ತೆಗೆದುಕೊಳ್ಳಲು ಒಬ್ಬನು ಮುಂದಕ್ಕೆ ಬಂದನು. ಗುಳ್ಳನು ಹಾ ಎಂದು ಗದರಿಸಿದನು. ಬಳೆಗಳನ್ನು ಯಾರೂ ಮುಟ್ಟಲಿಲ್ಲ. ಗುಳ್ಳನು ಗದರಿಸಿದುದನ್ನು ಅಯ್ಯುವು ನೋಡಿ "ನೀನು ಇನ್ನೂ ನಮ್ಮವನೇ" ಎಂದುಕೊಂಡನು.

ಆದರೆ ಗುಳ್ಳನೂ ಕೂಡ ನಿರೀಕ್ಷಿಸದಿದ್ದ ಒಂದು ಕೆಲಸ ನಡೆದು ಹೋಯಿತು. ಅವರು ದನದ ಕೊಟ್ಟಿಗೆಯನ್ನು ಲೂಟಿ ಮಾಡುತ್ತಿರುವಾಗ ಲಾಂದ್ರವು ಕೆಳಕ್ಕೆ ಉರುಳಿ ಸೀಮೆ ಎಣ್ಣೆ ಚೆಲ್ಲಿ ಹುಲ್ಲಿಗೆ ಬೆಂಕಿ ಹತ್ತಿ ಕೊಂಡಿತು. ಒಂದೇ ನಿಮಿಷದಲ್ಲಿ ಅದು ಹರಡಿ ಕೊಟ್ಟಿಗೆಯಲ್ಲಿ ಸಾವಿರಾರು ದೀವಟಿಗೆಗಳ ಪ್ರಕಾಶವಾಯಿತು. ಹೋ ಹೋ ಎನ್ನುವುದರೊಳಗಾಗಿ ಕೊಟ್ಟಿಗೆಯ ಬೆಂಕಿ ಸೂರಿಗೆ ತಗಲಿ ಹರಡಲು ಮೊದಲಾಯಿತು. ಕೆಲವೇ ನಿಮಿಷಗಳಲ್ಲಿ ಉರಿಯು ಮನೆಯ ಸೂರಿಗೆ ತಗುಲಿಗಳುಗಳೆಲ್ಲ ಘಟಘಟನೆ ಬೇಯಲು ಪ್ರಾರಂಭವಾದವು. ಉರಿ ಜೋರಾದುದನ್ನು ಕಂಡ ಕೂಡಲೇ ರೈತರಿಗೆ ಗಾಬರಿಯಾಯಿತು. ಅವರು ಒಬ್ಬರಿಗೊಬ್ಬರು ಹೇಳದೆ ಕೇಳದೆ ಅಯ್ಯುವಿನ ಮನೆಯಿಂದ ಜಾರಿದರು. ಅಯ್ಯುವು ಹೆಂಡತಿ ಮಕ್ಕಳನ್ನು ಮನೆಯ ಹೊರಗಡೆ ಕೂರಿಸಿ ದನದ ಕೊಟ್ಟಿಗೆಗೆ ಹೋಗಿ ದನಗಳ ಹಗ್ಗವನ್ನು ಬಿಚ್ಚಿ ಹೊರಗೆ ಓಡಿಸಿದನು. ಆಮೇಲೆ ಏನನ್ನೂ ಮಾಡದೆ ಉರಿಯನ್ನು ನೋಡುತ್ತಾ ಸುಮ್ಮನೆ ಕುಳಿತಿದ್ದನು.

ಹೋಬಳಿಯ ಪೋಲೀಸ್ ಸ್ಟೇಷನ್ ಗೆ ಬೆಳಗ್ಗೆ ವರ್ತಮಾನ ತಿಳಿಯಿತು . ಅಲ್ಲಿಗೆ ಬಂದ ಪೋಲೀಸ್ ಇನ್ಸ್ಪೆಕ್ಟರ್ ಹಳ್ಳಿಯವರನ್ನೆಲ್ಲ ಸಾಲಾಗಿ ನಿಲ್ಲಿಸಿ ಅಯ್ಯುವಿಗೆ ಹೇಳಿ ಕಳಿಸಿದರು.ಅಯ್ಯುವು ಬಂದ ಕೂಡಲೇ ಇನ್ಸ್ ಪೆಕ್ಟರ್ "ಈ ಠಕ್ಕರಲ್ಲಿ ನಿಮ್ಮ ಮನೆ ಸುಟ್ಟವರು ಯಾರು ಗುರುತಿಸಿ?" ಎಂದರು. ಅಯ್ಯುವು ರೈತರನ್ನು ನೋಡಿದನು. ಅತ್ಯಂತವಾಗಿ ಹೆದರಿದ್ದ ಅವರು ಬಡಪ್ರಾಣಿಗಳಾಗಿ ಕಂಡರು.ಅಯ್ಯುವು ಗುಳ್ಳನ ಮುಖವನ್ನು ನೋಡಿದನು. ಅದು ಮೊದಲಿನಂತೆ ಕಠೋರವೂ ನಿಷ್ಠುರವೂ ಆಗಿದ್ದಿತು. ಅಯ್ಯುವು ನಿಶ್ಚಯಕ್ಕೆ ಬರಲು ಅದೇ ಸಾಕಾಯಿತು.

ಗುಳ್ಳ ರಾತ್ರಿ ಲೂಟಿಮಾಡುವಾಗ ನನ್ನ ಹೆಂಡತಿಯ ಒಡವೆಗಳನ್ನು ಮುಟ್ಟಲಿಲ್ಲ. ನಾನು ಅವನ ಹೆಂಡತಿಯನ್ನು ಉಳಿಸಿದುದು ಅವನ ಜ್ಞಾಪಕಕ್ಕೆ ಬಂದಿರಬಹುದು. ಪ್ರೀತಿಯನ್ನು ತೋರಿಸಿದರೆ ದುಷ್ಟನಾದ ಮನುಷ್ಯನೂ ಸಾತ್ವಿಕನಾಗುತ್ತಾನೆ. ನಾವು ಮನುಷ್ಯನಿಗೆ ಒಳ್ಳೆಯದನ್ನು ಮಾಡಿದರೆ ಅವನಲ್ಲಿರುವ ಒಳ್ಳೆಯ ಸ್ವಭಾವವೇ ಅಭಿವೃದ್ಧಿಯಾಗುತ್ತದೆ.

ಅಯ್ಯುವು ಇನ್ಸ್‌ಪೆಕ್ಟರಿಗೆ "ನನ್ನ ಮನೆಗೆ ಯಾರೂ ನುಗ್ಗಿರಲಿಲ್ಲ" ಎಂದನು. ಇನ್ಸ್‌ಪೆಕ್ಟರ್ ಬೆಚ್ಚಿಬಿದ್ದರು. ತಿಗಳರೂ ಒಕ್ಕಲಿಗರೂ ತಮ್ಮ ಕಿವಿಯನ್ನೇ ತಾವು ನಂಬದೆ ಹೋದರು. ಇನ್ಸ್‌ಪೆಕ್ಟರಿಗೆ ಕೋಪವೂ ಹತ್ತಿತು. ಅವರು, "ಹಾಗಾದರೆ ನಿನ್ನ ಮನೆ ಸುಟ್ಟವರು ಯಾರು?" ಎಂದು ಗದರಿಸಿದರು. ಅಯ್ಯುವು "ದನದ ಕೊಟ್ಟಿಗೆಯಲ್ಲಿ ಆಳು ಲಾಂದ್ರವನ್ನು ಮಡಗಿದ್ದ. ಎತ್ತು ಅದನ್ನು ಉರುಳಿಸಿತು. ಬೆಂಕಿ ಹುಲ್ಲಿಗೆ ಹತ್ತಿಕೊಂಡು ಮನೆ ಸುಟ್ಟು ಹೋಯಿತು" ಎಂದನು. ಅಯ್ಯುವಿನ ಮುಂದೆ ಇನ್ಸ್ ಪೆಕ್ಟರರ ಆಟ ಸಾಗಲಿಲ್ಲ. ಅವರು ಅದೇ ಮಧ್ಯಾಹ್ನ ಹೊರಟು ಹೋದರು. ಗುಳ್ಳ ಮನೆಗೆ ಹೋಗುತ್ತಿರುವಾಗ ಅಯ್ಯುವು ಅವನನ್ನು ನೋಡಿದನು. ಗುಳ್ಳನ ಮುಖದಲ್ಲಿ ಸ್ವಲ್ಪವೂ ದ್ವೇಷವಿರಲಿಲ್ಲ. ಆಶ್ಚರ್ಯವು ಮೂಡಿ ಮಾಯವಾಗಿ ಕೃತಜ್ಞತೆಯೂ ದೈನ್ಯವೂ ಅಲ್ಲಿ ತುಂಬಿದ್ದುವು.

ಈ ಹಿಂದೆ ಬೂತಯ್ಯನವರು ನದಿಯ ಆ ಬಾಯಿಗೆ ಕಟ್ಟೆ ಹಾಕಿ ಮಳೆಗಾಲದಲ್ಲೂ ನೀರಿನ ಪ್ರವಾಹವನ್ನು ತಡೆದು, ಯಾತದಿಂದ ತಮಗೆ ಬೇಕಾದಷ್ಟು ನೀರನ್ನು ಬಿಟ್ಟುಕೊಂಡು ಆ ಬಯಲನ್ನು ಸಾಗುವಳಿ ಮಾಡಬೇಕೆಂದು

ನಿಶ್ಚಯಿಸಿದರು. ಮೊದಲು ಮೊದಲು ಬೂತಯ್ಯನವರ ಈ ಯೋಚನೆಯನ್ನು ಕೇಳಿದವರಾರೂ ಅವರು ನಿಜವಾಗಿಯೂ ನದಿಗೆ ಕಟ್ಟೆಹಾಕಬೇಕೆಂದು ಯೋಚಿಸುತ್ತಿರುವರೆಂದು ನಂಬಲಿಲ್ಲ. ರೈತರಂತೂ ಆ ರೀತಿ ನದಿಗೆ ಕಟ್ಟೆಯನ್ನು ಹಾಕಿ ಅದರ ದಾರಿಯನ್ನು ತಡೆದರೆ ಅದು ಒಂದಿಲ್ಲ ಒಂದು ದಿನ ಸೇಡನ್ನು ತೀರಿಸಿಕೊಂಡೇ ಬಿಡುವುದೆಂದು ಹೆದರುತ್ತಿದ್ದರು. ಬೂತಯ್ಯನವರು ಪ್ರಕೃತಿಯ ಸೇಡಿಗೂ ಮನುಷ್ಯನ ಸೇಡಿಗೂ ಹೆದರುವವರಾಗಿರಲಿಲ್ಲ. ಅವರು ಇಂಜಿನಿಯರುಗಳನ್ನೂ ಓವರ್ಸೀಯರುಗಳನ್ನೂ ಕೇಳಿ ಅನೇಕ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ನದಿಯು ಕವಲೊಡೆಯುತ್ತಿದ್ದಲ್ಲಿ ಬಂದಾದ ಕಲ್ಲಿನ ಕಟ್ಟೆಯನ್ನು ಹಾಕಿದರು, ಅದರಲ್ಲಿ ಎಂಟು ಹತ್ತು ಯಾತಗಳನ್ನು ಇರಿಸಿದರು. ಮೊದಲು ನದಿಯ ನೀರು ನಿಲ್ಲುತ್ತಿದ್ದ ಬೈಲನ್ನೆಲ್ಲಾ ಗದ್ದೆಗಳನ್ನು ಮಾಡಿದರು. ಜಾಲಹಳ್ಳಿಯ ಸುತ್ತಮುತ್ತ ನೂರುಮೈಲಿ ಎಲ್ಲಿ ನೋಡಿದರೂ ಅಂತಹ 'ತಾಕು' ದೊರೆಯುತ್ತಿರಲಿಲ್ಲ. ಜಮೀನು ಹಳ್ಳ ತಿಟ್ಟುಗಳಿಲ್ಲದೆ ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಒಂದೇ ಸಮನಾಗಿ ಗಾಜಿನಂತೆ ತೋರುತ್ತಿದ್ದಿತು. ನದಿಯ ಆಸರೆಯಲ್ಲಿದ್ದುದರಿಂದ ಹನ್ನೆರಡು ತಿಂಗಳೂ ನೀರು ಬೇಕಾದಂತೆ ದೊರೆಯುತ್ತಿದ್ದಿತು, ಆ ವಿಶಾಲವಾದ ಬಯಲಿಗೆ 'ಜಾಲಹಳ್ಳಿಯ ಕಾಡು' ಎಂದೇ ಹೆಸರಾಯಿತು,

ಮೊದಲು ಬೂತಯ್ಯನವರ ಸಾಹಸವನ್ನು ಹುಚ್ಚು ಸಾಹಸವೆಂದು ಹೇಳಿದ ಜಾಲಹಳ್ಳಿಯ ಎಲ್ಲಾ ರೈತರೂ ಆ ಜಮೀನನ್ನು ಸಾಗುವಳಿ ಮಾಡಿ ಅದರಲ್ಲಿ ಕಬ್ಬನ್ನೂ ಭತ್ತವನ್ನೂ ಬೆಳೆಯುತ್ತಿದ್ದರು. ಇದರಿಂದ ಬೂತಯ್ಯನವರ ಕೀರ್ತಿಯು ಹೆಚ್ಚಾಯಿತು, ಅವರ ಉತ್ಪತ್ತಿ ಒಂದಕ್ಕೆ ನಾಲ್ಕು ಆಯಿತು, ಕಟ್ಟೆಯನ್ನು ನೋಡಿದವರೆಲ್ಲಾ ಅವರ ಸಾಹಸವನ್ನು ಕೊಂಡಾಡುತ್ತಿದ್ದರು. ಜಮೀನಿನ ಮಧ್ಯದಲ್ಲಿದ್ದರೆ ಒಳ್ಳೆಯದೆಂದುಕೊಂಡು ಬೂತಯ್ಯನವರು ಊರೊಳಗಿದ್ದ ತಮ್ಮ ಮನೆಯನ್ನು ಬಿಟ್ಟು ಜಾಲಹಳ್ಳಿ ಕಾಡಿನಲ್ಲಿ ಒಂದು ಮನೆಯನ್ನು ಕಟ್ಟಿಕೊಂಡು ಇರತೊಡಗಿದರು.

ಬೂತಯ್ಯನವರು ಜಾಲಹಳ್ಳಿ ಕಾಡನ್ನು ಸೃಷ್ಟಿಸಿ ಕಾವೇರಿಗೆ ಕಟ್ಟೆಯನ್ನು ಹಾಕಿದುದು ಸರಿಯಷ್ಟೆ. ಮಳೆಗಾಲದಲ್ಲಿ ನದಿಯ ಪ್ರವಾಹವು ಭೋರ್ಗರೆಯುತ್ತಾ ಕಟ್ಟೆಗೆ ರಾಚುತ್ತಿದ್ದಿತು. ಮಳೆಗಾಲ ನಾಲ್ಕು ತಿಂಗಳೂ ಒಂದು ಗಳಿಗೆಯೂ ಬಿಡುವಿಲ್ಲದೆ ಅಲೆಗಳೂ ಸುಳಿಗಳೂ ಕಲ್ಲಿನ ಕಟ್ಟೆಯನ್ನು ಬಡಿಯುವ ಸದ್ದು ಕೇಳಿಸುತ್ತಿದ್ದಿತು. ಬೂತಯ್ಯನವರು ಕಲ್ಪಾಂತದವರೆಗೆ ಕಟ್ಟೆಗೆ ಭಯವಿಲ್ಲವೆಂದು ಹೇಳುತ್ತಿದ್ದರೂ, ನದಿಯ ಹೊಡೆತವನ್ನು ಜ್ಞಾಪಿಸಿಕೊಂಡ ಕೂಡಲೇ ಮಳೆಗಾಲ ಪೂರ್ತಿಯಾಗುವವರೆಗೆ ಯಾರಿಗಾದರೂ ಆ ಬಯಲಿನಲ್ಲಿ ಇರಲು ಎದೆಯು ನಡುಗುತ್ತಿದ್ದಿತು. - ಅಯ್ಯುವಿನ ಮನೆ ಸುಟ್ಟಾಗ ಮಳೆಗಾಲವು ಪ್ರಾರಂಭವಾಗಿದ್ದರೂ ಅವನಿಗೆ ಕಟ್ಟೆಯ ಭಯ ಸ್ವಲ್ಪವೂ ಇರಲಿಲ್ಲ. ರೈತರಿಗೂ ಮೊದಲು ಒಂದೆರಡು ವರ್ಷ ಇದ್ದ ಭಯ ಕಟ್ಟೆಕಟ್ಟಿ ಮೂವತ್ತೈದು ವರ್ಷಗಳು ಶಾಶ್ವತವಾಗಿ ಅದು ನಿಂತ ಮೇಲೆ ಇರಲಿಲ್ಲ.

ಅಯ್ಯುವು ಮೈಸೂರಲ್ಲಿ ಖಾಯಿಲೆ ಬಿದ್ದಿದ್ದ ಚಿಕ್ಕಮ್ಮನನ್ನು ನೋಡಿಕೊಂಡು ಬರಲು ಅಲ್ಲಿಗೆ ಹೋಗಿದ್ದನು. ಅವನ ಮನೆಯಲ್ಲಿ ಅವನ ಹೆಂಡತಿ ಮಕ್ಕಳು ಮಾತ್ರ ಇದ್ದರು. ಮೈಸೂರಿನಿಂದ ಎರಡೇ ದಿನಗಳಲ್ಲಿ ಹಿಂತಿರುಗಬೇಕೆಂದು ಅಯ್ಯು ಹೋಗಿದ್ದರೂ ಚಿಕ್ಕಮ್ಮನ ಖಾಯಿಲೆ ಹೆಚ್ಚಾದುದರಿಂದ ಕೆಲವುದಿನ ಅಲ್ಲೇ ಇರಬೇಕಾಯಿತು. ಆ ವರ್ಷದ

ಮಳೆಗಾಲವನ್ನು, ಅಂತಹ ಪ್ರವಾಹವನ್ನೂ ಮತ್ತೆ ನಾವು ನಮ್ಮ ಜೀವಮಾನದಲ್ಲಿ ಕಾಣುವುದಿಲ್ಲವೆಂದು ಹೋರುತ್ತದೆ. ಆಗ ಬೆಟ್ಟಗುಡ್ಡಗಳೆಲ್ಲಾ ಕೆರೆಗಳಾದುವು. ಮಳೆ ಕುಂಭದ್ರೋಣವಾಗಿ ಸುರಿಯಿತು. ಆಕಾಶದ ಬಾಗಿಲು ತೆರೆದುಕೊಂಡು, ಮುಚ್ಚುವುದನ್ನು ಮರೆತಂತೆ ತೋರಿತು. ಕೆರೆಗಳೆಲ್ಲಾ ತುಂಬಿ ಕೋಡಿ ಹರಿದುವು, ಅನೇಕ ಕೆರೆಗಳು ಒಡದೇ ಹೋದುವು. ಕಾವೇರಿ ನದಿಯ ಆ ಆರ್ಭಟಕ್ಕೆ ಜನರು ನಡುಗಿದರು. ಅನೇಕ ಕಡೆ ಗದ್ದೆ ಹೊಲಗಳ ಮೇಲೆ ನದಿನುಗ್ಗಿ ಅಲ್ಲಿ ಹತ್ತಾಳು ಗಾತ್ರದ ಮರಳ ರಾಸಿಯನ್ನೇ ಬಿಟ್ಟಿತ್ತು. ಸಹಸ್ರಾರು ಹಳ್ಳಿಗಳು ನೆಲಸಮವಾದುವು. ಕಾಡಿನ ಮರಗಳೆಲ್ಲಾ ಬೇರು ಸಹಿತ ತೇಲಿ ಹೋದವು.

ಪ್ರಳಯವಾದ ಆ ರಾತ್ರಿ ಸುಮಾರು ಒಂದುಗಂಟೆ ಹೊತ್ತಿನಲ್ಲಿ ಬೂತಯ್ಯನವರ ಕಟ್ಟೆಕಿತ್ತು ಹೋಯಿತು. ಅಯ್ಯುವಿನ ಹೆಂಡತಿ ಇದೇನು ಸದ್ದೆಂದು ಬಾಗಿಲಿಗೆ ಬರುವವೇಳೆಗೆ ಸಮುದ್ರ ಅವರ ಮನೆಯ ಮೇಲೆ ಬರುತ್ತಿದ್ದಿತು. ಒಂದೇ ಒಂದು ಗಳಿಗೆ ಅವಳು ಏಳುವುದು ತಡವಾಗಿದ್ದರೂ ನೀರು ಮನೆಯೊಳಗೆ ಪೂರ್ಣ ನುಗ್ಗುತ್ತಿದ್ದಿತು. ಕಟ್ಟೆ ಒಡೆದಿದೆಯೆಂಬುದು ಅವಳಿಗೆ ಹೊಳೆದ ಕೂಡಲೆ ಅವಳ ಎದೆಯೂ ಒಡೆಯಿತು.

ಒಂದೇ ಗಳಿಗೆಯಲ್ಲಿ ಅವಳು ಇಬ್ಬರು ಮಕ್ಕಳನ್ನೂ ಎಬ್ಬಿಸಿಕೊಂಡು ಮನೆಯಲ್ಲಿ ಅತ್ಯಂತ ಎತ್ತರವಾದ ಬಿಸಿಲಿನ ಮಚ್ಚಿಗೆ ಹೋದಳು. ಜಾಲಹಳ್ಳಿ ಕಾಡು ಕಣ್ಣು ಮುಚ್ಚಿ ತೆರೆಯುವುದರೊಳಗೆ ನೀರಿನಿಂದ ತುಂಬಿಹೋಯಿತು. ನದಿಯ ನೀರೆಲ್ಲವೂ ಆ ಕಡೆ ನುಗ್ಗಿದುದರಿಂದ ಎರಡು ಮೈಲಿ ದೂರ ನೀರು ಹೊರತು ಮತ್ತೇನೂ ಕಾಣುತ್ತಿರಲಿಲ್ಲ. ಅಯ್ಯುವಿನ ಮನೆ ಪೂರ್ತಿ ಮುಳುಗಿ ಹೋಗಿತ್ತು. ಮಾಳಿಗೆ ಮಾತ್ರ ಮುಳುಗಿರಲಿಲ್ಲ. ಆದರೆ ನೀರು ನುಗ್ಗುತ್ತಿದ್ದುದರಿಂದ ಮಾಳಿಗೆಯೂ ಮುಳುಗಬಹುದೆಂದು ಅಯ್ಯುವಿನ ಹೆಂಡತಿಗೆ ಭಯದಿಂದ ಹುಚ್ಚು ಹತ್ತಿದಂತಾಗಿತ್ತು. ಮಕ್ಕಳು ಚಳಿಗೂ ಗಾಳಿಗೂ ಕಿರೋ ಎಂದು ಕಿರಿಚುತ್ತಿದ್ದುವು. ಬೆಳಗಿನವರೆಗೆ ಆ ಮನೆ ನಿಲ್ಲುವಂತೆ ತೋರಲಿಲ್ಲ. ಗೋಡೆಗಳೆಲ್ಲ ನೀರಿನಲ್ಲಿ ಮುಳುಗಿದ್ದುದರಿಂದ ಒಂದೆರಡು ಗಂಟೆಗಳೊಳಗೆ ಅವು ಕುಸಿದು ಬೀಳುವುದರಲ್ಲಿ ಸಂದೇಹವಿರಲಿಲ್ಲ. ಒಂದು ವೇಳೆ ಬೆಳಗಿನವರೆಗೂ ಮನೆ ನಿಂತಿದ್ದರೂ ಬೆಳಗಾದ ಮೇಲೂ ಎರಡು ಮೈಲಿ ನೀರನ್ನು ದಾಟಿಕೊಂಡು ಇವರನ್ನು ರಕ್ಷಿಸಲು ಯಾರೂ ಬರುವವರಾಗಿರಲಿಲ್ಲ. ಮಕ್ಕಳನ್ನು ತಬ್ಬಿಕೊಂಡು ಅಯ್ಯುವಿನ ಹೆಂಡತಿ ಸಾಯುವುದಕ್ಕೆ ಬದ್ಧಳಾದಳು. ಬೂತಯ್ಯನವರ ಯಾವ ಆಸ್ತಿಯೂ ಅವರನ್ನು ಉಳಿಸುವುದಾಗಿರಲಿಲ್ಲ.

ಮನೆ ಸುಟ್ಟ ಈಚೆಗೆ ಗುಳ್ಳನಿಗೆ ನಿದ್ರೆ ಚೆನ್ನಾಗಿ ಬರುವುದೇ ಕಡಿಮೆಯಾಗಿದ್ದಿತು. ಕಟ್ಟೆ ಒಡೆದ ಸದ್ದು ಕೇಳಿದ ಗುಳ್ಳನಿಗೆ ಒಂದೆರಡು ನಿಮಿಷ ಅದು ಯಾವ ಸದ್ದೆಂಬುದು ಹೊಳೆಯಲಿಲ್ಲ. ಇದು ಕಟ್ಟೆಯದು ಎಂದು ಅವನ ಮನಸ್ಸಿಗೆ ಬಂದ ಕೂಡಲೆ ಅವನ ಮೈ ಬೆವರಿತು, ಅಯ್ಯುವಿನ ಹೆಂಡತಿ ಮಕ್ಕಳು ಆ ಮನೆಯಲ್ಲಿರುವುದು ಅವನಿಗೆ ಗೊತ್ತಿದ್ದಿತು. ಆ ಬಯಲಿನ ಆಳವೂ ಅಲ್ಲಿಗೆ ನುಗ್ಗುವ ನೀರಿನ ಗಾತ್ರವೂ ಅವನಿಗೆ ಗೊತ್ತಿದ್ದುದರಿಂದ ಅಯ್ಯುವಿನ ಮನೆಯು ಅದರಲ್ಲಿದ್ದವರೊಂದಿಗೆ ಕೊಚ್ಚಿಕೊಂಡು ಹೋಗಿರುವುದು ಖಂಡಿತವೆಂದು ಅವನಿಗೆ ನಂಬಿಕೆಯಾಯಿತು. ಗುಳ್ಳನು ಕೂಡಲೆ ಮಲಗಿದ್ದಲ್ಲಿಂದ ಎದ್ದನು. ಒಂದು ನಿಮಿಷದೊಳಗಾಗಿ ಊರಿಗೆ ಊರೇ ಎಚ್ಚರಗೊಂಡಿತು.

ಅವರೆಲ್ಲರೂ ಪಂಜುಗಳನ್ನು ಹಿಡಿದುಕೊಂಡು ಜಾಲಹಳ್ಳಿ ಕಾಡಿನ ಕಡೆಗೆ ಹೊರಟರು. ಅವರಿಗೆ ಪರಿಚಿತವಾಗಿದ್ದ ಹೊಲಗದ್ದೆಗಳೂ ತೋಪುಗಳೂ ಕತ್ತುದ್ದ ನೀರಿನಲ್ಲಿ ನಿಂತಿದ್ದುವು, ರೈತರಾರಿಗೂ ಆ ನೀರಿನಲ್ಲೂ ಕತ್ತಲೆಯಲ್ಲೂ ಮುಂದೆ ಹೋಗಲು ಧೈರ್ಯವುಂಟಾಗಲಿಲ್ಲ. ನದಿ ಯಾವುದು? ಅದು ಒತ್ತಿ ನಿಂತಿರುವ ನೀರು ಯಾವುದು? ಎಂಬುದೇ ತಿಳಿಯದಷ್ಟು ಪ್ರವಾಹ ವಿಸ್ತಾರವಾಗಿತ್ತು. ಬೂತಯ್ಯನವರ ಕಾಲದಲ್ಲಿ "ಹೊಳೆಗೂ ಸಿಟ್ಟುಬರವೊಲ್ಲದಲ್ಲ", ಎನ್ನುತ್ತಿದ್ದ ರೈತರು ಅಯ್ಯುವಿನ ಹೆಂಡತಿ ಮಕ್ಕಳನ್ನು ಉಳಿಸಲು ತಮ್ಮ ಪ್ರಾಣವನ್ನು ಬೇಕಾದರೂ ಕೊಡಲು ಸಿದ್ಧರಾಗಿದ್ದರು.

ರಾತ್ರಿ ಕಗ್ಗತ್ತಲಾಗಿತ್ತು. ಅಪಾಯ ಅವರ ಬುದ್ಧಿಸಾಹಸಗಳನ್ನೂ ಮೀರಿದ್ದಿತು. ಅಯ್ಯುವಿನ ಮನೆಯ ದಿಕ್ಕನ್ನು ಊಹಿಸುವುದೂ ಕಷ್ಟವಾಗಿತ್ತು. ನೀರಿನೊಳಕ್ಕೆ ಒಂದು ಸಲ ಇಳಿದ ಮೇಲೆ ಮತ್ತೆ ಮೇಲೆ ಸುರಕ್ಷಿತವಾಗಿ ಹತ್ತುವ ನಂಬಿಕೆ ಯಾರಿಗೂ ಇರಲಿಲ್ಲ. ಅಯ್ಯುವು ಜನರ ಮನಸ್ಸನ್ನು ಆ ರೀತಿ ಪರಿವರ್ತಿಸದೆ ಇರುತ್ತಿದ್ದರೆ ರೈತರು ಹಾಸಿಗೆಯನ್ನೇ ಬಿಟ್ಟು ಏಳುತ್ತಿರಲಿಲ್ಲ. ಮನುಷ್ಯನ ಒಳ್ಳೆಯ ಸ್ವಭಾವವೇ ಕೊನೆಯಲ್ಲಿ ಜಯಿಸುತ್ತದೆ ಎಂಬ ಅಯ್ಯುವಿನ ನಂಬಿಕೆ ರೈತರಿಗೂ ನಿದರ್ಶನಕ್ಕೆ ಬಂದಿತು. ಅಯ್ಯುವಿನ ಮನೆಯೂ ಅವನ ಹೆಂಡತಿ ಮಕ್ಕಳೂ ಅಷ್ಟುಹೊತ್ತಿಗೇ ಕೊಚ್ಚಿಕೊಂಡು ಹೋಗಿರುವುದು ಖಂಡಿತವೆಂದು ರೈತರಿಗೆ ನಂಬಿಕೆಯಾದರೂ ಅವರನ್ನು ಉಳಿಸಲು ಸಾಹಸಮಾಡಲೇಬೇಕೆಂದು ಅವರು ನಿಶ್ಚಯಿಸಿದರು. ಅರ್ಧಗಂಟೆಯೊಳಗಾಗಿ ಒಂದು ತೆಪ್ಪವನ್ನು ಕಟ್ಟಿದರು. ತೆಪ್ಪ ಸ್ವಾಧೀನ ತಪ್ಪಿ ನೀರು ಪಾಲಾಗುವುದೆಂದು ರೈತರು ಹೆದರಿದರು. ತೆಪ್ಪದ ಮೇಲೆ ಹೊರಟ ನಾಲ್ಕು ರೈತರಂತೂ ತಮ್ಮ ಜೀವದ ಆಸೆಯನ್ನೇ



ಬಿಟ್ಟರು. ತೆಪ್ಪವೂ ಅವರೂ ಹಿಂದಿರುಗುವುದು ಯಾರೂ ನಿರೀಕ್ಷಿಸಲಿಲ್ಲ.

ತೆಪ್ಪದಲ್ಲಿ ಕುಳಿತ ನಾಲ್ವರ ಪೈಕಿ ಗುಳ್ಳನೇ ಮೊದಲನೆಯವನೂ ಮುಖಂಡನೂ ಆಗಿದ್ದನು. ಪಂಜಿನ ಬೆಳಕಿನಲ್ಲಿ ಅವರು ನಿಧಾನವಾಗಿ ತೆಪ್ಪವನ್ನು ನಡೆಸಿಕೊಂಡು ಹೊರಟರೂ ಕತ್ತಲೆಯಲ್ಲಿ ಅವರಿಗೆ ಅಯ್ಯುವಿನ ಮನೆಯು ಯಾವ ಜಾಗದಲ್ಲಿ ಇರಬಹುದೆಂಬುದರ ಗುರುತು ಹತ್ತಲಿಲ್ಲ. ಅನೇಕ ಕಡೆ ತೆಪ್ಪವು ಗುತ್ತಿಗಳಿಗೂ ಮುಳುಗಿದ್ದ ಮೋಟು ಮರಗಳಿಗೂ ತಗುಲಿ ತಲೆ ಕೆಳಗಾಗುವುದರಲ್ಲಿದ್ದಿತು. ಮಧ್ಯದಲ್ಲಿ ಒಂದು ಸಲ ಗುಳ್ಳನು ಒಂದೆರಡು ಸಲ ಕೂಗನ್ನು ಹಾಕಿದನು. ಮನುಷ್ಯನ ಧ್ವನಿಯು ಕೇಳಿತೇ ಎಂದು ಕಾತರಿಸುತ್ತಿದ್ದ ತಾಯಿ ಮಕ್ಕಳು ಕೂಗಿನಲ್ಲಿ ಪ್ರತ್ಯುತ್ತರವನ್ನು ಕೊಟ್ಟರು. ಹೀಗೆ ಸುಮಾರು ಹೊತ್ತು ನಡೆದು ತೆಪ್ಪವು ಎಡಕ್ಕೂ ಬಲಕ್ಕೂ ತಿರುಗಿ ಕೊನೆಗೆ ಅಯ್ಯುವಿನ ಮನೆಯ ಹತ್ತಿರಕ್ಕೆ ಹೋಯಿತು. ಅಯ್ಯುವಿನ ಹೆಂಡತಿ ಮಕ್ಕಳು ತೆಪ್ಪದಲ್ಲಿ ಕುಳಿತರು. ನೀರಿನ ಸೆಳೆತ ನದಿಯ ಕಡೆಗೆ ಇದ್ದಿತು. ನದಿಯ ವೇಗಕ್ಕೆ ತೆಪ್ಪವು ಸಿಕ್ಕಿದ್ದರೆ ಅವರ ಗತಿ ದೇವರೇ ಗತಿ, ಅದು ವೇಗಕ್ಕೆ ಸಿಕ್ಕದಂತೆ ಒತ್ತು ನೀರಿನಲ್ಲಿ ಅದನ್ನು ಹಿಂದಕ್ಕೆ ತರಬೇಕಾದರೆ ಜನಸಹಾಯ ತೆಪ್ಪಕ್ಕೆ ಹೆಚ್ಚಾಗಿ ಬೇಕಾಗಿದ್ದಿತು. ಆದರೆ ತೆಪ್ಪವು ಅಷ್ಟು ಜನರ ಭಾರವನ್ನು ತಡೆಯುವಷ್ಟು ಬಲವಾಗಿರಲಿಲ್ಲ. ನದಿಯ ಕಡೆಯ ವೇಗವನ್ನು ತಪ್ಪಿಸಿ ನಿಲ್ಲು ನೀರಿನ ಕಡೆಗೆ ತೆಪ್ಪವನ್ನು ತಿರುಗಿಸುವುದು ಬಹಳ ಕಷ್ಟವಾಯಿತು. ಗುಳ್ಳನೂ ಉಳಿದ ಮೂರು ಜನ ರೈತರೂ ಜೀವದ ಆಸೆಬಿಟ್ಟು ಹುಟ್ಟಿಗಣೆಗಳ ಜತೆಯಲ್ಲಿ ಹೆಣಗಿದರು. ತೆಪ್ಪದ ಭಾರವು ಹೆಚ್ಚಾದುದರಿಂದ ಸ್ವಲ್ಪದೂರ ಬಂದು ರೈತರು ಒಬ್ಬೊಬ್ಬರಾಗಿ ತೆಪ್ಪದಿಂದ ಜಾರಿ ನೀರಿನಲ್ಲಿ ನಿಂತಿದ್ದ ಮರಗಳ ತುದಿಯನ್ನು ಏರಿದರು. ಕೊನೆಗೆ ಗುಳ್ಳನೂ ಅಯ್ಯುವಿನ ಹೆಂಡತಿ ಮಕ್ಕಳು ಮಾತ್ರವೇ ತೆಪ್ಪದಲ್ಲಿ ಉಳಿದರು. ಗುಳ್ಳನ ಮೈಯಲ್ಲಿ ಬೆವರು ಹರಿಯುತ್ತಿದ್ದಿತು. ಬೆಳಗಿನ ಜಾವಕ್ಕೆ ತೆಪ್ಪವು ಬದಿಗೆ ಬಂದಿತು. ಗುಳ್ಳನು ಮತ್ತೆ ಹೋಗಿ ನೀರಿನಲ್ಲಿ ಮರಗಳ ಮೇಲೆ ಕುಳಿತಿದ್ದ ಮೂವರನ್ನು ಕರೆದುಕೊಂಡು ಬಂದನು. ಬೆಳಗಾದ ಮೇಲೆ ನೋಡಿದಾಗ ಆಯ್ಯುವಿನ ಜಾಲಹಳ್ಳಿ ಕಾಡಿನಮನೆ ಇರಲಿಲ್ಲ. ತೇಲಿ ಹೋಗಿದ್ದಿತು. ಕಟ್ಟೆ ಒಡೆದ ಸಮಾಚಾರ ತಿಳಿದು ಅಯ್ಯು ಮಾರನೇ ದಿನ ಜಾಲಹಳ್ಳಿಗೆ ದೌಡಾಯಿಸಿಕೊಂಡು ಬಂದನು.

ಇದು ನಡೆದು ಈಗ ಹದಿನಾಲ್ಕು ಮರುಷಗಳಾದುವು. ಅಯ್ಯುವಿನ ಮನೆಯಿಂದ ಕಳವಾದ ವಸ್ತುಗಳೆಲ್ಲಾ ಒಂದೊಂದಾಗಿ ಅವನ ಮನೆಗೆ ರೈತರಿಂದಲೇ ಒಂದುವು. ಅವನ ಆಸ್ತಿ ವೈವಟ್ಟು ಬೂತಯ್ಯನವರ ಕಾಲದಲ್ಲಿ ಇದ್ದುದಕ್ಕಿಂತ ಸ್ವಲ್ಪವೂ ಕಡಿಮೆಯಾಗಿಲ್ಲ. ಅವನಿಗೆ ರೈತರ ಭಯವೂ ರೈತರಿಗೆ ಅವನ ಭಯವೂ ಇಲ್ಲ. ಗುಳ್ಳನು ಈಗಲೂ ಅವನ ಮನೆಯ ಆಳು. ಊರಲ್ಲಿ ಯಾರ ಬಾಯಲ್ಲಿ ಕಳೆದರೂ “ಬೇಕಾದ್ದು ಬರಲಿ. ಅಯ್ನೋರು ಆತ್ಕೋತಾರೆ” ಎಂಬುದೇ ಮಾತಾಗಿದೆ. ಬೂತಯ್ಯನು ಜನರನ್ನು ದೆವ್ವದಂತೆ ಕಾಡಿದ್ದರೆ ಅವನ ಮಗ 'ಅಯ್ಯು'ವು ಈಗ ಅವರನ್ನು ದೇವರಂತೆ ಕಾಪಾಡುತ್ತಿದ್ದ.

## ಲೇಖಕರ ಪರಿಚಯ



ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ೧೯೦೪ರ ಜುಲೈ ೪ರಂದು ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಮದರಾಸಿನ ಲೋಕಮಿತ್ರ ಹಾಗೂ ಭಾರತಿ ಪತ್ರಿಕೆಗಳಲ್ಲಿ ಉಪಸಂಪಾದಕರಾಗಿ ಇವರು ಕೆಲಸ ಮಾಡಿದ್ದಾರೆ. ಸಾಹಿತ್ಯ ರಶ್ಮಿ, ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು, ಹಳ್ಳಿ ಚಿತ್ರಗಳು, ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು, ಗರುಡಗಂಬದ ದಾಸಯ್ಯ, ಕಥೆಗಳು ಮತ್ತು ವಿನೋದ ಚಿತ್ರಗಳು - ಇವರ ಪ್ರಬಂಧ ಸಂಕಲನಗಳಾಗಿವೆ. ಪುನರ್ಜನ್ಮ, ಭಗವಾನ್ ಕೌಟಿಲ್ಯ, ಮಲೆನಾಡವರು, ಮೆರವಣಿಗೆ, ಕ್ರೌಂಚವಧೆ, ರಾಜನರ್ತಕಿ, ಊರ್ವಶಿ, ಹೇಮಾವತಿ ಮೊದಲಾದ ಕಾದಂಬರಿಗಳನ್ನು ಇವರು ರಚಿಸಿದ್ದಾರೆ. ಉಸುಬು, ಕನ್ಯಾಕುಮಾರಿ ಮತ್ತು ಇತರ ಕಥೆಗಳು, ಕಮ್ಮಾರ ವೀರಭದ್ರಾಚಾರಿ, ಗೋಪುರದ ಬಾಗಿಲು, ಬೆಸ್ತರ ಕರಿಯ, ವೈಯ್ಯಾರಿ, ಶಿವರಾತ್ರಿ ಮುಂತಾದ ಸಣ್ಣಕಥಾಸಂಕಲನಗಳನ್ನೂ ಹಲವು ಅನುವಾದಿತ ಕೃತಿಗಳನ್ನೂ ರಚಿಸಿದ್ದಾರೆ. 'ಅಮೆರಿಕಾದಲ್ಲಿ ಗೊರೂರು' ಅವರ ಪ್ರವಾಸ ಕಥನವಾಗಿದೆ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರತಿದೆ. ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ, ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಮೊದಲಾದವುಗಳು ಅವರಿಗೆ ಸಂದ ಗೌರವ ಪ್ರಶಸ್ತಿಗಳಾಗಿವೆ.

ಪ್ರಸ್ತುತ ಕಥೆಯು ಅವರ 'ವೈಯಾರಿ' ಕಥಾಸಂಕಲನದ 'ಬೂತಯ್ಯನ ಮಗ ಅಯ್ಯು' ಕಥೆಯ ಸಂಗ್ರಹ ರೂಪವಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅಯ್ಯು ಮತ್ತು ಗುಳ್ಳನ ನಡುವೆ ವ್ಯಾಜ್ಯವು ಬೆಳೆಯಲು ಕಾರಣವಾದ ಘಟನೆ ಯಾವುದು?
2. ಗುಳ್ಳನ ಹೆಂಡತಿ ಹೊಳೆಗೆ ಹಾರಲು ಕಾರಣವೇನು?
3. ರೈತರು ಅಯ್ಯುವಿನ ಮನೆಯನ್ನು ಲೂಟಿ ಮಾಡಿದ ಘಟನೆಯನ್ನು ವಿವರಿಸಿ ಬರೆಯಿರಿ.
4. ಜಾಲಹಳ್ಳಿಯ ಮನೆಯಿಂದ ಅಯ್ಯುವಿನ ಹೆಂಡತಿ ಮಕ್ಕಳನ್ನು ರೈತರು ಹೇಗೆ ರಕ್ಷಿಸಿದರು?

## ಪಾತ್ರಚಿತ್ರಣ ಮಾಡಿರಿ

'ಕಟ್ಟೆ ಒಡೆದಾಗ' ಕಥೆಯಲ್ಲಿ ಬರುವ ಅಯ್ಯುವಿನ ಪಾತ್ರ ಚಿತ್ರಣ ಮಾಡಿರಿ

## ಸಮರ್ಥಿಸಿ ಬರೆಯಿರಿ

'ಕಟ್ಟೆ ಒಡೆದಾಗ' ಶೀರ್ಷಿಕೆಯು ಪಾಠಕ್ಕೆ ಹೇಗೆ ಹೊಂದಿಕೊಳ್ಳುತ್ತದೆ? ಎಂಬುದನ್ನು ಸಮರ್ಥಿಸಿ ಬರೆಯಿರಿ.

## ಪತ್ರ ಬರೆಯಿರಿ

'ಕಟ್ಟೆ ಒಡೆದಾಗ' ಕಥೆಯನ್ನು ವಿವರಿಸುತ್ತಾ ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

## ಚರ್ಚಾಗೋಷ್ಠಿ ನಡೆಸಿರಿ

ಗಣಿಗಾರಿಕೆ, ಅಣೆಕಟ್ಟು ನಿರ್ಮಾಣ, ರಸ್ತೆ ನಿರ್ಮಾಣ ಮೊದಲಾದ ಪ್ರಗತಿಪರ ಕಾರ್ಯಗಳು ದೇಶದ ಅಭಿವೃದ್ಧಿಗೆ ಅಗತ್ಯವಲ್ಲವೇ? ಆದರೆ ಈ ನಿರ್ಮಾಣ ಕಾರ್ಯಗಳು ಪ್ರಕೃತಿ ವಿಕೋಪಗಳಿಗೂ ಕಾರಣವಾಗುತ್ತವೆಯಲ್ಲವೇ? ಹಾಗಾದರೆ ಅಭಿವೃದ್ಧಿ ಕಾರ್ಯಗಳನ್ನು ಹೇಗೆ ನಡೆಸಬೇಕು? ಎಂಬ ವಿಷಯದ ಬಗ್ಗೆ ಚರ್ಚಾಗೋಷ್ಠಿ ನಡೆಸಲು ಅಗತ್ಯವಾದ ಪ್ರಬಂಧ ಬರೆದು ತರಗತಿಯಲ್ಲಿ ಮಂಡಿಸಿರಿ.

## ವಾರ್ತಾ ವಾಚನ ಮಾಡಿರಿ

'ಕಟ್ಟೆ ಒಡೆದಾಗ' ಕಥೆಯಲ್ಲಿ ಬಂದಿರುವ ಪ್ರಕೃತಿ ದುರಂತ ಮತ್ತು ಅದರ ಪರಿಣಾಮಗಳನ್ನು ದೂರದರ್ಶನದಲ್ಲಿ ಬಿತ್ತರಿಸಲು ಒಂದು ವಾರ್ತೆಯನ್ನು ಕಂಪ್ಯೂಟರಿನ ಸಹಾಯದಿಂದ ಸಿದ್ಧಪಡಿಸಿ ತರಗತಿಯಲ್ಲಿ ಪ್ರಸ್ತುತಪಡಿಸಿರಿ.

# 3. ಸಹಮತ - ಸಹಪಥ

ಸ್ತ್ರೀ ಪುರುಷ ಸಮಾನತೆಯೇ ಸಮಾಜದ ಅಸ್ತಿವಾರ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಅಂದರೆ 'ಎಲ್ಲಿ ಸ್ತ್ರೀ ಆರಾಧಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ.' ಸ್ತ್ರೀಯರನ್ನು ಶಕ್ತಿ ಸ್ವರೂಪಿಣಿಯಾಗಿ ಪೂಜಿಸಿದ ದೇಶ ನಮ್ಮದು. ಒಂದು ಕುಟುಂಬದ ಔನ್ನತ್ಯದಲ್ಲಿ ಸ್ತ್ರೀಯರ ಪಾತ್ರವು ಮಹತ್ವದ್ದಾಗಿದೆ. ಸಂಸಾರ ರಥವನ್ನು ಸರಿಯಾಗಿ ಎಳೆಯಬೇಕಾದರೆ ಗಂಡು - ಹೆಣ್ಣು ಸಮಾನರಾಗಿ ಒಬ್ಬರಿಗೊಬ್ಬರು ಹೊಂದಿಕೊಂಡು ಬಾಳಬೇಕು. ಸ್ತ್ರೀ ಪುರುಷರಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಇಬ್ಬರ ಸ್ಥಾನ ಮತ್ತು ಕರ್ತವ್ಯಗಳು ಬೇರೆ ಬೇರೆ. ಇಂದು ಸ್ತ್ರೀಯರು ವಿಭಿನ್ನ ಕ್ಷೇತ್ರಗಳಲ್ಲಿ ದುಡಿದು ಕುಟುಂಬ ನಿರ್ವಹಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಾರೆ.



ವಿಜಯಲಕ್ಷ್ಮಿ ರಮಣನ್ - ಭಾರತೀಯ ವಾಯು ಸೇನೆ

'ಸಹಮತ-ಸಹಪಥ' ಎಂಬ ಈ ಘಟಕದಲ್ಲಿ ಶ್ರೀಮತಿ ಸುನಂದಾ ಬೆಳಗಾಂವ್ಕರ್ ಅವರು ಬರೆದ 'ಗೂಡುಬಿಟ್ಟು ಹಾರಿದ ಹಕ್ಕಿ' ಎಂಬ ಕಥೆಯು ಒಂದು ಕುಟುಂಬದ ಏಳಿಗೆಯಲ್ಲಿ ಅಜ್ಜಿಯ ಪಾತ್ರದ ಮಹತ್ವವನ್ನು ತಿಳಿಸುತ್ತದೆ. ಇದು ನಮ್ಮ ಸಂಸ್ಕೃತಿಯ ಮೂಲವಾದ 'ಮಾತೃದೇವೋ ಭವ' ಎಂಬ ತತ್ವವನ್ನು ನೆನಪಿಗೆ ತರುತ್ತದೆ.



ಪ್ರಿಯಾ ಝಿಂಗಾನ್ - ಭಾರತೀಯ ಸೇನೆ

ಎರಡನೆಯ ಪಾಠವಾದ ಶ್ರೀಕೃಷ್ಣಯ್ಯ ಅನಂತಪುರ ಅವರು ಬರೆದ 'ಬೇರುಗಳು ಅಮ್ಮನ ಹಾಗೆ' ಎಂಬ ಕವನವು ಮರಗಳು ಬೇರುಗಳ ಮೂಲಕ ಬೇಕಾದ ಪೋಷಕಾಂಶಗಳನ್ನೆಲ್ಲ ಹೀರಿಕೊಂಡು ದೊಡ್ಡದಾಗಿ ಬೆಳೆದು ಮರವಾದಾಗ ತನಗೆ ಉಸಿರಾದ ಬೇರುಗಳ ತ್ಯಾಗವನ್ನು ಗಮನಿಸುವುದಿಲ್ಲ. ಅಂತೆಯೇ ಕುಟುಂಬದಲ್ಲಿ ಅಮ್ಮನ ನಿಸ್ವಾರ್ಥ ಸೇವೆ, ಸಮರ್ಪಣ ಮನೋಭಾವವನ್ನು ಯಾರೂ ಅರ್ಥೈಸಿಕೊಳ್ಳುವುದಿಲ್ಲ ಎಂಬ ವಾಸ್ತವಾಂಶವನ್ನು ತಿಳಿಸುತ್ತದೆ.

'ಮಹಿಳೆ ಮತ್ತು ಸಮಾಜ ಸೇವೆ' ಎಂಬ ಡಾ. ವರದಾ ಶ್ರೀನಿವಾಸ್ ಅವರು ಬರೆದ ವೈಚಾರಿಕ ಲೇಖನವು ಸ್ತ್ರೀಯು ವಿಭಿನ್ನ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದು, ಸಮಾಜ ಸೇವೆಯಲ್ಲೂ ತನ್ನನ್ನು ತಾನು ಗುರುತಿಸಿರುತ್ತಾಳೆ. ಅವಳ ಸೇವಾ ಮನೋಭಾವ ಮನೆಯಿಂದ ಪ್ರಾರಂಭವಾಗಿ ಸಮಾಜಕ್ಕೆ ವಿಸ್ತರಿಸುತ್ತದೆ ಎಂಬುದನ್ನು ತಿಳಿಸುತ್ತದೆ.



ಏಷ್ಯಾದ ಮೊದಲ ಲೋಕೋ ಪೈಲಟ್ ಸುರೇಖ ಯಾದವ್ ಸೋಲಾಪುರ

# ಹೆಣ್ಣು ಮನೆಯ ಕಣ್ಣು

ಕುಟುಂಬದ ಅಡಿಪಾಯವಾಗಿ
ಅಸ್ತಿತ್ವವಾಗುವವಳು ಹೆಣ್ಣು,
ಸಕ್ರಿಯಳೂ ಸಬಲಳೂ ಶಕ್ತಿಯೂ ಹೆಣ್ಣು

ಸಹನೆಯಲ್ಲೂ ಪ್ರೀತಿಯ ರೂಪ
ಮಮತೆ ವಾತ್ಸಲ್ಯ ಕರುಣೆಯ ಪ್ರತೀಕ
ಸುಖಸಂಸಾರಕ್ಕೆ ಆಧಾರ
ಮನೆ ಮನದ ನೋವಿಗೆ ಅವಳೇ ಪರಿಹಾರ
ಹೆಣ್ಣು ಮನೆಯ ಕಣ್ಣು

ನಂಬಿದ ಕಣ್ಣುಗಳಿಗೆ ರೆಪ್ಪೆಯಾಗಿ,
ಮರದಂತೆ ನೆರಳಾಗಿ...
ಕಣ್ಣಲ್ಲಿ ಕಾಣದೆ, ಕೈಯಲ್ಲಿ ಮುಟ್ಟದೆ ಮನದಲ್ಲಿಯೇ...
ಜಗವರಿಯ ಬಲ್ಲವಳು ಹೆಣ್ಣು
ಹೆಣ್ಣು ಮನೆಯ ಕಣ್ಣು

ಗುರುವಾಗಿ ತಿದ್ದಿ ದೀಪವಾಗುವವಳೂ
ಮುಗುಳ್ನಗೆಯ ಮುಗ್ಧಳೂ ಹೆಣ್ಣು
ನೋವನ್ನು ನುಂಗಿ,
ನಗೆ ಬೀರುವಳು ಹೆಣ್ಣು

**ಸುಲೈಮಾನ್ ಪಿ.ಎಸ್.**

- ಮೇಲೆ ಕೊಡಲಾದ ಕವನವನ್ನು ಓದಿದಿರಲ್ಲವೇ? ಅದರ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

# 1. ಗೂಡು ಬಿಟ್ಟು ಹಾರಿದ ಹಕ್ಕಿ

ಶ್ರೀಮತಿ ಸುನಂದಾ ಬೆಳಗಾಂವ್ಕರ್

ನನಗೊಬ್ಬ ಅಜ್ಜಿ ಇದ್ದಳು. ಆ ಅಜ್ಜಿ ಈಗಿಲ್ಲ ಎಂದು ಬರೆಯುವುದಕ್ಕೆ ದುಃಖವಾಗುತ್ತದೆ. ಅವಳು ನಮ್ಮನ್ನು ಪ್ರೀತಿಸುವುದಕ್ಕಾಗಿಯಾದರೂ ಜೀವಂತವಿರಬೇಕಿತ್ತು. ಎಂಥ ಸ್ವಾರ್ಥ! ಕಣ್ಣು, ಕಿವಿ ತಮ್ಮ ವ್ಯಾಪಾರ ನಿಲ್ಲಿಸಿದರೂ ಮೊಮ್ಮಕ್ಕಳ ಮೈಮೇಲೆ ಕೈಯಾಡಿಸಿ ಪ್ರೀತಿಸುವ ಅಜ್ಜಿ ಇರಬೇಕು ಅನಿಸುತ್ತದೆ. ನಾವು ಅಜ್ಜಿಯಾಗುವ ಕಾಲ ಬಂದಿರುವಾಗಲೂ ನಮ್ಮಜ್ಜಿ ಇನ್ನೂ ಜೀವಂತವಿರಬೇಕಿತ್ತು ಎನ್ನುವ ಆಸೆ!

ಅಜ್ಜಿ ಇಲ್ಲದ ಮನೆ ಭಣ ಭಣ. ಅವಳ ಕೈ ಹತ್ತದ ಅಡಿಗೆ ಸಪ್ಪೆ ಸಪ್ಪೆ. ಅವಳಿಲ್ಲದ ಮನೆ ಸೇರಿದಾಗ ಆಗುವ ವ್ಯಥೆ, ಅವಳ ಪ್ರೀತಿ ಸವಿದ ಪ್ರತಿಯೊಬ್ಬರ ಹೃದಯಕ್ಕೂ ಚುರುಕು ಕೊಟ್ಟೀತು. ನಮ್ಮನ್ನೆಲ್ಲ ಪೋಣಿಸಿದ ಸೂತ್ರ ಅವಳು. ಅವಳಿಲ್ಲದೇ ಪ್ರತಿ ಮುತ್ತು ಬಿಡಿ ಬಿಡಿ.

ನಲ್ವತ್ತರ ಕಣಿವೆಯಲ್ಲಿ ಅಜ್ಜಿ ಇಳಿದಾಗ ಅಜ್ಜ ತೀರಿಕೊಂಡರು. ಅವಳ ಜೀವನೋತ್ಸಾಹದ ಸೆಲೆ ಕೆಲಕಾಲ ಬತ್ತಿತ್ತು. "ಸತ್ತವರ ಜೋಡಿ ಸಹಗಮನ ಹೋಗಲಿಕ್ಕೆ ಬರ್ತದಾ? ಒಬ್ಬರ ಹಿಂದ ಒಬ್ಬರ ಮುಂದ" ಎಂದು ಬಂದದ್ದನ್ನು ನುಂಗಿ, ದಿಕ್ಕು ತಪ್ಪಿದ ಸಂಸಾರ ದೋಣಿಯನ್ನು ದಡಕ್ಕೆ ತಂದಳು. ಕಾಲ ಉರುಳಿತು. ಅವಳ ಬಾಳ ಬಳ್ಳಿ ಹಬ್ಬಿತು. ದಿನ ದಿನಕ್ಕೆ ವೃದ್ಧಾಪ್ಯದ ಹೆಜ್ಜೆ ದೇಹದಲ್ಲಿ ಮೂಡಹತ್ತಿತ್ತು. ಬದುಕು ಜಟಕಾ ಬಂಡಿ, ವಿಧಿ ಅದರ ಸಾಹೇಬ.

ಪ್ರಪಂಚದಲ್ಲಿ ಎಲ್ಲಾ ಸುಖ ದುಃಖಗಳನ್ನು ಅರೆದು ಕುಡಿದು ಬಾಳು ಸವೆಸಿದ ಹೆಣ್ಣು ಮಗಳು ಅಜ್ಜಿ. "ನನ್ನ ದುಃಖಗಳಿಗೆಲ್ಲ ನನ್ನ ಹೃದಯ ಸುಟ್ಟು ಹೋಗಿದ್ದರೆ ಹೇ ದೇವ! ನನಗೆಷ್ಟು ಹೃದಯಗಳನ್ನು ನೀನು ದಯಪಾಲಿಸಬೇಕಾಗಿತ್ತು ಹೇಳು" ಎಂದು ಪ್ರಶ್ನಿಸಿದ ಕವಿ ಮಿರ್ಜಾ ಗಾಲಿಬನಂತೆ ನಮ್ಮಜ್ಜಿಯೂ ತನ್ನ ದುಃಖದಲ್ಲಿ ನೊಂದು ಬೆಂದು ಪ್ರಶ್ನಿಸಿದ್ದಾಳೆ. ಅಜ್ಜಿ ಗಾಲಿಬನನ್ನು ಓದಿದವಳಲ್ಲ. ಅವಳ ಬದುಕಿನ ಅನುಭವವೇ ಅಷ್ಟು ಕಠೋರ. ನಡು ಹರೆಯದಲ್ಲಿ ಗಂಡನ ಮರಣ ನೆತ್ತಿಗೆ ಕೊಡಲಿ, ವೃದ್ಧಾಪ್ಯದಲ್ಲಿ ಮಕ್ಕಳ ಸಾವು ಹೊಟ್ಟೆಗೆ ಇರಿತ. ಮೈಗೆ ಬಂದ ಮುಪ್ಪು ಮನಸ್ಸಿಗೂ ಬಂದಿತ್ತು.

"ನಮ್ಮ ಆಯುಷ್ಯ ತೀರೋವರೆಗೆ ಈ ಭೂಮಿ ಋಣ ಇದ್ದದ್ದೆ. ಬದುಕೊಂದು ಹೋರಾಟ, ಬಂದದ್ದನ್ನು ಸ್ವೀಕರಿಸಿ ಜೀವಿಸಬೇಕಾದದ್ದು ನಮ್ಮ ಧರ್ಮ, ನಮ್ಮ ಕರ್ಮ ಸವೀಬೇಕಲ್ಲ". ಬಾಲ್ಯದಲ್ಲಿ ತಂದೆ ತಾಯಿ, ತಾರುಣ್ಯದಲ್ಲಿ ಗಂಡ, ವೃದ್ಧಾಪ್ಯದಲ್ಲಿ ಮಕ್ಕಳನ್ನು ಕಳೆದುಕೊಳ್ಳುವ ಸ್ತ್ರೀ ನಿರ್ಭಾಗ್ಯಳು. ಅಜ್ಜಿ ಅನುಭವದ ಮಾತನ್ನು ತನ್ನ ಉದಾಹರಣೆಯಿಂದ ವಿವರಿಸಿದಳು. ತನ್ನ ವಿಧಿಯನ್ನು ಹಳಿದಳು. ಅತ್ತಳು, ನಕ್ಕಳು. ಇನ್ನೇನು ಅವಳು ಅತಿ ದುಃಖದಿಂದ ಹುಚ್ಚಳಾಗಬಹುದೇ?ಹುಚ್ಚು ಮುಪ್ಪು ಕೂಡಿಬಿಟ್ಟರೇ?

ಆ ವಿಚಾರ ಆಲೋಚನೆಯಲ್ಲಿ ಬಂದ ಕ್ಷಣ ಮನ ಅಳುಕಿತು. ಅಳುಕಿ ನೊಂದಿತು.ಆದರೂ ಏನಾದರೂ ಜೀವನ ಎದುರಿಸುವ ಛಲ. ಅಜ್ಜಿ ಬದುಕಿದಳು. ತಲೆ ಸ್ಥಿಮಿತದಲ್ಲಿಟ್ಟುಕೊಂಡು ಬದುಕಿದಳು. ಸಾವು ಬರಲಿಲ್ಲ ಎಂದು ಬದುಕಿದವಳಲ್ಲ. ಬದುಕಬೇಕೆಂಬ ಛಲದಿಂದ ಬದುಕಿದವಳು.

ನಾನು ರಜೆಯಲ್ಲಿ ವಿದೇಶದಿಂದ ಭಾರತಕ್ಕೆ ಬಂದಾಗ ಅಜ್ಜಿ ಹಾಸಿಗೆ ಹಿಡಿದಿದ್ದಳು. ಎದ್ದು ಕೂಡಲು ಸಹ ಆಗುತ್ತಿರಲಿಲ್ಲ. ಅವಳು ಆ ಪರಿ ನೆಲಹತ್ತಿ ಮಲಗಿದ್ದನ್ನು ನೋಡಿರಲೇ ಇಲ್ಲ. ಜೀವ ಗಾಬರಿಸಿತು.ನನ್ನನ್ನು ಹತ್ತಿರ ಕೂಡಿಸಿಕೊಂಡು ಮೈಮೇಲೆಲ್ಲ ಕೈಯಾಡಿಸಿ, "ಎಷ್ಟು ಸೊರಗಿ ಬಂದಿ. ಊಟಾ ಸಮಹೊತ್ನಾಗ ಮಾಡ್ತೀಯೋ ಇಲ್ಲೋ" ಎಂದು ಕೇಳಿದಳು. ನಾನೇನು ಸೊರಗಿರಲಿಲ್ಲ. ಅವಳ ಅಂತಃಕರಣ ನೋಡಿ ಗಂಟಲ ನರ ಉಬ್ಬಿ ಬಂದು 'ಹೂಂ'ಗುಟ್ಟಿದೆ. ನನ್ನ ತಾಯಿಗೆ "ನಿನ್ನ ಮಗಳಿಗೆ ಚಲೋತ್ನಾಗ ಅಡುಗೆ ಮಾಡಿ ಊಟಕ್ಕೆ ಹಾಕು. ಈ ಸಾರಿ ಆಕಿ ಸೊರಗ್ಯಾಳ" ಎಂದಳು. ಪ್ರತಿದಿನ ಅವಳು ಇದೇ ಮಾತನ್ನು ಹೇಳುತ್ತಿದ್ದಳು. "ನಾ ಮಲಗಿಬಿಟ್ಟೇನಿ. ನಿಮ್ಮವ್ವ ಏನು ಅಡುಗೆ ಮಾಡ್ತಾಳೋ? ಹೊಟ್ಟೆ ತುಂಬಾ ಊಟಕ್ಕೆ ಹಾಕ್ತಾಳೋ ಇಲ್ಲೋ?" ಅವಳ ಅಂತಃಕರಣದ ಒದ್ದಾಟ ನೋಡಲಾಗುತ್ತಿರಲಿಲ್ಲ.

ಆ ದುಃಖದಲ್ಲೂ ಹಿರಿಯ ಸ್ನೇಹಿತರೊಬ್ಬರು ನನ್ನನ್ನು ಕೇಳಿದ ಮಾತು ಕತ್ತಲೆಯಲ್ಲಿ ದೀಪ ಹಚ್ಚಿದಂತೆ ಝಗ್ಗನೇ ನೆನಪು. "ನಿನಗೆ ತಾಯಿ ಇಲ್ಲವೇನಮ್ಮ?" "ಇದ್ದಾರಮ್ಮಾ ಇದ್ದಾರೆ-ಯಾಕೆ?" ನನ್ನ ಮುಖ ಚಿಕ್ಕದಾಯಿತು. ಅವರ ಮುಖ ಬಿಳುಚಿಕೊಂಡಿತು. ಅವರು ತಮ್ಮ ಪ್ರಶ್ನೆಗೆ ನಾಲಿಗೆ ಕಚ್ಚುತ್ತಾ, "ತಪ್ಪು ತಿಳಿಯಬೇಡಮ್ಮಾ, ನೀನು ಯಾವಾಗಲೂ ಅಜ್ಜಿಯನ್ನೇ ಕುರಿತು ಮಾತನಾಡುತ್ತಿ" ಎಂದರು. ನಾನಾಗ ಅವರಿಗೆ "ನಮ್ಮ ಮನೆಯಲ್ಲಿ ನನ್ನ ತಂದೆ, ತಾಯಿಯನ್ನು ಮೊದಲುಗೊಂಡು ಎಲ್ಲರ ಮೇಲು ನನ್ನ ಅಜ್ಜಿಯ ಪ್ರಭಾವ. ಅವಳ ಪ್ರಭಾವಶಾಲಿ ವ್ಯಕ್ತಿತ್ವವೇ ಅಂತಹುದು ಅನುಕರಿಸಲು ಹಚ್ಚುತ್ತದೆ" ಎಂದು ಹೇಳಿದೆ.

ಅವಳ ಗೆಳತಿಯರು, ಗುರುತಿನವರು, ಬಂಧು ಬಳಗದವರು, ಅವಳ ಅಂತಃಕರಣ ಸವಿದವರು, ಅವಳನ್ನು ನೋಡಲು, ಭೇಟಿಯಾಗಲು, ಮಾತನಾಡಿಸಲು ಬರುವ ಜನರಿಂದ ಸಂಜೆ ಮನೆ ಕಿಕ್ಕಿರಿದು ತುಂಬಿರುತ್ತಿತ್ತು.

ಎಲ್ಲರೊಡನೆಯೂ ತನ್ನ ಕೈಲಾದ ಮಟ್ಟಿಗೆ ಮಾತನಾಡಿಸುತ್ತಿದ್ದ ಅವಳು ಒಣ ವೇದಾಂತದ ಮಾತುಗಳನ್ನು ಹೇಳುತ್ತಿರಲಿಲ್ಲ. ಬದ್ಧ ಜೀವಿಯಾದ ಅವಳು ತನ್ನ ಕೊನೆಯ ಕಾಲದಲ್ಲೂ ಪ್ರಾಪಂಚಿಕ ವಿಷಯಗಳನ್ನೇ ಮಾತನಾಡುತ್ತಿದ್ದಳು.

ಒಬ್ಬರಿಗೆ ಮಕ್ಕಳನ್ನು ಕುರಿತು ಕೇಳಿದರೆ, ಇನ್ನೊಬ್ಬರಿಗೆ ಅವರ ನೌಕರಿಯ ವಿಷಯ, ಮೂರನೆಯವರಿಗೆ ಮನೆ ಕಟ್ಟುವದಾಯಿತೆ? ಎಂದು ಪ್ರಶ್ನಿಸುತ್ತಿದ್ದಳು. ಅವಳು ಹಾಸಿಗೆಯ ಮೇಲೆ ಮಲಗಿಯೇ ರಾಜ್ಯವಾಳುತ್ತಿದ್ದಳು.

ರಜೆ ಮುಗಿಯಿತು. ಭಾರತ ಬಿಟ್ಟು ಹೋಗಬೇಕು. ಇನ್ನು ಮತ್ತೆ ಮೂರು ವರ್ಷ. ಅಜ್ಜಿ ಅಷ್ಟು ದಿನ ಬದುಕಿರಲಾರಳು.  ಬಹಳ ದುಃಖವಾಯಿತು. ಆ ವೇದನೆ ಬರೆಯುವುದಕ್ಕೆ ಶಬ್ದಗಳಿಲ್ಲ. "ಅವ್ವಾ ಹೋಗಿ ಬರ್ತೀನಿ" ಎಂದು ಸ್ಪಷ್ಟವಾಗಿ ಹೇಳಲಾರದಷ್ಟು ಗಂಟಲು ಕಟ್ಟಿ ಬಂದಿತ್ತು . ಮುಂದೆ ಸ್ವಲ್ಪ ದಿನಗಳಲ್ಲಿಯೇ ಅಜ್ಜಿ ತೀರಿಕೊಂಡ ಸುದ್ದಿ ಬಂತು. ಈ ಹಣ್ಣು ಜೀವವನ್ನು ಪರಮಾತ್ಮ ಎತ್ತಿಕೊಂಡಿದ್ದ. ಅದು ಅನಿರೀಕ್ಷಿತವಾಗಿರಲಿಲ್ಲ. ಆದರೆ ಸಹಿಸಲು ದುಸ್ಸಾಧ್ಯವಾಗಿತ್ತು. ಅಜ್ಜಿ ತೀರಿಕೊಂಡಿದ್ದಾಳೆ ಎಂದು ಒಪ್ಪುವುದಕ್ಕೆ ಮನ ಹಿಂಜರಿಯಿತು. ಕಣ್ಣಲ್ಲಿ ಹನಿ ನೀರು ಬರಲಿಲ್ಲ. ಮೈಯ ತ್ರಾಣವೆಲ್ಲ ಹೀರಿ ಕೈಕಾಲುಗಳು ಬೆಂಡಾದವು. ಅಂಗಾಂಗಗಳು ಕಳಚಿ ಬೀಳುತ್ತವೆಯೇನೋ ಅನ್ನಿಸಿತು. ಹೊಟ್ಟೆಯಲ್ಲಿ ಹಿಡಿ ಅಕ್ಕಿ ಚೆಲ್ಲಿದರೆ ಅನ್ನವಾಗುವಷ್ಟು ಸಂಕಟ.  ನಾಲಿಗೆಯನ್ನು ಒಳಗಿನಿಂದ ಯಾರೋ ಜಗ್ಗಿ ಜಗ್ಗಿ

ಎಳೆಯುತ್ತಿರುವಂತೆ ನೋವು.

ನಾನು ಕೊನೆಗೆ ನೋಡಿದ ಅವಳ ಮುಖ ಕಣ್ಣೆದುರು ಕಟ್ಟಿತು . ಮತ್ತೆ ಅವಳನ್ನು ಇನ್ನು ನೋಡುವುದು ಸಾಧ್ಯವೇ ಇಲ್ಲವೆಂದು ಕೊರಳು ಉಬ್ಬಿಬಂದು ದುಃಖ ಉಮ್ಮಳಿಸಿತು. ಅವಳನ್ನು ಹೋಗಿ ತಬ್ಬಿ ಕೊಳ್ಳುವ ಆಸೆಯಾಯಿತು.

ಹೇಗೋ ಕಾಲೇಜಿಗೆ ಹೋಗಿ ಕಲಿಸಿ ಬಂದೆ. ಅಡುಗೆ ಕೆಲಸ ಮಾಡಿದೆ. ಎಲ್ಲವೂ ಯಾಂತ್ರಿಕವಾಗಿ. ಬಾಯಿಗೆ ಊಟ ರುಚಿಸಲಿಲ್ಲ. ನೀರು ಕುಡಿದಷ್ಟು ಗಂಟಲು ಒಣಗುತ್ತಲೇ ಇತ್ತು . ಇನ್ನೂ ಜೀವನದ ಕುರೂಪದ ದರ್ಶನವಾಗದೇ ಇದ್ದ, ಸುಸ್ವರೂಪ ಹೃದಯದ ಚಿಕ್ಕ ಕಂದಮ್ಮಗಳಾದ ನನ್ನ ಮಗ, ಮಗಳು ನನ್ನ ಮುಖ ಪಿಳಿಪಿಳಿ ನೋಡುತ್ತಾ ನನ್ನ ಸೆರಗು ಹಿಡಿದು ತಿರುಗಿದವು. ಪತಿಯ ಸಾಂತ್ವನದ ಮಾತುಗಳು ಮನಸ್ಸಿಗೆ ಯಾವ ಸಮಾಧಾನವನ್ನೂ ತರಲಿಲ್ಲ. ದಿನ ಕಳೆಯಿತು. ರಾತ್ರಿ ಹಾಸಿಗೆ ಮೇಲೆ ಮೈ ಚೆಲ್ಲಿದಾಗ ಕಣ್ಣಿಗೆ ನಿದ್ದೆ ಹತ್ತಲಿಲ್ಲ.

ನಮ್ಮ ಮನೆ ನೆನಪಾಯಿತು. ಆ ಮನೆಗೆ ನಾನು 'ಮಹಾಮನೆ' ಅನ್ನುತ್ತೇನೆ. ಕಾರಣ ಅದು 'ದೊಡ್ಡ ಮನೆ ಗಾತ್ರದಲ್ಲಿ ಅಷ್ಟೇ ಅಲ್ಲ ಗುಣದಲ್ಲೂ ಕೂಡ'. ಅಲ್ಲಿ ಮಾನವತೆ ಇತ್ತು , ಕಡಲಾಳದ ಪ್ರೀತಿ ಇತ್ತು , ಕಷ್ಟ ಕಾಲದಲ್ಲಿದ್ದ ನಮ್ಮ ಬಳಗದವರಿಗೆ, ಪರಿಚಯದವರಿಗೆ ಆಶ್ರಯ ಕೊಡಲಾಗುತ್ತಿತ್ತು. ಸಹಾಯ ಹಸ್ತ ನೀಡಲಾಗುತ್ತಿತ್ತು, ನಾವು ಮಕ್ಕಳಿಗದು ನೆಮ್ಮದಿಯ, ಅಂತಃಕರಣದ ತಾಣ. ಅನ್ನ, ವಿದ್ಯೆ, ಕಲೆಗಳ ಅಭಯವಿತ್ತು, ಒಂದು ಆಳವಾದ ಸಂಸ್ಕೃತಿಯೊಂದಿಗೆ, ಹೆಣ್ಣು ಗಂಡೆಂಬ ಭೇದ ಭಾವವಿಲ್ಲದೆ ವಿದ್ಯೆ ಕೊಟ್ಟು ಕಾಯಕದ, ಕರ್ತವ್ಯದ ಮಹತ್ವ ತಿಳಿಸಿಕೊಡಲಾಗುತ್ತಿತ್ತು. ಅಲ್ಲಿ ಬಡ ವಿದ್ಯಾರ್ಥಿಗಳಿಗೆ ಅನ್ನ, ಬಡವರಿಗೆ ಧರ್ಮಾರ್ಥ ಔಷಧಿ ಸಿಗುತ್ತಿತ್ತು .

ಇಂಥ ಮನೆಯ ಹಿರಿ ಜೀವ ಚೇತನ ನನ್ನ ಅಜ್ಜಿ. ಅವಳ ಬಲಗೈಯಾಗಿ ನನ್ನ ತಂದೆ. ತಮ್ಮ ತಾಯಿಯ ಬಾಯಿಂದ ಬಂದ ಮಾತನ್ನು ನಡೆಸಿಕೊಡುವುದರಲ್ಲಿ ಸುಖ ಕಾಣುವ ಹಿರಿ ಜೀವ ಅವರು. ಅಜ್ಜಿ ತನ್ನ ಜೀವನದಲ್ಲಿ ಅನುಭವಿಸಿದ ಸುಖ ಕಷ್ಟಗಳನ್ನೆಲ್ಲ ನಮಗೆ ಹೇಳುತ್ತಾ "ಮನುಷ್ಯರಿಗೆ ಅತ್ಯಂತ ದುಃಖ ಕೊಡುವುದು ದಾರಿದ್ರ್ಯ. ಅದನ್ನು ನಾವು ರಟ್ಟೆ ಮುರುದು ದುಡಿದು ನಿರ್ಮೂಲ ಮಾಡಿಕೋಬೇಕು. ಆದ್ರ ಒಮ್ಮೆ ಶ್ರೀಮಂತರಾದ ಮ್ಯಾಲ ನಮ್ಮ ಬಡತನ ಮರೀಬಾರದು. ಗರ್ವ ಮಾಡಬಾರದು. ಪರನಿಂದೆ ಮಹಾಪಾಪ. ದುಡ್ಡು ನಮಗೆ ನೆಮ್ಮದಿ ಜೀವನಾ ಕೊಡ್ತದ. ಅದನ್ನು ನಾವು ಹಂಚಿಕೋತ ಇರಬೇಕು. ದೇವರು ಕೊಟ್ಟವರ ಮನಿಮಟ್ಟೆಗಾರ. ಮನುಷ್ಯ ಮನುಷ್ಯ ಸಂಬಂಧ ಎಷ್ಟು ಗಟ್ಟಿನೋ ಅಷ್ಟು ನಾಜೂಕ ಸಂಭಾಳಿಸಿಕೊಬೇಕು." ಎಂದು ಸದಾ ಉಪದೇಶಿಸುತ್ತಲೇ ಇದ್ದಳು.

ಆ ಮನೆಯ ಹಿರಿ ಜೀವ ಇನ್ನಿಲ್ಲ. ಗಂಟಲು ಬಿಗಿದು ಬಂತು. ಕಣ್ಣೀರ ಸೆಲೆ ಒಡೆದಿತ್ತು. ನಾವು ಚಿಕ್ಕವರಿದ್ದಾಗ ಯಾರಾದರೂ ತೀರಿಕೊಂಡರೆ "ಸತ್ತವರು ಎಲ್ಲಿ ಹೋಗ್ತಾರೆ?" ಎಂಬ ನಮ್ಮ ಪ್ರಶ್ನೆಗೆ ಅಜ್ಜಿ ಹೇಳುವ ಉತ್ತರ "ಅವರು ನಕ್ಷತ್ರ ಆಗ್ತಾರ" ಎಂದು. ಈಗ ನಮ್ಮಜ್ಜಿಯೂ ನಕ್ಷತ್ರವಾದಳೇ? ಆಕಾಶದಲ್ಲಿದ್ದ ಅಸಂಖ್ಯಾತ ಕೋಟಿ ನಕ್ಷತ್ರಗಳಲ್ಲಿ ನಾನು ಅವಳನ್ನು ಎಲ್ಲಿ ಹುಡುಕಲಿ? ದುಃಖ ಒತ್ತರಿಸಿ ಬಂತು. ಕಣ್ಣು ನೀರು ಸುರಿಸುತ್ತಲೇ ಇದ್ದವು. ಅಜ್ಜಿಯೊಡನೆ ಕಳೆದ ಇಷ್ಟು ದಿನಗಳು ಚಲನಚಿತ್ರದಂತೆ ತಲೆಯಲ್ಲಿ ಸುತ್ತಿ ಸುತ್ತಿ ಯಾವ ಚಿತ್ರವೂ ಕಣ್ಣೆದುರು ಸ್ಥಿರವಾಗಿ ಇಲ್ಲದೆ ಗರಗರ ತಿರುಗುತ್ತ ರಭಸದಿಂದ ಜಿಗಿಯುತ್ತ ಕೊನೆಗೊಮ್ಮೆ ಕಣ್ಣೆದುರು ಗಕ್ಕನೇ ನಿಂತು ಒಂದು ಚಿತ್ರ ಸ್ಪಷ್ಟ ಮೂಡಿಸಿತು. ನನ್ನ ತಂದೆಯವರು ತೀರಿಕೊಂಡ ದಿನ ಗೋಡೆಗೆ ಆತು ರಾತ್ರಿ ಎಲ್ಲಾ ಅಳುತ್ತಾ ಕುಳಿತಿದ್ದಳು.

"ಬೆಳಗಾಯಿತೇನು?" ಅಂದಳು. "ಹೌದು" ಅಂದೆ. "ನನಗೆಲ್ಲಿ ಬೆಳಕು? ನನ್ನ ಪಾಲಿನ ಸೂರ್ಯ ಮುಣುಗಿ ಹೋದ". ಅಜ್ಜಿ ಹೃದಯದ ವೇದನೆಯಲ್ಲಿ ಹೊಟ್ಟೆಯ ಕರುಳನ್ನು ಹಗ್ಗವಾಗಿ ಹೊಸೆದು ದುಃಖಿಸಿ ದುಃಖಿಸಿ ಅತ್ತಳು. ಮರುಕ್ಷಣದಲ್ಲಿ "ನಮ್ಮದು ತುಂಬಿದ ಮನಿ. ನಾ ಅಳಬಾರದವ್ವ" ಎಂದು ತನ್ನ ದುಃಖವನ್ನು ಒತ್ತಿ ಹಿಡಿದು ಒಳಗಿಂದೊಳಗೇ ಬಿಕ್ಕಿ ಬಿಕ್ಕಿ ಅತ್ತಳು. "ಪುತ್ರಶೋಕಂ ನಿರಂತರಂ." ತಂದೆಯವರು ತೀರಿಕೊಂಡು ಅವಳನ್ನು ಸಂಪೂರ್ಣವಾಗಿ ಇದ್ದೂ ಸತ್ತಂತೆ ಮಾಡಿಬಿಟ್ಟಿದ್ದರು. ಅಜ್ಜ ತೀರಿದ ನಂತರ ಅಜ್ಜಿ ತನ್ನ ಹಿರಿ ಮಗ, ನನ್ನ ತಂದೆಯನ್ನು ಸಂಪೂರ್ಣವಾಗಿ ಅವಲಂಬಿಸಿದ್ದಳು. ಅವರಿಲ್ಲದೆ ಅವಳಿಗೆ ಕ್ಷಣವೊಂದು ಯುಗವಾಗುತ್ತಿತ್ತು. ಕಾರಣ ತಾಯಿ ಮಗನ ಗಾಢವಾದ ಪ್ರೀತಿಯ ಬಂಧನ. ತಾನು ಜನ್ಮಕೊಟ್ಟ ಮಕ್ಕಳು ತನ್ನಿದುರಿಗೆ ಸಾಯುವುದೇ? ಎಂತಹ ದೌರ್ಭಾಗ್ಯ?!

ತಂದೆ ತಾಯಿಗಳು ನನ್ನ ತಂದೆಯವರ ಭಾಗ್ಯಕ್ಕೆ ದೇವರೇ. 'ಮಾತೃದೇವೋಭವ, ಪಿತೃದೇವೋಭವ'. ಉಪನಿಷತ್ತಿನ ಈ ಮಾತನ್ನು ಜೀವನದಲ್ಲಿ ಅಕ್ಷರಶಃ ಪಾಲಿಸಿದ ಹಿರಿ ಜೀವ ಅವರು. ತಾಯಿ ಭೂಮಿಗಿಂತ ಹೆಚ್ಚು ತೂಕದ ವಸ್ತು. ತಂದೆ ಆಕಾಶಕ್ಕಿಂತ ಎತ್ತರ, ಅನಂತ ಎಂದು ಬಲವಾಗಿ ನಂಬಿದ್ದರು. ಅಂಥ ಮಗನನ್ನು ಕಳೆದುಕೊಂಡು ಅಜ್ಜಿ ಪಟ್ಟ ವ್ಯಥೆ! ಚಿತ್ರ ಮಗುಚಿ ಬಿದ್ದು ಮತ್ತೊಂದು ಮೂಡಿ ನಿಂತಿತು.

ಮಾವಿನ ಹಣ್ಣಿನ ಸುಗ್ಗಿ. ಮನೆಯ ತೋಟದಿಂದ ಆಪೂಸ ಮಾವಿನ ಹಣ್ಣುಗಳು ಬಂದಿವೆ. ಅಜ್ಜಿ ಹಣ್ಣಿನ ರಾಶಿಯೆದುರು ಕುಳಿತು ಸಂಜೆ ಪಡುವಣದ ಬಣ್ಣಗಳ ಹಣ್ಣುಗಳನ್ನು ಎತ್ತಿ ನೋಡಿ ಮಕ್ಕಳ ಹೆಸರು ಹೇಳುತ್ತ, ಅವರ ಪಾಲಿಗೆ ಒಳ್ಳೆಯವುಗಳನ್ನು ಆರಿಸಿ ತೆಗೆದಿರಿಸುತ್ತಿದ್ದಾಳೆ. ಫಕ್ಕನೇ ಅವಳಿಗೆ ತನ್ನ ಇಬ್ಬರು ಗಂಡು ಮಕ್ಕಳು ಸತ್ತು ಹೋದ ನೆನಪು. ಅಜ್ಜಿಯ ಕಣ್ಣಲ್ಲಿ ನೀರು ಹರಿಯ ಹತ್ತಿದೆ. ಪಾಪ ಆ ಹಣ್ಣು ಜೀವ ಆ ದಿನ ಎಲ್ಲರಿಗೂ ಹಣ್ಣು ಉಣಿಸಿತು ಆದರೆ ತಾನು ಮಾತ್ರ ಒಂದು ಹೋಳು ಕೂಡ ಬಾಯಲ್ಲಿ ಹಾಕಲಿಲ್ಲ.



ಅಜ್ಜಿ ರಾತ್ರಿಯ ಫಲಹಾರಕ್ಕಾಗಿ ಕುಳಿತಿದ್ದಾಳೆ. ತಾಯಿ ಅಜ್ಜಿಗೆ ಫಲಹಾರ ಕೊಟ್ಟು ಮುಖ ತಿರುವಿ ಕುಳಿತು ಅವಳೊಡನೆ ಮಾತನಾಡುತ್ತಿದ್ದಾಳೆ. ಅಂತ ವಿಚಿತ್ರ ಸ್ಥಿತಿ ನನ್ನ ಮನಸ್ಸಿಗೆ ಹಿತವೆನಿಸಲಿಲ್ಲ. ಅಜ್ಜಿ ಫಲಹಾರ ಮುಗಿಸಿ ಮಲಗಿದ ನಂತರ ನಾನು ತಾಯಿಗೆ, "ನೀನು ಅವ್ವ ಫಲಹಾರ ತಿನ್ನೋ ಮುಂದ ಆಕಿ ಕಡೇ ಬೆನ್ನ ಮಾಡಿ ಯಾಕೆ ಕೂತಿದ್ದೆ" ಎಂದು ಕೇಳಿದೆ. ಅದಕ್ಕೆ ಅವಳು" ಏನು ಮಾಡ್ಲಿ . ಅವರಿಗೆ ನನ್ನ ಮಾರಿ ನೋಡಿದ್ರ ಫಲಹಾರ ತಿನ್ನಲಿಕ್ಕೆ ಆಗೂದಿಲ್ಲ. ಪಾಪ ಮಗನ ನೆನಪಾಗಿ ದುಃಖ ಆಗ್ತದ" ಅಂದಳು.

ಚಿತ್ರ ತಿರುಗಿತು. ದುಃಖ ಒತ್ತರಿಸಿ ಬಂತು. ಅಜ್ಜಿಯ ಸಹವಾಸ, ಪ್ರೀತಿ, ಬೈದ ಮಾತು ಎಲ್ಲ ದೀಪದಿಂದ ದೀಪ ಹಚ್ಚಿದಂತೆ ನೆನಪು. ಅವಳು ಬಯ್ದ ನುಡಿ ಬುದ್ಧಿವಾದವೆನಿಸಿತು. ಪ್ರೀತಿ ಕಣ್ಣೀರು ಉಕ್ಕಿಸಿತು. ಅತ್ತೆ, ಹಗುರವಾಗುವಷ್ಟು ಅತ್ತೆ. ಅಳುವುದರಲ್ಲಿ ಒಂದು ಸಮಾಧಾನ, ಶಾಂತಿ ಲಭಿಸುತ್ತದೆಯಲ್ಲವೇ?. ದುಃಖದಿಂದ "ಅವ್ವಾ ಅವ್ವಾ" ಅಂದಿತು ಹೃದಯ. ಮೇಲಿದ್ದೂ ಕೇಳಿಸಿತ್ತೇನೋ ನಮ್ಮಜ್ಜಿಗೆ. ಅವಳಿದ್ದಿದ್ದರೆ "ಛೀ ಹುಚ್ಚಿ ಅಳತಾರೇನು?" ಹೃದಯದ ಮಮತೆಯನ್ನೆಲ್ಲ ಕೈಗಿಳಿಸಿ, ಬೆನ್ನ ಮೇಲೆ ಕೈಯಾಡಿಸಿ, ಮುಖ ಸವರಿ, ಗಲ್ಲನೇವರಿಸಿ, ತುಟಿ ಹಿಡಿದು ಸಮಾಧಾನ ಮಾಡುತ್ತಿದ್ದಳು.

ಅವಳ ಆ ಸ್ಪರ್ಶ ಈಗಲೂ ನೆನಪಾದರೆ ಮನಸ್ಸು ಅವ್ಯಕ್ತ ಆನಂದದಲ್ಲಿ ಮೀಯುತ್ತದೆ. ಅಜ್ಜಿ ಕನಸಿನಲ್ಲಿ ಬಂದರೆ ನನಗೆ ಯಾವಾಗಲೂ ಶುಭವಾಗುತ್ತದೆ. ಅವಳ ಕರುಳ ಮಾಯೆ ಸುಖ ದುಃಖದಲ್ಲೂ ಕೊಂಡಾಡುವೆ. ಅದನ್ನು ವರ್ಣಿಸಲು ಈ ತಲೆಗೂ ಸಾಧ್ಯವಿಲ್ಲ. ಅಂಥ ಸ್ಥಿತಿಯಲ್ಲಿ ನನ್ನ ತಲೆ ವಿಚಾರ ಮಾಡುವುದೇ ಇಲ್ಲ. ನನ್ನ ಹೃದಯ ವಿಚಾರ ಮಾಡುತ್ತದೆ. ಹೃದಯಕ್ಕೆ ಸಂಬಂಧಿಸಿದ್ದು. ಹೃದಯವೇ ಉತ್ತರಿಸಿ, ಸಾಂತ್ವನ ಹೇಳಿತ್ತು.

ನನ್ನಜ್ಜಿಯ ಸಾವು ಒಂದು ದೊಡ್ಡ ಆಲದ ಮರ ನೆಲಕಚ್ಚಿದಂತೆ. ಸುಭದ್ರ, ಸುಂದರವಾಗಿ ಕಟ್ಟಿದ ಒಂದು ಕೋಟೆಯ ಪತನವಾದಂತೆ. ಜೀವನವೇ ವಿಚಿತ್ರ. ಜೀವಿಸಿರುವಾಗ ಯಾವುದೇ ವ್ಯಕ್ತಿಯಲ್ಲಿದ್ದ ಹಿರಿತನ ಗೊತ್ತಾಗುವುದಿಲ್ಲ. ಆ ವ್ಯಕ್ತಿಯಲ್ಲಿದ್ದ ಅವಗುಣಗಳನ್ನೆಲ್ಲ ಮರೆತು ಕೇವಲ ಗುಣಗಳನ್ನಷ್ಟೇ ಸ್ಮರಿಸುವುದು ಸಾವಿನ ಗುಟ್ಟು. ಅದಕ್ಕೆ ನಮ್ಮಜ್ಜಿ ಅಪವಾದ ಹೇಗಾದಾಳು !

"ಹುಟ್ಟಿ ಬಾ ಅಜ್ಜಿ
ಹುಟ್ಟಿ ಬಾ ಇನ್ನೊಮ್ಮೆ
ಹುಟ್ಟಿದ್ದು ಕೊಟ್ಟಿದ್ದು
ನಿನಗಿದೆ ಇಲ್ಲಿ ಎರಡು ಮನೆ
ನೀನಲ್ಲಿರುವದು ಸುಮ್ಮನೆ"

## ಲೇಖಕರ ಪರಿಚಯ



೨೦ನೇ ಶತಮಾನದ ಪೂರ್ವಾರ್ಧದ ಲೇಖಕಿಯರಲ್ಲಿ ಒಂದು ಗಣನೀಯ ಹೆಸರೆಂದರೆ ಸುನಂದ ಬೆಳಗಾಂವ್ಕರ್ ಅವರದು. ಇವರು ೨೦-೧೦-೧೯೩೫ ರಂದು ಧಾರವಾಡದಲ್ಲಿ ಜನಿಸಿದರು.

ಕಜ್ಜಾಯ ಇವರ ಮೊದಲ ಪ್ರಬಂಧ ಸಂಕಲನ.ನಾಸು, ಝುವಾದಿ ಮತ್ತು ಕಾಯಕವೇ ಕೈಲಾಸ (ಕಾದಂಬರಿಗಳು), ಶಾಲ್ಮಲಿ (ಕವನ ಸಂಕಲನ), ಕೊಡುವುದೇನು? ಕೊಂಬುದೇನು? (ಲಲಿತ ಪ್ರಬಂಧ), ಮೃದ್ಗಂಧ, ಕೈ ತುತ್ತು (ಕಥಾ ಸಂಕಲನಗಳು) ಇವರ ಬರಹಗಳಾಗಿವೆ. ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿರುವ ಇವರಿಗೆ ರತ್ನಮ್ಮ ಹೆಗಡೆ ಪ್ರಶಸ್ತಿ, ವರ್ಧಮಾನ ಪೀಠ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶ್ರೀಮತಿ ಎಂ ಕೆ ಇಂದಿರ ಪ್ರಶಸ್ತಿ ಮುಂತಾದವು ಲಭಿಸಿವೆ. ಕನ್ನಡ ಸಾಹಿತ್ಯದಲ್ಲಿ ಗಣನೀಯ ಸೇವೆಯನ್ನು ಮಾಡಿರುವ ಇವರು ೨೪-೧೨-೨೦೧೮ ರಂದು ವಿಧಿವಶರಾದರು.

ಪ್ರಸ್ತುತ 'ಗೂಡು ಬಿಟ್ಟು ಹಾರಿದ ಹಕ್ಕಿ' ಕಥೆಯನ್ನು ಅವರ 'ಕೈ ತುತ್ತು' ಕಥಾಸಂಕಲನದಿಂದ ಆರಿಸಲಾಗಿದೆ.

## ವಿಶದೀಕರಣ

**ಮಿರ್ಜಾ ಗಾಲಿಬ** : ಉರ್ದು ಮತ್ತು ಪರ್ಶಿಯನ್ ಭಾಷೆಗಳಲ್ಲಿ ಕೃತಿ ರಚನೆ ಮಾಡಿರುವ ಪ್ರಸಿದ್ಧ ಕವಿ.

**ಮನಿ ಮಟ್ಟಿಗಾರ** : ಮನೆ ಮತ್ತು ಧಾನ್ಯ ಮೊದಲಾದವುಗಳಿಂದ ಕೂಡಿದ ಸಂಪತ್ತು.

**ಫಲಹಾರ** : ಫಲಾಹಾರ ಎನ್ನುವ ಪದವು ಕ್ರಮೇಣ ಬಳಕೆಯಲ್ಲಿ ಫಲಹಾರ ಎಂದಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ವಿದೇಶದಿಂದ ಭಾರತಕ್ಕೆ ಆಗಮಿಸಿದ ಮೊಮ್ಮಗಳನ್ನು ಕಂಡಾಗ ಅಜ್ಜಿಯ ಪ್ರತಿಕ್ರಿಯೆ ಏನಾಗಿತ್ತು?
2. ಅಜ್ಜಿಯ ಮರಣದಿಂದ ಮೊಮ್ಮಗಳಿಗಾದ ನೋವು ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ?
3. ಕತೆಗಾರ್ತಿಯು ತನ್ನ ಮನೆಯನ್ನು 'ಮಹಾ ಮನೆ' ಎಂದು ಕರೆಯಲು ಕಾರಣವೇನು?
4. ತನ್ನ ಜೀವನದಲ್ಲಿ ಅನುಭವಿಸಿದ ಕಷ್ಟ ಸುಖಗಳನ್ನು ವಿವರಿಸುತ್ತಿದ್ದ ಅಜ್ಜಿ ಅವುಗಳನ್ನು ನಿವಾರಿಸಲು ನೀಡುತ್ತಿದ್ದ ಉಪದೇಶಗಳೇನು?

## ಪಾತ್ರ ಚಿತ್ರಣ ಮಾಡಿರಿ

'ಗೂಡು ಬಿಟ್ಟು ಹಾರಿದ ಹಕ್ಕಿ' ಈ ಕಥೆಯಲ್ಲಿ ಬರುವ ಅಜ್ಜಿಯ ಪಾತ್ರಚಿತ್ರಣ ಮಾಡಿರಿ.

## ಅನುಭವ ಟಿಪ್ಪಣಿ ಬರೆಯಿರಿ

'ಗೂಡು ಬಿಟ್ಟು ಹಾರಿದ ಹಕ್ಕಿ' ಕಥೆಯಲ್ಲಿ ಅಜ್ಜಿಯು ಆ ಮನೆಯ ಉಸ್ತುವಾರಿಯಲ್ಲಿ ಪ್ರಧಾನ ಪಾತ್ರವಹಿಸಿದ್ದಳು ಎಂಬುದನ್ನು ಓದಿ ತಿಳಿದಿರುವಿರಿ. ಅದೇ ರೀತಿ ನಿಮ್ಮ ಮನೆಯಲ್ಲಿರುವ ಹಿರಿಯರು ನಿಮ್ಮ ಮನೆಯ ಉಸ್ತುವಾರಿಯನ್ನು ಹೇಗೆ ವಹಿಸುತ್ತಾರೆ ಎಂಬುದರ ಕುರಿತು ಒಂದು ಅನುಭವ ಟಿಪ್ಪಣಿ ಬರೆಯಿರಿ.

## ವಿಶೇಷಾರ್ಥ ಬರೆಯಿರಿ

ಕೆಳಗೆ ಕೊಡಲಾದ ಸಾಲಿನ ವಿಶೇಷಾರ್ಥ ಬರೆಯಿರಿ.

- ಅಜ್ಜಿಯು ಹಾಸಿಗೆಯ ಮೇಲೆ ಮಲಗಿಯೇ ರಾಜ್ಯವಾಳುತ್ತಿದ್ದಳು.

## ಪ್ರಬಂಧ ಬರೆಯಿರಿ

'ಗೂಡು ಬಿಟ್ಟು ಹಾರಿದ ಹಕ್ಕಿ' ಈ ಕಥೆಯನ್ನು ಓದಿದಿರಲ್ಲವೇ? ಈ ಕಥೆಯ ಆಧಾರದಲ್ಲಿ 'ಮಹಿಳೆ ಕುಟುಂಬದ ಆಧಾರಸ್ತಂಭ' ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

## ಸಂಭಾಷಣೆ ಬರೆಯಿರಿ

ಅಜ್ಜಿಯು ತನ್ನ ಮಗನನ್ನು ಸಣ್ಣ ಪ್ರಾಯದಲ್ಲೇ ಕಳೆದುಕೊಂಡು ದು:ಖಿತಳಾಗುತ್ತಾಳಲ್ಲವೇ? ಆ ಸಂದರ್ಭದಲ್ಲಿ ಅಜ್ಜಿ ಮತ್ತು ಮೊಮ್ಮಗಳೊಡನೆ ನಡೆದಿರಬಹುದಾದ ಸಂಭಾಷಣೆಗಳನ್ನು ಊಹಿಸಿ ಬರೆಯಿರಿ.

## ರೂಪಾಂತರಿಸಿರಿ

ಕೆಳಗೆ ಗೀತಾ ಕುಲಕರ್ಣಿ ಅವರ ಜೀವನ ಚರಿತ್ರೆಯನ್ನು ಕೊಡಲಾಗಿದೆ. ಅದನ್ನು ಆತ್ಮಕಥೆಯಾಗಿ ಪರಿವರ್ತಿಸಿರಿ.

ಗೀತಾ ಅವರ ಅಜ್ಜಿ ಬಹಳ ಬುದ್ಧಿವಂತೆ. ಒಳ್ಳೆಯ ಸ್ವರವಿದ್ದ ಅವರು ದೇವರ ನಾಮಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಜಾನಪದ ಕಥೆ, ಪಂಚತಂತ್ರದ ಕಥೆಗಳು, ರಾಮಾಯಣ, ಮಹಾಭಾರತ, ಭಾಗವತ, ಪುರಾಣ ಕಥೆಗಳ ಭಂಡಾರವೇ ಅವರ ಬಳಿ ಇತ್ತು. ಅಜ್ಜಿ ಕಥೆ ಹೇಳುತ್ತಿದ್ದರೆ ಮೊಮ್ಮಕ್ಕಳು ಅವರ ಸುತ್ತ ಕುಳಿತು ಕಥೆ ಕೇಳುತ್ತಿದ್ದರು. ಗೀತಾ ಅವರಲ್ಲಿ ಕಥೆ ಕೇಳುವ ಕಲೆಯು ಆಗಲೇ ಕುದುರಿಕೊಂಡಿತು. ಅಜ್ಜಿಯಂತೆ ಪುಟ್ಟ ಗೀತಾಳಿಗೂ ಹಾಡಿನ ಗೀಳು. ಅದಕ್ಕೆಂದೇ ಅಜ್ಜಿಯ ಅಚ್ಚುಮೆಚ್ಚಿನ ಮೊಮ್ಮಗಳಾದರು. ರಾಮಾಯಣ, ಮಹಾಭಾರತ, ಭಾಗವತವನ್ನು ಇವರಿಂದ ಓದಿಸಿದಾಗಲೇ ಅಜ್ಜಿಗೆ ತೃಪ್ತಿ. ಗೀತಾ ಇವುಗಳನ್ನು ಕೇವಲ ಅಜ್ಜಿಗಾಗಿ ಓದುತ್ತಿರಲಿಲ್ಲ. ಮಹಾಕಾವ್ಯಗಳ ಆಳಕ್ಕೆ ಇಳಿದು ಅಭ್ಯಸಿಸುವ ಪ್ರಯತ್ನ ಮಾಡುತ್ತಿದ್ದರು. ಸುಶಿಕ್ಷಿತ ತಂದೆ ಹಾಗೂ ಅಜ್ಜಿಯ ಆರೈಕೆಯಲ್ಲಿ ಆಕೆಯ ವ್ಯಕ್ತಿತ್ವ ವಿಕಸನಗೊಂಡಿತು. ಮಂಗಳೂರಿನ ಅನಿಬೆಸೆಂಟ್ ಸ್ಕೂಲಿನಲ್ಲಿ ಕಲಿಯುತ್ತಿದ್ದ ಆಕೆಗೆ ಓದಿನ ಜೊತೆಗೆ ಆಟಪಾಠದಲ್ಲೂ ಅಷ್ಟೇ ಆಸಕ್ತಿ. ಬ್ಯಾಡ್ಮಿಂಟನ್ ಹಾಗೂ ರಿಂಗ್ ಟೆನಿಸ್ ಇವರ ಮೆಚ್ಚಿನ ಆಟಗಳಾದರೆ, ನೃತ್ಯ ಸಂಗೀತ ಅವರ ಅಭಿರುಚಿಯಾಗಿತ್ತು.

## ಶಿಷ್ಟ ರೂಪಕ್ಕೆ ಪರಿವರ್ತಿಸಿರಿ

ಕೆಳಗೆ ಕೊಡಲಾದ ವಾಕ್ಯಗಳನ್ನು ಶಿಷ್ಟ ರೂಪಕ್ಕೆ ಪರಿವರ್ತಿಸಿ ಬರೆಯಿರಿ.

ಏನು ಏಳೋದವ್ವ, ನಾನೆಸ್ಟು ದಿವ್ಸ ಬದುಕಿಯೇನು? ಜೀವ್ನದಲ್ಲಿ ಬಾಳಾ ಕಸ್ಟ ಅನುಭವಿಸಿದೋಳು ನಾನು. ದೇವ್ರು ಆಯಸ್ಸು ಕೊಟ್ಟಸ್ಟು ದಿವ್ಸ ಜೀವ್ನ ಮಾಡೋದು. ಅವ್ನು ಕರ್ದಾಗ ಅವನ ಜೊತೆ ಓಗೋದು ಅಸ್ಟೇಯ ಎಂದಳು ಅಜ್ಜಿ.



# 2. ಬೇರುಗಳು ಅಮ್ಮನ ಹಾಗೆ

ಶ್ರೀಕೃಷ್ಣಯ್ಯ ಅನಂತಪುರ.

ನೀರು ಸಾರ ಅರಸಿ
ಆಳಕ್ಕಿಳಿದು ಅಡ್ಡಕ್ಕೆ ಹರಿದು
ಮರೆಯಲ್ಲೇ ಮೈಮರೆತು
ಅನವರತ ದುಡಿಯುವ
ಅಸಂಖ್ಯ ಬೇರುಗಳಿಗೆ
ಆಕಾಶಕ್ಕೇರಿದ ಮರದ ಮೋರೆ
ಕಾಣಿಸುವುದಿಲ್ಲವಾದರೂ
ಅದರ ಚಡಪಡಿಕೆ
ಹಸಿವು ನೀರಡಿಕೆ
ಸರಿಯಾಗಿ ಅರ್ಥವಾಗುತ್ತದೆ.

ತಿಂದು ತೇಗಿ
ಹಸಿರಾಗಿ, ಹರವಾಗಿ, ಬಲವಾಗಿ
ಧಾರಾಳ ನೆರಳು, ಫಲಗಳ ನೀಡಿ
ಹೊಗಳಿಕೆ, ಬಿರುದುಗಳಿಗೆ ಬೀಗಿ
ಮತ್ತೆ ಮತ್ತೆ ಮೇಲೇರಿ
ತಲೆಯೆತ್ತಿ ಮೆರೆದಾಡುವ ಮಹಾಮರಕೆ
ತನಗೆ ಉಸಿರಾದ ಬೇರುಗಳು ಅರ್ಥವಾಗುವುದಿಲ್ಲ.

ತೊಟ್ಟು ನೀರಿಲ್ಲದ ಬೆಟ್ಟದ ಮೇಲೂ
ಬಟ್ಟವಾಗಿ ಹರಡಿದ
ಮರದ ಸಫಲ ಸಾಮರ್ಥ್ಯಕ್ಕೆ
ಬೆರಗಾಗಿ
ಎಲ್ಲರೂ ಮೂಗ ಮೇಲೆ
ಬೆರಳಿಡುತ್ತಾರೆಯೇ ಹೊರತು
ಯಾರೂ ಬೇರುಗಳ ಬೆನ್ನು ತಟ್ಟುವುದಿಲ್ಲ
ಯಾವುದಕ್ಕೂ ಬೇರುಗಳು ಬೇಸರಿಸುವುದಿಲ್ಲ
ಅನ್ಯಥಾ ಯೋಚಿಸುವುದಿಲ್ಲ
ಏನನ್ನೂ ಯಾಚಿಸುವುದೂ ಇಲ್ಲ
ಬೇರುಗಳ ಬಗೆಯೇ ಹೀಗೆ ಅಮ್ಮನ ಹಾಗೆ

## ಕವಿ ಪರಿಚಯ



ಶ್ರೀಕೃಷ್ಣಯ್ಯ ಅನಂತಪುರ ಅವರು ಕಾಸರಗೋಡು ಜಿಲ್ಲೆಯ ಕುಂಬಳೆ ಬಳಿಯ ಅನಂತಪುರದಲ್ಲಿ ೧೦-೧೨-೧೯೪೮ ರಂದು ಜನಿಸಿದರು. ಜೀವ ತಂತಿಯ ಮೀಟಿ, ಮಗಳು ಮತ್ತು ಮಲ್ಲಿಗೆ ಬಳ್ಳಿ, ಬೇರುಗಳು ಅಮ್ಮನ ಹಾಗೆ (ಕವನಸಂಕಲನ), ಬಿಂದು, ಎದೆ ಬಿಗಿದ ಕ್ಷಣಗಳು (ಹನಿಗವನ ಸಂಕಲನಗಳು), ಕಣ್ಣು ಹಾಡಿದ ಕವಿತೆ (ಭಾವಗೀತೆಗಳ ಸಂಕಲನ) ಇವುಗಳು ಇವರ ಪ್ರಕಟಿತ ಕೃತಿಗಳು. ಕಾಸರಗೋಡಿನ ಕವಿತೆಗಳು, ಕರಾವಳಿ ಕಾವ್ಯ, ಭಾವಸುರಭಿ, ಕಾವ್ಯೋತ್ಸವ, ದಕ್ಷಿಣ ಕನ್ನಡದ ಶತಮಾನ ಕಾವ್ಯ(ಸಂಪಾದಿತ ಕಾವ್ಯ ಸಂಗ್ರಹ). ೩೫೦ಕ್ಕೂ ಹೆಚ್ಚು ಕವಿತೆಗಳು ೮೦೦ಕ್ಕೂ ಹೆಚ್ಚು ಹನಿಗವನಗಳು, ಅನೇಕ ಲೇಖನಗಳು, ನಗೆ ಬರಹಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರ 'ಮಗಳು ಮತ್ತು ಮಲ್ಲಿಗೆ ಬಳ್ಳಿ' ಕವನ ಸಂಕಲನಕ್ಕೆ ಬೆಂಗಳೂರು ರುಕ್ಮಿಣಿ ಬಾಯಿ ಸ್ಮಾರಕ ಸಾಹಿತ್ಯ ಪ್ರಶಸ್ತಿ, ಮತ್ತು ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ ಕಾವ್ಯ ಪ್ರಶಸ್ತಿ ಸಂದಿದೆ. ಹನಿಗವನ ಸಂಕಲನಕ್ಕೆ ಕರ್ನಾಟಕ ರಾಜ್ಯ ಮಟ್ಟದ ನಿರತ ಸಾಹಿತ್ಯ ಪ್ರಶಸ್ತಿ ದೊರೆತಿದೆ.

ದ.ರಾ. ಬೇಂದ್ರೆ ಕಾವ್ಯ ಪುರಸ್ಕಾರ ಮತ್ತು ಸಂಕ್ರಮಣ ಕಾವ್ಯ ಪ್ರಶಸ್ತಿ ಇವರಿಗೆ ದೊರೆತ ಇತರ ಪ್ರಶಸ್ತಿಗಳು. ಇವರ ಸಾಹಿತ್ಯ ಸೇವೆ ಹಾಗು ಸಾಧನೆಗಳನ್ನು ಪರಿಗಣಿಸಿ ಕನ್ನಡ ಸಾಹಿತ್ಯ ಪರಿಷತ್ ಕಾಸರಗೋಡು ಗಡಿನಾಡ ಘಟಕದಿಂದ ಸನ್ಮಾನ, ಬೇರುಗಳು ಅಮ್ಮನ ಹಾಗೆ ಕವನ ಸಂಕಲನಕ್ಕೆ ಭೂಮಿ ಪ್ರತಿಷ್ಠಾನ ಧಾರವಾಡ, ಅರವಳದ ಪ್ರತಿಷ್ಠಾನ, ಸತ್ತೂರು ದಿ. ಯಲ್ಲಪ್ಪ ಅರವಳದ ಅವರ ಸ್ಮರಣಾರ್ಥ ಭೂಮಿ ಟಾಪ್ ಟೆನ್ ಕೃತಿ ಪುರಸ್ಕಾರ ಬಂದಿದೆ.

ಪ್ರಸ್ತುತ ಕವನವನ್ನು ಅವರು ಬರೆದ 'ಬೇರುಗಳು ಅಮ್ಮನ ಹಾಗೆ' ಕವನ ಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ತಲೆಯೆತ್ತಿ ಮೆರೆದಾಡುವ ಮಹಾಮರಕೆ ಬೇರುಗಳೇ ಉಸಿರು ಎಂಬ ಸತ್ಯ ಅರ್ಥವಾಗುವುದಿಲ್ಲ ಎಂದು ಕವಿ ಹೇಳಲು ಕಾರಣವೇನು?
2. ಬೇರುಗಳ ತ್ಯಾಗ ಮನೋಭಾವವು ಈ ಕವನದಲ್ಲಿ ಹೇಗೆ ಪ್ರಕಟವಾಗಿದೆ?
3. ಮರಕ್ಕೆ ಬೇಕಾದ ಪೋಷಕಾಂಶಗಳನ್ನು ನೀಡುವ ಬೇರುಗಳ ದುಡಿಮೆಯ ಮಹತ್ವವನ್ನು ಸಾರುವ ಸಾಲುಗಳನ್ನು ಗುರುತಿಸಿರಿ.

## ಆಶಯ ಬರೆಯಿರಿ

'ಬೇರುಗಳು ಅಮ್ಮನ ಹಾಗೆ' ಕವನದ ಆಶಯವನ್ನು ಬರೆಯಿರಿ.

## ಸಂದೇಶ ಬರೆಯಿರಿ

'ಬೇರುಗಳು ಅಮ್ಮನ ಹಾಗೆ' ಕವನವು ನೀಡುವ ಸಂದೇಶವೇನು? ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಔಚಿತ್ಯ ಬರೆಯಿರಿ

'ಬೇರುಗಳು ಅಮ್ಮನ ಹಾಗೆ' ಕವನದ ಶೀರ್ಷಿಕೆಯ ಔಚಿತ್ಯವನ್ನು ಬರೆಯಿರಿ.

## ಗಾದೆ ಮಾತು ವಿಸ್ತರಿಸಿರಿ

ಪದ್ಯದ ಆಶಯಕ್ಕೆ ಹೊಂದಿಕೆಯಾಗುವ ಕೆಳಗಿನ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

- ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.

## ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಪದ್ಯಭಾಗದ ಸಾಲುಗಳ ಸ್ವಾರಸ್ಯ ಬರೆಯಿರಿ.

- ತಲೆಯೆತ್ತಿ ಮೆರೆದಾಡುವ ಮಹಾಮರಕೆ
  ತನಗೆ ಉಸಿರಾದ ಬೇರುಗಳು ಅರ್ಥವಾಗುವುದಿಲ್ಲ

- ತೊಟ್ಟು ನೀರಿಲ್ಲದ ಬೆಟ್ಟದ ಮೇಲೂ
  ಬಟ್ಟವಾಗಿ ಹರಡಿದ
  ಮರದ ಸಫಲ ಸಾಮರ್ಥ್ಯಕ್ಕೆ
  ಬೆರಗಾಗಿ
  ಎಲ್ಲರೂ ಮೂಗ ಮೇಲೆ
  ಬೆರಳಿಡುತ್ತಾರೆಯೇ ಹೊರತು
  ಯಾರೂ ಬೇರುಗಳ ಬೆನ್ನು ತಟ್ಟುವುದಿಲ್ಲ
  ಯಾವುದಕ್ಕೂ ಬೇರುಗಳು ಬೇಸರಿಸುವುದಿಲ್ಲ

## ಹೋಲಿಸಿ ಬರೆಯಿರಿ

'ಬೇರುಗಳು ಅಮ್ಮನ ಹಾಗೆ' ಕವನವನ್ನು ಗಂಗಾರತ್ನ ಪಾತೂರು ಮುಗಳಿ ಅವರು ಬರೆದ 'ನೀನೊಂದು ಮರದ ಹಾಗೆ' ಎನ್ನುವ ಕವನದೊಂದಿಗೆ ಹೋಲಿಸಿ ಟಿಪ್ಪಣಿ ಬರೆಯಿರಿ.

# ನೀನೊಂದು ಮರದ ಹಾಗೆ

ಹೆಣ್ಣೇ................. ನೀನೊಂದು ಮರದ ಹಾಗೆ
ಮೊಳಕೆಯೊಡೆದ ಕುಡಿ ಧೈರ್ಯದಿಂದ
ಮೇಲೆದ್ದು ನಿಲ್ಲುವಂತೆ
ಮೆಲ್ಲನೆ ನೀನು ಪುಟ್ಟ ಹೆಜ್ಜೆಗಳನ್ನೂರಿ
ಗಟ್ಟಿಯಾಗಿ ನಿಲ್ಲುತ್ತೀ.

ಎತ್ತರೆತ್ತರವಾಗಿ ಬೆಳೆದ ಮರ ಸುತ್ತೆಲ್ಲ
ಹರಡುತ್ತಾ ಹಸಿರಿನ ಬೆಟ್ಟವಾಗುವಂತೆ
ಹೊಸ ಹರೆಯದ ಆಸೆ ಆಕಾಂಕ್ಷೆಗಳ ಹೊತ್ತು
ನೀನು ಸವಿಗನಸುಗಳ ಚಿಟ್ಟೆಯಾಗುತ್ತೀ.

ರಸಭರಿತ ಹಣ್ಣು ಕಾಯಿಗಳನ್ನು ಹೊರಲಾರದೆ
ಹೊತ್ತು
ಪರರಿಗಿತ್ತು ಸಾರ್ಥಕತೆ ಪಡೆವ ಮರದ ಬದುಕಿನಂತೆ
ಉಸ್ಸೆಂದು ನಿಟ್ಟುಸಿರಿಟ್ಟು ನೋವಿನಲ್ಲೂ ನಗೆ ಚೆಲ್ಲಿ
ನೀನು ನಿಜವಾದ ಹೆಣ್ಣಾಗುತ್ತೀ.

ಕಾಲ ಉರುಳಿದಂತೆ ಪಕ್ವವಾಗುತ್ತಾ ಟಿಸಿಲೊಡೆದು
ಕೊಂಬೆ ರೆಂಬೆಗಳನ್ನು ಚಾಚುವ ಮರದಂತೆ
ಅಕ್ಕ - ತಂಗಿಯಾಗಿ ಗೆಳತಿ - ಪತ್ನಿಯಾಗಿ
ತಾಯಿ - ಅಜ್ಜಿಯಾಗಿ
ನಿನ್ನ ತೆಕ್ಕೆಯೊಳಗೆ ಎಲ್ಲರನ್ನೂ ಚಾಚಿಕೊಳ್ಳುತ್ತೀ.

ಗಂಗಾರತ್ನ ಪಾತೂರು ಮುಗಳಿ

# 3. ಮಹಿಳೆ ಮತ್ತು ಸಮಾಜ ಸೇವೆ

**ಡಾ.ವರದಾ ಶ್ರೀನಿವಾಸ್**

ಸಮಾಜ ಎಂದರೆ ಸಂಸಾರಗಳ ಸಮುದಾಯ. ಸಂಸಾರಕ್ಕೆ ಯಾವುದು ಅನ್ವಯಿಸುತ್ತದೆಯೋ ಅದು ವಿಸ್ತೃತ ಸಂಸಾರವೆನಿಸಿದ ಸಮಾಜಕ್ಕೂ ಅನ್ವಯಿಸುತ್ತದೆ. ಸಮಾಜದಲ್ಲಿ ವ್ಯಕ್ತಿಗೆ ಸ್ವಾತಂತ್ರ್ಯ ಅತಿ ಅಗತ್ಯ. ವ್ಯಕ್ತಿಗೆ ನಿಜವಾದುದು ಸಮಾಜಕ್ಕೂ ನಿಜ. ಮಾನವ ಸಂಘ ಜೀವಿ. ತನ್ನ ಭೌತಿಕ, ಮಾನಸಿಕ ವಿಕಾಸದ ಜೊತೆಯಲ್ಲಿ ದೈವ, ಧರ್ಮ, ಕರ್ತವ್ಯಗಳ ಮೂಲಕ ಸಾಮಾಜಿಕ ಜೀವನದ ಸಾಧನೆಗಳನ್ನು ಕಂಡುಕೊಂಡು ಸಾರ್ಥಕತೆಯತ್ತ ಸಾಗುತ್ತಿದ್ದಾನೆ. ಈ ಸಂಘ ಜೀವನವೇ ಸಮಾಜ ಜೀವನವಾಯಿತು. ಸೇವೆಯೇ ಮಾನವನ ನಿತ್ಯ ವ್ಯವಹಾರಕ್ಕೆ ಒಂದು ಧಾರ್ಮಿಕ ಸ್ವರೂಪವನ್ನು ನೀಡಿತು. "ಪರೋಪಕಾರಾರ್ಥಮಿದಂ ಶರೀರಂ" ಎಂಬ ಮಾತನ್ನು ಇಲ್ಲಿ ಸ್ಮರಿಸಬಹುದು.

ಸಂಸಾರವನ್ನು ಒಂದು ರಥಕ್ಕೆ ಹೋಲಿಸಿದರೆ ಗಂಡು ಹೆಣ್ಣು ಈ ಸಂಸಾರ ರಥದ ಎರಡು ಚಕ್ರಗಳು. ರಥವನ್ನು ಸರಿ ಸಮಾನವಾಗಿ ಎಳೆದುಕೊಂಡು ಹೋದರೆ ಮಾತ್ರ ರಥೋತ್ಸವ ಸೊಗಸಾಗುತ್ತದೆ. ಹಾಗೆ ಗಂಡು ಹೆಣ್ಣು ಸಮಾನರಾಗಿ ಒಬ್ಬರಿಗೊಬ್ಬರು ಹೊಂದಿಕೊಂಡು ಮಾಡುವ ಸೇವಾಕಾರ್ಯಗಳು ಹಲವಾರು ಇವೆ.

ಹಿಂದೆ ಅವಿಭಕ್ತ ಕುಟುಂಬಗಳಲ್ಲಿ ಯಜಮಾನನ ಹೆಂಡತಿಯೇ ಹಿರಿಯವಳಾಗಿ ಮನೆಯ ಕೆಲಸ ಕಾರ್ಯಗಳನ್ನು, ಆಳು ಮಕ್ಕಳನ್ನು, ಒಕ್ಕಲುಗಳನ್ನು, ಎಲ್ಲರ ಯೋಗ ಕ್ಷೇಮದ ಜೊತೆಯಲ್ಲಿ ನೆಂಟರಿಷ್ಟರು, ಅತಿಥಿಗಳು, ಹಬ್ಬ ಹರಿದಿನಗಳು, ಮುಂಜಿಗಳಂಥ ಶುಭ ಕಾರ್ಯಗಳ ನಿರ್ವಹಣೆ, ಆರೋಗ್ಯದ ಕಡೆಗೆ ಗಮನ - ಹೀಗೆ ಸಮಸ್ತ ಕಾರ್ಯಗಳನ್ನು ಈ ಗೃಹಿಣಿಯೇ ನೋಡಿಕೊಳ್ಳುತ್ತಿದ್ದಳು. ತುಂಬಿದ ಮನೆಯಲ್ಲಿನ ಮಕ್ಕಳನ್ನು ನೀತಿವಂತರನ್ನಾಗಿ, ಸಚ್ಚಾರಿತ್ರ್ಯವಂತರನ್ನಾಗಿ ರೂಪಿಸುವ ಜವಾಬ್ದಾರಿ ಅವಳದೇ ಆಗಿತ್ತು. ಸಾವು ನೋವುಗಳಲ್ಲಿ, ಆಪತ್ತುಗಳಲ್ಲಿ ಇನ್ನೊಂದು ಕುಟುಂಬಕ್ಕೆ ಆಸರೆ ನೀಡುವುದಲ್ಲದೆ, ಆ ಮಕ್ಕಳನ್ನು ಮನೆಯ ಮಕ್ಕಳೊಡನೆ ಬೆಳೆಸುವುದು ಸಾಮಾನ್ಯ ಸಂಗತಿಯಾಗಿತ್ತು. ಸಮಾಜ ಸೇವೆಯ ಹೆಸರಿಲ್ಲದೆ ಈ ಸಾಮಾಜಿಕ ನಡವಳಿಕೆ ಸಾಮಾನ್ಯವಾಗಿತ್ತು. ಒಬ್ಬರ ಕಷ್ಟಕ್ಕೆ ಇನ್ನೊಬ್ಬರು ಸಹಾಯ ಮಾಡುವುದು ಸಹಜವಾಗಿತ್ತು.

ಗಾಂಧೀಜಿ ಒಂದು ಕಡೆ ಹೇಳಿದ್ದಾರೆ "ಸ್ತ್ರೀ ಪುರುಷರಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಇದು ವಾಸ್ತವಾಂಶ; ಇಬ್ಬರ ಸ್ಥಾನ ಮತ್ತು ಕರ್ತವ್ಯಗಳು ಬೇರೆ ಬೇರೆ....... ಮಹಿಳೆಯರೇ ಮಹಿಳೆಯರ ಉನ್ನತಿಗೆ ಕಾರಣರಾಗಬಲ್ಲರು"

ಸಮಾಜ ಸೇವೆಗೆ ಹೊರಡುವ ಮಹಿಳೆ ಮೊದಲು ತನ್ನ ಸಂಸಾರದ ಸೇವೆಯನ್ನು ಸಮರ್ಪಕವಾಗಿ ಮಾಡಬೇಕು. ಸಂಸಾರದಲ್ಲಿ ಗಂಡ-ಹೆಂಡಿರಲ್ಲಿ ಹೊಂದಾಣಿಕೆ ಬಹು ಮುಖ್ಯ. ಇಂದು ಹಲವು ಸಂಸಾರಗಳಲ್ಲಿ ಹೊಂದಾಣಿಕೆ ಇಲ್ಲದಿದ್ದರಿಂದಲೇ ತೂಕ ತಪ್ಪಿ, ವಿರಸ ತಲೆದೋರಿ, ಅನಾಹುತಕ್ಕೆ ಕಾರಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಪರಸ್ಪರ ತಾಳ್ಮೆ ಅತ್ಯವಶ್ಯ. ಈ ಪ್ರಯತ್ನದಲ್ಲಿ ಮಹಿಳೆಯೇ ಮುಂದಾದರೆ ಅದು ಆಕೆಗೆ ಗೌರವವೇ ಹೊರತು ಅವಮಾನವಲ್ಲ. ಏಕೆಂದರೆ ಹೆಣ್ಣನ್ನು ಸೌಮ್ಯ ಸ್ವಭಾವದ ಪ್ರೇಮ ಮೂರ್ತಿಯಾಗಿ ಮಾಡಿರುವುದೇ ಪ್ರಕೃತಿ. ಪ್ರಕೃತಿದತ್ತವಾದ ತಾಳ್ಮೆ, ಉದಾರತೆಯನ್ನು ಮೈಗೂಡಿಸಿಕೊಂಡಲ್ಲಿ, ಸಂಸಾರ ಕಾರ್ಯ ಸುಗಮವಾಗುತ್ತದೆ. ಅಷ್ಟೇ ಅಲ್ಲ, ಕುಟುಂಬದ ಸದಸ್ಯರು

ಯಾರು ಯಾರು ಏನೇನು ಕೆಲಸಗಳನ್ನು ಮಾಡಬೇಕೆಂಬುದನ್ನು ಹೇಳುವ ಮತ್ತು ಅವುಗಳನ್ನೇ ಪಾಲಿಸುವಂತೆ ಮಾಡುವ ಜವಾಬ್ದಾರಿ ಆಕೆಯದೇ. ಮಹಿಳೆಯೇ ನಿಜವಾಗಿ ಮನೆಯೊಡತಿ. ಗೃಹಿಣಿಯಿಂದಲೇ ಗೃಹ ಅಭಿವೃದ್ಧಿ. ಮಾಡಬೇಕೆನಿಸುವ ಕೆಲಸವನ್ನು ಆಕೆ ಬಹಿರಂಗವಾಗಿ, ಧೈರ್ಯದಿಂದ ಮಾಡಬೇಕು. ಪ್ರತಿಯೊಂದು ಕಾರ್ಯದಲ್ಲಿ ಸತ್ಯ, ಧೈರ್ಯ ಇರಬೇಕು, ಆತ್ಮವಿಶ್ವಾಸ ಇರಬೇಕು. ತನ್ನ ಮನೆಯನ್ನು ಉನ್ನತಿಯೆಡೆಗೆ ಕೊಂಡೊಯ್ಯುವ ಮಹಿಳೆ ಸಮಾಜದ ಔನ್ನತ್ಯಕ್ಕೂ ಕಾರಣವಾಗುತ್ತಾಳೆ.

ಮಹಿಳೆ ತಾನು ಹುಟ್ಟಿದಾಗಿನಿಂದ ಕೆಲವು ಸೇವಾ ಕಾರ್ಯಗಳಿಗೆ ಬದ್ಧಳೂ ಜವಾಬ್ದಾರಳೂ ಆಗಿರುತ್ತಾಳೆ. ಸುಪುತ್ರಿಯಾಗಿ ತಂದೆ ತಾಯಿಗಳ ಪ್ರೀತಿಗೆ ಪಾತ್ರಳಾಗುವುದರ ಜೊತೆಯಲ್ಲಿ ಅಕ್ಕತಂಗಿಯರಿಗೆ, ಅಣ್ಣತಮ್ಮಂದಿರೊಡನೆ ಸಾಧ್ಯವಾದಷ್ಟು ಹೊಂದಾಣಿಕೆ ಮಾಡಿಕೊಳ್ಳಬೇಕು. 'ಹಿರಿಯಕ್ಕನ ಚಾಳಿ' ಹೋಗಿ 'ಹಿರಿಯಕ್ಕನ ಆದರ್ಶ' ಎಂಬ ಮಾತು ರೂಢಿಗೆ ಬರಬೇಕು. ಅಕ್ಕನ ಅಕ್ಕರೆಯನ್ನು ಎಲ್ಲರೂ ಅರಿತು ವರ್ತಿಸಿದರೆ ಮನೆಯ ಮಕ್ಕಳಿಗೊಂದು ಶೋಭೆ. ಇಲ್ಲದಿದ್ದರೆ ಅದೊಂದು ಸಂತೆ .ಆದರೆ ಈಗಿನ ಕುಟುಂಬಗಳಲ್ಲಿ ಸಂತತಿ ಸೀಮಿತವಾಗಿರುವುದರಿಂದ ಸಂತೆಯಾಗುವ ಸಂದರ್ಭವೇ ಇಲ್ಲ.

ಸಂಸಾರದಲ್ಲಿ ಬೆಳೆದ ಹೆಣ್ಣು ಕಾಲಮಾನಕ್ಕನುಸಾರವಾಗಿ ಪತಿಯ ಮನೆಗೆ ಬಂದಾಗ ಅವಳ ಜವಾಬ್ದಾರಿ ಹೆಚ್ಚುತ್ತದೆ. ತುಂಬಿದ ಮನೆಯಲ್ಲಿ ಆದರ್ಶ ಪತ್ನಿಯಾಗಿದ್ದರೆ, ಎಲ್ಲರ ಮೆಚ್ಚುಗೆ ಗಳಿಸಿದರೆ ,ಆ ಮನೆಯೇ ಸ್ವರ್ಗವಾಗುತ್ತದೆ. 'ವೆಚ್ಚಕ್ಕೆ ಹೊನ್ನಾಗಿ ಇಚ್ಛೆಯನರಿತ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ' ಎಂದು ಸರ್ವಜ್ಞ ಸುಮ್ಮನೆ ಹೇಳಿಲ್ಲ. ಅಂತಹ ಪತ್ನಿಯರು ಮನೆಯನ್ನೇ ಉದ್ಧರಿಸುವುದರ ಜೊತೆಯಲ್ಲಿ ಸಮಾಜ ಸೇವೆಯ ಬಗ್ಗೆ ಆಸಕ್ತಿ ತಳೆದರೆ ಸಮಾಜದ ಉದ್ಧಾರ ಖಂಡಿತ ಸಾಧ್ಯ.

ಸಮಾಜ ಸೇವೆಯಲ್ಲಿ ಸ್ನೇಹ, ಆತ್ಮೀಯತೆ, ವಿಶ್ವಾಸ ಪ್ರಮುಖವಾದ ಅಂಶಗಳು. ಅವುಗಳ ಜೊತೆಯಲ್ಲಿ ವಿನಯ, ವಿನಮ್ರತೆಗಳೂ ಸೇರಿರಬೇಕು. ಸಮಾಜದ ಒಳಿತನ್ನು ಬಯಸುವ ಮಹಿಳೆ ಇತರ ಮಹಿಳೆಯರನ್ನು ಭೇಟಿಯಾದಾಗ ಸೀರೆ, ಒಡವೆ, ಅಡುಗೆ ಮುಂತಾದ ವಿಚಾರಗಳನ್ನು ಕುರಿತು ಮಾತ್ರ ಚರ್ಚಿಸದೆ, ಮನೆಯ ಸಮಸ್ಯೆ, ಹಣದ ಉಳಿತಾಯ, ಸಾಮಾಜಿಕ ಸಮಸ್ಯೆಗಳನ್ನು ಕುರಿತೂ ಚರ್ಚಿಸಬೇಕು. ಇವುಗಳ ಪರಿಹಾರದಲ್ಲಿ ತಮ್ಮ ಕರ್ತವ್ಯಗಳೇನೆಂಬುದನ್ನು ಚರ್ಚಿಸಬೇಕು. ಮಕ್ಕಳ ಓದಿನಲ್ಲಿ, ಅವರನ್ನು ಉತ್ತಮ ರೀತಿಯಲ್ಲಿ ಮುಂದುವರಿಸುವಲ್ಲಿ ತಮ್ಮ ಪಾತ್ರವೇನೆಂಬುದರ ಕುರಿತೂ ಯೋಚಿಸಬೇಕು. ಎಳೆಯ ಪ್ರಾಯದಲ್ಲೇ ಸಾಮಾಜಿಕ ಪ್ರಜ್ಞೆ, ಸಾಮಾಜಿಕ ತಿಳುವಳಿಕೆ ಮೂಡುವಂತಹ ಶಿಕ್ಷಣವನ್ನು ತಾಯಂದಿರು ಮನೆಯ ಮಕ್ಕಳಿಗೆ ನೀಡಬೇಕು. ಉದಾತ್ತ ವಿಚಾರಗಳ ಚರ್ಚೆಗೆ ಅವಕಾಶ ನೀಡಿದರೆ ಕ್ಷುಲ್ಲಕ ಹಾಗೂ ಸಂಕುಚಿತ ಸಂಗತಿಗಳು ಮುನ್ನುಗ್ಗಲು ಅವಕಾಶವೇ ಇರುವುದಿಲ್ಲ.

ಕೀರ್ತಿ, ಪ್ರತಿಷ್ಠೆ, ಸ್ಥಾನಮಾನಗಳಿಗೆ ಆಸೆಪಡದೆ ಸಮಾಜ ಸೇವೆ ಮಾಡುವ ಮಹಿಳೆಯರು ತನ್ನ ಸ್ವಂತ ಮನೆಯ ಮಕ್ಕಳ ಸೇವೆಯನ್ನು ಎಂದಿಗೂ ನಿರ್ಲಕ್ಷಿಸಬಾರದು. ಆದ್ದರಿಂದ ಮನೆಯಲ್ಲೇ ಸೇವಾ ಮನೋಭಾವ ಪ್ರಾರಂಭವಾದರೆ ಅದು ಸಮಾಜಕ್ಕೂ ವಿಸ್ತರಿಸುತ್ತದೆ. ಸಂಸಾರ ಜೀವನ ಸಮಾಜ ಜೀವನದೊಡನೆ ಸಮನ್ವಯಗೊಳ್ಳಬೇಕೇ ವಿನಹ ಸಂಘರ್ಷಕ್ಕೆ ಎಡೆಗೊಡಬಾರದು. ಉತ್ತಮ ಸೇವೆ ಯಾವುದೇ ಕೀರ್ತಿಯನ್ನಾಗಲೀ ಪ್ರಶಸ್ತಿಯನ್ನಾಗಲಿ ಬಯಸುವುದಿಲ್ಲ. ಬಯಸದೇ ಬಂದಾಗ ಉಬ್ಬುವುದೂ ಇಲ್ಲ , ಬಾರದೇ ಇದ್ದಾಗ ಸೇವೆಯ ಸೆಲೆ ಬತ್ತುವುದೂ ಇಲ್ಲ. ಅಂತಹ ಮಹಿಳೆ ಮನೆಯಲ್ಲೂ ಸಲ್ಲುತ್ತಾಳೆ, ಸಮಾಜದಲ್ಲೂ ಸಲ್ಲುತ್ತಾಳೆ.

ತೃತೀಯ ಲಿಂಗಿಯಾದ ಜಗದೀಶ ಅವರು ತಾನು ಇಚ್ಛಿಸಿದಂತೆ ಬದುಕಲು ಸಾಧ್ಯವಾಗದೆ, ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟು, ತನ್ನ ಹಠ ಮತ್ತು ಸಾಧನೆಗಳಿಂದ ಹೆಣ್ಣಾಗಿ ಪರಿವರ್ತನೆಗೊಂಡು ತನ್ನ ಹೆಸರನ್ನು ಅಕ್ಕಯ್ ಪದ್ಮಶಾಲಿ ಎಂದು ಬದಲಾಯಿಸಿಕೊಳ್ಳುತ್ತಾರೆ. ತೃತೀಯ ಲಿಂಗಿಗಳಿಗಾಗಿ ತನ್ನ ಬದುಕನ್ನೇ ಮುಡಿಪಾಗಿಟ್ಟ ಅವರ

ಜೀವನದ ನೋವು-ನಲಿವುಗಳನ್ನು ತಿಳಿಸುವ ಆತ್ಮಕಥೆಯ ಒಂದು ಭಾಗವನ್ನು ಕೆಳಗೆ ನೀಡಲಾಗಿದೆ.

## ಜಗದೀಶ 'ಅಕ್ಕಯ್' ಆದಾಗ



ನಾನು ಹುಡುಗಿಯರೊಂದಿಗೆ ಆಟವಾಡಲು ಹೋದಾಗ ಅವರು ನನ್ನನ್ನು ಹುಡುಗರೊಂದಿಗೆ ಆಟವಾಡುವಂತೆ ಕಳುಹಿಸುತ್ತಿದ್ದರು. ಹುಡುಗರತ್ತ ಹೋದಾಗ ಅವರು ನನ್ನನ್ನು ಹೊರದೂಡುತ್ತಿದ್ದರು. ನಾನಾ ವಿಧಗಳಿಂದ ನನಗೆ ಕಿರುಕುಳ ನೀಡುತ್ತಿದ್ದರು. ಬ್ಯಾಟ್ - ಚೆಂಡನ್ನು ಮುಟ್ಟಲು ಬಿಡುತ್ತಿರಲಿಲ್ಲ. ಹುಡುಗಿಯರು ಕುಂಟೆ-ಬಿಲ್ಲೆ ಆಟದಿಂದ ಹೊರಹಾಕಿದ್ದರು. ಆಗ ನಾನು ಎಷ್ಟರಮಟ್ಟಿಗೆ ಒಂಟಿತನವನ್ನು ಅನುಭವಿಸಿದೆನೆಂದು ವಿವರಿಸುವುದು ಕಷ್ಟ. ಹುಡುಗರು ಅಥವಾ ಹುಡುಗಿಯರೊಂದಿಗೆ ಆಟವಾಡಲು ಸಾಧ್ಯವಾಗದ ಕಾರಣ ನನ್ನಷ್ಟಕ್ಕೆ ನಾನೇ ಆಟ ಆಡಿಕೊಳ್ಳುತ್ತಿದ್ದೆ.

ಇದೆಲ್ಲಾ ಆದ ಮೇಲೆಯೂ ನಾನೊಬ್ಬಳು ಹೆಣ್ಣು ಎಂದೇ ಮನೆಗೆ ವಾಪಾಸು ಆಗುತ್ತಿದ್ದೆ. ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ ಮೇಕಪ್ ಮಾಡಿಕೊಳ್ಳುತ್ತಿದ್ದೆ. ನಾನು ಏಕೆ ಹೀಗೆ ಮಾಡಿಕೊಳ್ಳುತ್ತಿರುವೆ? ಜನರೇಕೆ ಒಪ್ಪಿಕೊಳ್ಳುತ್ತಿಲ್ಲ? ಎಂದು ನನ್ನಷ್ಟಕ್ಕೇ ಕೇಳಿಕೊಳ್ಳುತ್ತಿದ್ದೆ. ಶಾಲೆಯಲ್ಲಿ ಎಲ್ಲರೂ ತಮ್ಮ ತಮ್ಮ ಸ್ನೇಹಿತರೊಂದಿಗೆ ಕುಳಿತು ಮಾತನಾಡಲು ತೊಡಗಿದಾಗ ನನ್ನೊಡನೆ ಹುಡುಗರ ಬೆಂಚಿನಲ್ಲಿ ಕುಳಿತುಕೊಳ್ಳಲು ಒತ್ತಾಯಿಸಲಾಗುತ್ತಿತ್ತು. ತರಗತಿಯಲ್ಲಿ ಟೀಚರ್ ಕೇಳಿದ ಪ್ರಶ್ನೆಗಳಿಗೆ ನಾವು ನಿಂತು ಕೈ ಕಟ್ಟಿಕೊಂಡು ಉತ್ತರಿಸಬೇಕಾಗಿತ್ತು. ಅಧ್ಯಾಪಕರು ಪ್ರಶ್ನೆ ಕೇಳಿದರೆ ನನ್ನ ದನಿಯಲ್ಲೇ ಉತ್ತರ ಹೇಳಿದರೂ ಸಹಪಾಠಿಗಳು ಗೇಲಿಮಾಡುತ್ತಿದ್ದರು. ದುಃಖ ಸಹಿಸಲಾಗದೆ ನಾನು ಅಂಗಿಯಲ್ಲಿ ಮುಖ ಹುದುಗಿಸಿ ಅಳುತ್ತಿದ್ದೆ. ನನ್ನ ಧ್ವನಿ, ದೈಹಿಕ ಹಾವಭಾವ, ಉಡುತ್ತಿದ್ದ ಬಟ್ಟೆ, ಮಾಡಿಕೊಂಡಿದ್ದ ಮೇಕಪ್ ಇದರಿಂದಾಗಿ ಎಲ್ಲರೂ ನನಗೆ ಕಿರುಕುಳ ಕೊಡುತ್ತಿದ್ದರು.

ಮನೆಯಲ್ಲೂ ನೆರೆಹೊರೆಯಲ್ಲೂ ಗಂಡಸಿನಂತೆ ವರ್ತಿಸಬೇಕೆಂದು ನನ್ನನ್ನು ಒತ್ತಾಯಿಸುತ್ತಿದ್ದರು. ಒಮ್ಮೆ ಹುಡುಗಿಯರೊಂದಿಗೆ ಆಟವಾಡುತ್ತಿದ್ದಾಗ ತಂದೆ ನನ್ನನ್ನು ಚೆನ್ನಾಗಿ ಹೊಡೆದರು. ಹೀಗೆ ಶಿಕ್ಷಿಸಿದರೆ ನಾನು ಮತ್ತೆಂದೂ ಹುಡುಗಿಯಂತೆ ವರ್ತಿಸುವುದಿಲ್ಲ ಎಂದು ಭಾವಿಸಿದ್ದರು.

ನನ್ನ 29 ನೇ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆಯ ಬಳಿಕ ಅಮ್ಮನನ್ನು ಕರೆದು "ನಾನು ಹುಡುಗನಲ್ಲ, ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಹುಡುಗಿಯಾಗಿದ್ದೇನೆ. ಅಂದರೆ ಲಿಂಗ ಬದಲಾವಣೆಯನ್ನು ಮಾಡಿಸಿಕೊಂಡಿದ್ದೇನೆ ಎಂದು ಹೇಳುವ ಪ್ರಮಾಣಪತ್ರ ಇದೆ" ಎಂದು ಹೇಳಿದೆ.

* * *



ನಾನು ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆಯಾದ 'ಸಂಗಮ'ವನ್ನು ತೊರೆದ ನಂತರ ನನಗೆ ಜೈನ ವಿಶ್ವವಿದ್ಯಾಲಯದಲ್ಲಿ ಕೆಲಸ ಸಿಕ್ಕಿತು. ಜೈನ ವಿಶ್ವವಿದ್ಯಾಲಯದ ಫೆಲೋಶಿಪ್ ದೊರಕಿತು. ಅಲ್ಲಿ ಕೆಲಸ ಮಾಡಲು ಅದ್ಭುತ ವಾತಾವರಣವಿತ್ತು. ಅಲ್ಲಿ ನನ್ನ ಉದ್ದೇಶಕ್ಕಾಗಿ ಕೆಲಸ ಮಾಡಬಹುದಾಗಿತ್ತು. ಅದು ಲೈಂಗಿಕ ಅಲ್ಪಸಂಖ್ಯಾತ ಜನರನ್ನು ಬೆಂಬಲಿಸಲು, ಅವರ ಸಮಸ್ಯೆಗಳನ್ನು ಅರಿಯಲು ನನಗೆ ಸಹಾಯ ಒದಗಿಸಿತು. ಇದರಿಂದ ರಾಜ್ಯನೀತಿ ಹಾಗೂ ಸರ್ಕಾರಿ ಇಲಾಖೆಗಳೊಂದಿಗೆ ಕೆಲಸ ಮಾಡುವುದು ಸಾಧ್ಯವಾಯಿತು.

ಕಾಲ ಬದಲಾದಂತೆ ಹಿಂದಿನ ಎಲ್ಲಾ ಅನುಭವಗಳನ್ನು ಆತ್ಮಶೋಧನೆಗೆ ಒಳಪಡಿಸಲು ಆರಂಭಿಸಿದೆ. ನಾನು ಚಳವಳಿಯಿಂದ ಬಂದವಳು, ತಳಮಟ್ಟದ ಮಹಿಳೆಯರ ಚಳವಳಿಯ ತಾತ್ವಿಕ ನೆಲೆಗಳಿಂದ ಬಂದಿದ್ದೇನೆ. ಪೌರ ಕಾರ್ಮಿಕರೊಡನೆ, ಬೀದಿ ಗುಡಿಸುವವರೊಡನೆ ಶೌಚಾಲಯಗಳನ್ನು ಸ್ವಚ್ಛಗೊಳಿಸುವ, ಮಲ ಬಾಚುವ ಕೆಲಸವನ್ನು ಮಾಡಿದ್ದೇನೆ. ಏಕೆಂದರೆ ನಾನು ಈ ಬೀದಿಗೆ ಸೇರಿದವಳೇ ಆಗಿದ್ದೇನೆ. ಸಾಮಾಜಿಕ ಬಹಿಷ್ಕಾರದ ಸಂಕಟ ಏನೆಂದು ನನಗೆ ತಿಳಿದಿದೆ. ಜನರ ನಡುವೆ ಇರುವುದರಿಂದ ಈ ಹಂತಕ್ಕೆ ತಲಪಿದ್ದೇನೆ.

ಪ್ರತಿವರ್ಷ ನವೆಂಬರ್ 1ರಂದು ಕರ್ನಾಟಕ ರಾಜ್ಯೋತ್ಸವ ಆಚರಿಸುವ ಸಂದರ್ಭದಲ್ಲಿ ಕರ್ನಾಟಕ ಸರಕಾರ ಸಾಮಾಜಿಕ, ನ್ಯಾಯಾಂಗ, ವೈದ್ಯಕೀಯ, ಸಾಂಸ್ಕೃತಿಕ ಇವೇ ಮುಂತಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಇತ್ತು ಗೌರವಿಸುತ್ತದೆ.

2015 ರಲ್ಲಿ ಸರ್ಕಾರ ನನಗೆ ಈ ಪ್ರಶಸ್ತಿ ಘೋಷಿಸಿದಾಗ ಗಾಬರಿಯಾಗಿತ್ತು. ರಾಜ್ಯದ ಇತಿಹಾಸದಲ್ಲಿ ಪ್ರಶಸ್ತಿ ಪಡೆದ ಅತ್ಯಂತ ಕಿರಿಯ ಮಹಿಳೆ ನಾನೇ ಆಗಿದ್ದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ನನ್ನ ಹೆಗಲ ಮೇಲೆ ಶಾಲು ಹೊದಿಸಿದರು. ಸ್ವಲ್ಪ ಕಾದು "ನೀವು ನನಗೆ ಏಕೆ ಈ ಮಾನ್ಯತೆಯನ್ನು ನೀಡುತ್ತಿದ್ದೀರಿ? ಇಡೀ ಬದುಕು ನಿಮ್ಮೊಂದಿಗೆ, ಸರ್ಕಾರದೊಂದಿಗೆ ಹೋರಾಡುತ್ತಿದ್ದೇನೆ" ಎಂದೆ. ಆಗ ಅವರು ನಿಧಾನವಾಗಿ "ನೀವು ನಮ್ಮ ವಿರುದ್ಧ ಹೋರಾಡುತ್ತಿರುವುದರಿದಲೇ ನಾವು ಇದನ್ನು ನಿಮಗೆ ನೀಡುತ್ತಿದ್ದೇವೆ. ನಾವು ತಪ್ಪು ಮಾಡಿದಾಗ ನಮ್ಮ ಕಣ್ಣುಗಳನ್ನು ತೆರೆಸುವವರು ನೀವೇ" ಎಂದರು.

**'ಅಕ್ಕಯ್'**

ನಿರೂಪಣೆ : ಡಾ. ಡೊಮಿನಿಕ್. ಡಿ

* * *

## ಲೇಖಕರ ಪರಿಚಯ



ಶ್ರೀಮತಿ ವರದಾ ಶ್ರೀನಿವಾಸ್ ಅವರು ೨೮-೮-೧೯೫೦ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರ ಸ್ಫಟಿಕ ಮಂಜೂಷ, ರಜತಸಿರಿ, ಹನ್ನೆರಡು ಕಥಾರತ್ನಗಳು (ಸಂಪಾದಿತ ಕೃತಿಗಳು), ಪುಟ್ಟನ ಗಾಳಿಪಟ, ಪುಷ್ಪಕ, ಶೋಧ, ಯಾರು ಶ್ರೇಷ್ಠರು, ಪೌರಾಣಿಕ ಪಾತ್ರಗಳು (ಮಕ್ಕಳ ಸಾಹಿತ್ಯ ಕೃತಿಗಳು), ಮಡಿವಾಳ ಮಾಚಯ್ಯ, ಪಂಜೆ ಮಂಗೇಶರಾಯರು (ಜೀವನ ಚರಿತ್ರೆ), ಮಹಿಳೆ ಸ್ಥಿತಿ- ಗತಿ ಅಂದು - ಇಂದು, ಮಹಿಳೆ ಮತ್ತು ವಿಶೇಷ ಸವಲತ್ತುಗಳು(ಮಹಿಳಾ ಅಧ್ಯಯನ ಕೃತಿಗಳು), ಕನಸು ಮತ್ತು ವಾಸ್ತವಗಳ ನಡುವೆ (ಕಥಾ ಸಂಕಲನ), ಭರತೇಶನ ದಿನಚರಿ(ಸಂಗ್ರಹ), ಏಕಲವ್ಯ ಮತ್ತು ಇತರ ನಾಟಕಗಳು(ಬಾನುಲಿ ಮಕ್ಕಳ ನಾಟಕಗಳು) ಮುಂತಾದುವುಗಳು ಪ್ರಕಟವಾಗಿವೆ. ಇವರ ಸಾಹಿತ್ಯ ಸೇವೆಗಾಗಿ ಶೇಷಮ್ಮ ಭಾಸ್ಕರ ರಾವ್ ದತ್ತಿನಿಧಿ ಪ್ರಶಸ್ತಿ (೧೯೮೨), ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ (೧೯೮೩), ಜಿ . ಪಿ. ರಾಜರತ್ನಂ ಪ್ರಶಸ್ತಿ (೧೯೮೪), ಧಾರವಾಡದ ವಿದ್ಯಾವರ್ಧಕ ಸಂಘದ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ (೧೯೯೨), ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ(೨೦೦೦), ಸುಭದ್ರಕುಮಾರಿ ಚೌಹಾನ್ ಜನ್ಮ ಶತಾಬ್ದಿ ಪ್ರಶಸ್ತಿ, ಅಮೇರಿಕನ್ ಬಯೋಗ್ರಾಫಿಕಲ್ ಇನ್ಸ್ಟಿಟ್ಯೂಟ್ ನ ಪ್ರೊಫೆಷನಲ್ ವಿಮೆನ್ಸ್ ಅಡ್ವೈಸರ್ ಬೋರ್ಡಿನ ಗೌರವ ಸದಸ್ಯತ್ವ ಮುಂತಾದ ಗೌರವಗಳು ಲಭಿಸಿವೆ.

ಈ ಲೇಖನವನ್ನು ಅವರ 'ಮಹಿಳೆ - ವೈಚಾರಿಕತೆ ಮತ್ತು ವಿಮರ್ಶೆ' ಎಂಬ ವೈಚಾರಿಕ ಲೇಖನಗಳ ಸಂಗ್ರಹದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಅವಿಭಕ್ತ ಕುಟುಂಬದಲ್ಲಿ ಯಜಮಾನನ ಹೆಂಡತಿಯ ಜವಾಬ್ದಾರಿಗಳು ಯಾವುವು?
2. ಸ್ತ್ರೀ ಪುರುಷರ ಬಗ್ಗೆ ಗಾಂಧೀಜಿಯವರು ಹೇಳಿದ ಮಾತುಗಳೇನು?
3. ಸಮಾಜದ ಒಳಿತನ್ನು ಬಯಸುವ ಮಹಿಳೆ ಮಾಡಬೇಕಾದ ಕಾರ್ಯಗಳ ಬಗ್ಗೆ ಲೇಖಕಿ ಏನು ಹೇಳಿದ್ದಾರೆ?

## ವಿಶ್ಲೇಷಣ ಟಿಪ್ಪಣಿ ಬರೆಯಿರಿ

'ತನ್ನ ಮನೆಯ ಉನ್ನತಿಗೆ ಕಾರಣವಾಗುವ ಮಹಿಳೆ ಸಮಾಜದ ಉನ್ನತಿಗೂ ಕಾರಣಳಾಗುತ್ತಾಳೆ' ಎಂಬ ಲೇಖಕಿಯ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.

## ವಿಚಾರಗೋಷ್ಠಿಗಾಗಿ ಪ್ರಬಂಧ ಬರೆಯಿರಿ

"ಸ್ತ್ರೀ-ಪುರುಷರಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಇದು ವಾಸ್ತವಾಂಶ; ಇಬ್ಬರ ಸ್ಥಾನ ಮತ್ತು ಕರ್ತವ್ಯಗಳು ಬೇರೆ ಬೇರೆ." ಗಾಂಧೀಜಿಯ ಈ ಮಾತಿನ ಹಿನ್ನೆಲೆಯಲ್ಲಿ 'ಸಮಾಜದಲ್ಲಿ ಸ್ತ್ರೀ-ಪುರುಷರು ಸಮಾನರು' ಎಂಬ ವಿಷಯದ ಕುರಿತು ವಿಚಾರಗೋಷ್ಠಿಯಲ್ಲಿ ಮಂಡಿಸುವುದಕ್ಕಾಗಿ ಪ್ರಬಂಧ ಬರೆಯಿರಿ.

## ಓದುಗರ ಓಲೆ ತಯಾರಿಸಿರಿ

ತೃತೀಯ ಲಿಂಗಿಗಳು ಸಮಾಜದ ಅವಜ್ಞೆಗೆ ಒಳಗಾಗಿ ಸಾಕಷ್ಟು ಅವಮಾನ, ನೋವುಗಳನ್ನು ಅನುಭವಿಸುತ್ತಾರೆ ಎಂಬುದನ್ನು 'ಜಗದೀಶ ಅಕ್ಕಯ್ ಆದಾಗ' ಎಂಬ ಅವರ ಆತ್ಮಕಥೆಯಲ್ಲಿ ಓದಿ ತಿಳಿದಿರುವಿರಿ. ಅಂತಹ ತೃತೀಯ ಲಿಂಗಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ನಾವು ಏನೆಲ್ಲಾ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬಹುದು ಎಂಬುದರ ಕುರಿತು ಪತ್ರಿಕೆಯ ಓದುಗರ ಓಲೆಗೆ ಕಿರುಲೇಖನವನ್ನು ಬರೆಯಿರಿ.

## ವ್ಯಕ್ತಿ ಪರಿಚಯ ಬರೆಯಿರಿ

ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಬಳಸಿಕೊಂಡು ಅವರ ವ್ಯಕ್ತಿ ಪರಿಚಯ ಬರೆಯಿರಿ.

| | | |
|---|---|---|
| ಜನನ | : | ೧೯-೦೯-೧೯೬೫ |
| ಸ್ಥಳ | : | ಓಹಿಯೋದ ಯೂಕ್ಲಿಡ್ (ಅಮೇರಿಕಾ) |
| ಪೂರ್ಣ ಹೆಸರು | : | ಸುನಿತಾ ಲಿನ್ ಪಾಂಡ್ಯ |
| ತಂದೆ | : | ದೀಪಕ್ ಪಾಂಡ್ಯ |
| ತಾಯಿ | : | ಉರ್ಸುಲಿನ್ ಬೋನ್ ಪಾಂಡ್ಯ |
| ಪತಿ | : | ಮೈಕಲ್ ಜೆ ವಿಲಿಯಮ್ಸ್ |
| ವಿದ್ಯಾಭ್ಯಾಸ | : | ೧೯೮೩ರಲ್ಲಿ ನೀಧಂ ಹೈಸ್ಕೂಲಿನಿಂದ ಪದವಿ, ೧೯೮೭ರಲ್ಲಿ ಯುನೈಟೆಡ್ ಸ್ಟೇಟ್ಸ್ ನೇವಲ್ ಅಕಾಡೆಮಿಯಿಂದ ಭೌತಿಕ ವಿಜ್ಞಾನದಲ್ಲಿ ಬ್ಯಾಚುಲರ್ ಆಫ್ ಸೈನ್ಸ್ ಪದವಿ, ೧೯೯೫ರಲ್ಲಿ ಫ್ಲೋರಿಡಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಇಂಜಿನಿಯರಿಂಗ್ ಮೇನೆಜ್ ಮೆಂಟ್ ನಲ್ಲಿ ಮಾಸ್ಟರ್ ಆಫ್ ಸೈನ್ಸ್ ಪದವಿ. |

| | | |
|---|---|---|
| ವೃತ್ತಿ | : | ೧೯೮೭ರಲ್ಲಿ ಯು.ಎಸ್. ನೌಕಾಪಡೆಯಲ್ಲಿ ಬೇಸಿಕ್ ಡ್ರೈವಿಂಗ್ ಅಧಿಕಾರಿ<br>೧೯೮೯ರಲ್ಲಿ ನೇವಲ್ ಏವಿಯೇಟರ್.<br>೧೯೯೮ರಲ್ಲಿ ಜೋನ್ಸನ್ ಬಾಹ್ಯಾಕಾಶ ಕೇಂದ್ರದಲ್ಲಿ ಗಗನಯಾತ್ರಿ ಅಭ್ಯರ್ಥಿ<br>ತರಬೇತಿ ಪಡೆದು ಸ್ಪೈಪಾನ್ ನಲ್ಲಿ ನಾಸಾ ಗಗನಯಾತ್ರಿ.<br>೨೦೧೭ರಲ್ಲಿ ನೌಕಾಪಡೆಯಿಂದ ನಿವೃತ್ತಿ. |
| ಪ್ರಶಸ್ತಿ, ಗೌರವಗಳು | : | ನೌಕಾ ಪ್ರಶಸ್ತಿ ಪದಕಗಳು (೨ ಬಾರಿ).<br>ನೌಕಾ ಮತ್ತು ಕಡಲು ಸೈನಿಕ ಸಾಧನಾ ಪದಕ.<br>ಮಾನವೀಯ ಸೇವಾ ಪದಕ ಮತ್ತು ಇತರ ಸೇವಾ ಪ್ರಶಸ್ತಿಗಳು. |

## ಸರಳ ವಾಕ್ಯಗಳಾಗಿ ಬರೆಯಿರಿ

ಕೆಳಗೆ ಕೊಡಲಾದ ಸಂಯುಕ್ತ ವಾಕ್ಯವನ್ನು ಸರಳ ವಾಕ್ಯಗಳಾಗಿ ಬರೆಯಿರಿ.

ಒಂದು ಕುಟುಂಬದ ಜವಾಬ್ದಾರಿಯನ್ನು ಹೊರುವಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನರಾದರೂ ಅವರಲ್ಲಿ ಸ್ತ್ರೀಯ ಪಾತ್ರ ಬಹಳ ಮಹತ್ವವಾದುದು.

## ಲೇಖನ ಚಿಹ್ನೆ ಬಳಸಿರಿ

ಕೆಳಗೆ ಕೊಡಲಾದ ಸಾಲುಗಳಿಗೆ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯಿರಿ.

ಮಕ್ಕಳೇ ಇಂದಿನ ಮಕ್ಕಳೇ ಮುಂದಿನ ಜನಾಂಗ ಎಂಬ ಮಾತನ್ನು ಕೇಳಿರುವಿರಲ್ಲವೇ ಆದುದರಿಂದ ಸಮಾಜ ಸೇವೆಯಲ್ಲಿ ನಿಮ್ಮ ಪಾತ್ರ ಬಹಳ ಹಿರಿದು ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಅಧ್ಯಾಪಕರು ಮಕ್ಕಳಲ್ಲಿ ಹೇಳಿದರು

## ಮಾಹಿತಿ ಸಂಗ್ರಹಿಸಿರಿ

ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವ ವ್ಯಕ್ತಿಯೊಬ್ಬರ ಸಾಧನೆಗಳನ್ನು ಪರಿಚಯಿಸುವ ಸಲುವಾಗಿ ಮಾಹಿತಿಗಳನ್ನು ಸಂಗ್ರಹಿಸಿ ಅದನ್ನು ಚಿತ್ರೀಕರಿಸಿ ಶಾಲಾ ಬ್ಲಾಗಿನಲ್ಲಿ ಪ್ರಕಟಿಸಿರಿ.

# ಪದಕೋಶ

| | | |
|---|---|---|
| ಅಧ್ವಾನ | - | ತೊಂದರೆ, ಅಸ್ತವ್ಯಸ್ತ, |
| ಅನಾಹುತ | - | ಆಕಸ್ಮಿಕ, ಕೇಡು. |
| ಅನೂಚಾನ | - | ಪರಂಪರೆಯಾಗಿ ನಡೆದು ಬಂದ ಪದ್ಧತಿ |
| ಅನ್ಯಥಾ | - | ಬೇರೆ ಬೇರೆಯಾಗಿ |
| ಅನ್ವಯಿಸು | - | ಹೊಂದಿಸಿಕೊಳ್ಳು |
| ಅಪವಾದ | - | ದೂರು, ನಿಯಮಕ್ಕೆ ಹೊರತಾದುದು, ನಿಂದೆ |
| ಅಭಯ | - | ನಿರ್ಭಯತೆ, ರಕ್ಷಣೆ |
| ಅಮೀನ | - | ನ್ಯಾಯಸ್ಥಾನದ ಆಜ್ಞೆಗಳನ್ನು ಜ್ಯಾರಿ ಮಾಡುವುದು, ಸೊತ್ತನ್ನು ಜಪ್ತಿ ಮಾಡುವುದು ಇತ್ಯಾದಿ ಅಧಿಕಾರ ಇರುವವನು |
| ಅರಸು | - | ಹುಡುಕು, ರಾಜ |
| ಅರಳು | - | ನೆಲ್ಲು, ಜೋಳ ಮುಂತಾದವುಗಳನ್ನು ಹುರಿದ ನಂತರ ವಿಕಾಸಗೊಂಡು ಆಗುವ ರೂಪ |
| ಅವಗುಣ | - | ದುರ್ಗುಣ, ದೋಷ |
| ಅವಲಂಬಿಸು | - | ಆಶ್ರಯಿಸು, ಅನುಸರಿಸು |
| ಅವಿಭಕ್ತ | - | ವಿಭಜನೆಗೊಳ್ಳದ |
| ಅವ್ಯಕ್ತ | - | ವ್ಯಕ್ತವಾಗದ |
| ಆತ್ಮವಿಶ್ವಾಸ | - | ತನಗೆ ತನ್ನಲ್ಲಿರುವ ನಂಬಿಕೆ |
| ಆಪತ್ತು | - | ತೊಂದರೆ |
| ಆರಂಬ | - | ಕೃಷಿ, ಒಕ್ಕಲುತನ |
| ಆಶಾವಾದಿ | - | ಮುಂದಕ್ಕೆ ಒಳ್ಳೆಯದು ಎಂಬ ಭರವಸೆಯನ್ನು ತಾಳುವುದು |
| ಆಸರೆ | - | ಅವಲಂಬನ, ಆಶ್ರಯ |
| ಉನ್ನತಿ | - | ಹಿರಿಮೆ, ಅಭ್ಯುದಯ |
| ಉಳಿತಾಯ | - | ಉಳಿಸುವಿಕೆ |
| ಋಣ | - | ಸಾಲ, ಹಂಗು |
| ಒತ್ತರಿಸು | - | ನೂಕು ,ದಬ್ಬು |
| ಒದರು | - | ಕೊಡಹು, ಜಾಡಿಸು |
| ಔನ್ನತ್ಯ | - | ಉನ್ನತಿ, ಅಭಿವೃದ್ಧಿ |

| | | |
|---|---|---|
| ಕಂಟಕ | - | ವಿಪತ್ತು, ಕೇಡು, ಮುಳ್ಳು |
| ಕಠೋರ | - | ಉಗ್ರ, ತೀವ್ರ, ಕಟ್ಟುನಿಟ್ಟಾದ, ನಿರ್ದಯ |
| ಕಲ್ಪಾಂತರ | - | ಬಹುಕಾಲ |
| ಕಾಯಕ | - | ಕಸಬು, ದುಡಿಮೆ |
| ಕಿರಾತ | - | ಬೇಡ |
| ಕುಂಭದ್ರೋಣ | - | ಧಾರಾಕಾರವಾಗಿ ಸುರಿಯುವ ಮಳೆ |
| ಕ್ರೌರ್ಯ | - | ಕ್ರೂರತನ, ನಿರ್ದಯತೆ |
| ಗಜ | - | ಎರಡು ಮೊಳ; ಮೂರಡಿ ಉದ್ದ |
| ಗರ್ವ | - | ಸೊಕ್ಕು, ಹೆಮ್ಮೆ |
| ಗಿರಾಕಿ | - | ಕೊಂಡುಕೊಳ್ಳುವವನು,ಗ್ರಾಹಕ |
| ಗುತ್ತಿಗೆ | - | ಗುತ್ತಿಗೆದಾರ ಭೂಮಿಯ ಒಡೆಯನಿಗೆ ಕೊಡಬೇಕಾದ ಹಣ ಅಥವಾ ಧಾನ್ಯ, ಗೇಣಿ |
| ಗೃಹಿಣಿ | - | ಮನೆಯೊಡತಿ |
| ಚಡಪಡಿಕೆ | - | ಅಸಮಾಧಾನ |
| ಛಲ | - | ಹಿಡಿದ ಪಟ್ಟು ಬಿಡದಿರುವಿಕೆ |
| ಜಲಧಿ | - | ಸಾಗರ |
| ಜವಾಬ್ದಾರಿ | - | ಹೊಣೆ |
| ತಗುಲು | - | ಸೇರು; ಕೂಡಿಕೊಳ್ಳು |
| ತಾಣ | - | ನೆಲೆ, ಸ್ಥಾನ |
| ತಾರುಣ್ಯ | - | ಪ್ರಾಯ, ಯೌವ್ವನ |
| ತಾಳ್ಮೆ | - | ಸಹನೆ, ಸೈರಣೆ |
| ತಿಗಳ | - | ತಮಿಳುನಾಡಿಗೆ ಸೇರಿದವನು |
| ತಿಟ್ಟು | - | ದಿಣ್ಣೆ; ದಿಬ್ಬ; ದಡ; ತೀರ |
| ತಿರುವಿ | - | ತಿರುಗಿಸಿ, ಹಿಂಡು, ಬಟ್ಟೆಗಳನ್ನು ಹಿಂಡುವುದು |
| ತೆಪ್ಪ | - | ಹರಿಗೋಲು, ನಾವೆ |
| ತೊಟ್ಟು | - | ಬಿಂದು |
| ತೊಲ ತೂಕ | - | ಹಿಂದಿನ ಒಂದು ರೂಪಾಯಿ ನಾಣ್ಯದ ತೂಕ |
| ತ್ರಾಣ | - | ಶಕ್ತಿ |
| ದರೆ | - | ಬರೆ, ಅಗಲು |

| | | |
|---|---|---|
| ದಾರುಣ | - | ಭಯಂಕರವಾದುದು, ಕ್ರೂರತನ |
| ದುಡುದು | - | ದುಡಿದು |
| ದುಸ್ಸಾಧ್ಯ | - | ಅಸಾಧ್ಯವಾದ |
| ದೌಡಾಯಿಸಿಕೊಂಡು | - | ವೇಗವಾಗಿ ಓಡಿಸು, ಧಾವಿಸು |
| ದೌರ್ಭಾಗ್ಯ | - | ಅದೃಷ್ಟ ಹೀನತೆ, ದುರ್ದೈವ, ಬಡತನ, ದಾರಿದ್ರ್ಯ |
| ನಡವಳಿಕೆ | - | ವರ್ತನೆ |
| ನಾಜೂಕು | - | ಕೋಮಲವಾದದ್ದು ನಯವಾದದು ,ಓರಣ, ಬೆಡಗು |
| ನಿರ್ಲಕ್ಷಿಸು | - | ಕಡೆಗಣಿಸು |
| ನಿರ್ವಹಣೆ | - | ಪೂರೈಸುವಿಕೆ ನಿಭಾಯಿಸುವಿಕೆ |
| ನಿಷ್ಠುರ | - | ಕ್ರೂರಿ, ನಿಷ್ಕರುಣಿ |
| ನೀರಡಿಕೆ | - | ಬಾಯಾರಿಕೆ |
| ಪುಡಿಗಾಸು | - | ಚಿಲ್ಲರೆ ನಾಣ್ಯ |
| ಪ್ರಣಯ ಕೇಳಿ | - | ಗೆಳೆತನದ ಆಟ |
| ಪ್ರತಾಪ | - | ಶಕ್ತಿ, ಪರಾಕ್ರಮ |
| ಪ್ರಮೇಯ | - | ಸಂದರ್ಭ ,ಸನ್ನಿವೇಶ |
| ಫಲಹಾರ | - | ಕೇವಲ ಹಣ್ಣುಗಳನ್ನು ಮಾತ್ರ ಆಹಾರವಾಗಿ ತೆಗೆದುಕೊಳ್ಳುವುದು |
| ಫಾಸಿ | - | ಗಲ್ಲುಶಿಕ್ಷೆ |
| ಬಗಿ | - | ಅಗೆ, ತೋಡು |
| ಬಟ್ಟವಾಗಿ | - | ವಿಶಾಲವಾಗಿ, ವಿಸ್ತಾರವಾಗಿ, ವೃತ್ತವಾಗಿ. |
| ಬತ್ತು | - | ಆರು, ಬರಿದಾಗು ಶೂನ್ಯವಾಗು |
| ಬದ್ಧ ಜೀವಿ | - | ಯಾವುದೋ ಒಂದು ವಿಷಯಕ್ಕೆ ನಿಷ್ಠರಾಗಿರುವುದು |
| ಬಹಿರಂಗ | - | ಹೊರಗೆ |
| ಬಾಂದು ಕಲ್ಲು | - | ಭೂಮಿಯ ಗಡಿಯನ್ನು ಗುರುತಿಸಲು ನಿಲ್ಲಿಸಿರುವ ಕಲ್ಲು; ಗಡಿಕಲ್ಲು |
| ಬಿರುದು | - | ಗೌರವ ಸೂಚಕವಾಗಿ ಕೊಡುವ ಹೆಸರು |
| ಬೆರಗಾಗು | - | ಆಶ್ಚರ್ಯ, ಚಕಿತನಾಗು |
| ಬೋರಲು | - | ತಲೆ ಕೆಳಗು, ಬುಡಮೇಲು |
| ಮಚ್ಚು | - | ಕತ್ತರಿಸಲು ಉಪಯೋಗಿಸುವ ಮರದ ಹಿಡಿಯುಳ್ಳ ಒಂದು ಸಾಧನ, ಕಡಿಗತ್ತಿ |
| ಮನೆಮಟ್ಟೆಗಾರ | - | ಮನೆ ಮತ್ತು ಭಾಗ್ಯ ಮೊದಲಾದವುಗಳಿಂದ ಕೂಡಿದ ಸಂಪತ್ತು |

| | | |
|---|---|---|
| ಮಸೆಯು | - | ತೀವ್ರಗೊಳ್ಳು, ರಭಸಗೊಳ್ಳು |
| ಮಹತ್ವ | - | ಹಿರಿಮೆ, ಶ್ರೇಷ್ಠತೆ |
| ಮಾರಿ | - | ಸಾವು, ಅಳಿವು, ಮೃತ್ಯುದೇವತೆ, ಸಾಂಕ್ರಾಮಿಕ ರೋಗ |
| ಮುಂಜಿ | - | ಉಪನಯನ |
| ಮುಣಗಿ ಹೋಗು | - | ಮುಳುಗಿ ಹೋಗು |
| ಮುನ್ನುಗ್ಗು | - | ರಭಸದಿಂದ ಮುಂದುವರಿ, ಮುಂದಕ್ಕೆ ಸಾಗು |
| ಮುಪ್ಪು | - | ವಾರ್ಧಕ್ಯ, ಮುದಿತನ |
| ಮೆರೆದಾಡು | - | ಅಹಂಕರಿಸು, ಬೀಗು |
| ಮೇಘ | - | ಮುಗಿಲು |
| ಮೋರೆ | - | ಮುಖ, ವದನ. |
| ಯಾಚಿಸು | - | ಬೇಡು |
| ವರಾತ | - | ಒತ್ತಾಯ, ಬಲಾತ್ಕಾರ |
| ವಿಧಿ | - | ಹಣೆಬರಹ |
| ವಿಪರ್ಯಾಸ | - | ಅಡ್ಡಿ, ವ್ಯತ್ಯಾಸ, ತಪ್ಪು |
| ವಿರಸ | - | ಒಡಕು, ಸಿಟ್ಟು, ಕೋಪ |
| ವಿಸ್ತರಿಸು | - | ಹಬ್ಬಿಸು |
| ವೇದನೆ | - | ಯಾತನೆ, ನೋವು, ಒತ್ತಡ |
| ವೈಭೋಗ | - | ಆಡಂಬರ |
| ವ್ಯಥೆ | - | ಬೇಗುದಿ, ಯಾತನೆ, ನೋವು, ಆತಂಕ |
| ವ್ಯವಹಾರ | - | ಕೆಲಸ, ಕಾರ್ಯಭಾರ ವೈವಾಟು, ಉದ್ಯೋಗ |
| ವ್ಯಾಜ್ಯ | - | ಜಗಳ, ಕಲಹ, ಮೊಕದ್ದಮೆ |
| ಶಿಖಾಮಣಿ | - | ಶ್ರೇಷ್ಠವ್ಯಕ್ತಿ |
| ಶೋಭೆ | - | ಹೊಳಪು, ಕಾಂತಿ |
| ಸಂಕೋಚ | - | ಕುಗ್ಗುವಿಕೆ, ಮುದುಡಿಕೊಳ್ಳುವಿಕೆ |
| ಸಂಘ ಜೀವಿ | - | ಸಮೂಹ ಜೀವಿ, ಒಟ್ಟಾಗಿ ಬಾಳುವವ |
| ಸಂಘರ್ಷ | - | ಕಾದಾಟ, ಬಡಿದಾಟ |
| ಸಂತತಿ | - | ಪೀಳಿಗೆ, ವಂಶ |
| ಸಂಭಾಳಿಸು | - | ನಿಭಾಯಿಸು, ನಿರ್ವಹಿಸು, ಸಂತೈಸು |
| ಸಚ್ಚಾರಿತ್ರ್ಯ | - | ಒಳ್ಳೆಯ ನಡತೆ |

ಸಫಲ - ಫಲದಾಯಕವಾದ, ಯಶಸ್ವಿಯಾದ

ಸಮಜಾಯಿಸಿ - ಸಮಾಧಾನಪಡಿಸು, ಸಾಂತ್ವನಗೊಳಿಸು

ಸಮನ್ವಯ - ಹೊಂದಿಕೆ, ಹೊಂದಾಣಿಕೆ

ಸಮರ್ಪಕವಾಗಿ - ಸರಿಯಾಗಿ

ಸಮುದಾಯ - ಗುಂಪು, ಸಮೂಹ

ಸಹಗಮನ - ಜೊತೆ ಹೋಗುವುದು, ಗಂಡನ ಶವದೊಂದಿಗೆ ದಹನಗೊಳ್ಳುವುದು

ಸಹವಾಸ - ಒಡನಾಟ, ಸ್ನೇಹ

ಸಾಂತ್ವನ - ನೆಮ್ಮದಿ, ಸಮಾಧಾನ, ದುಃಖ ಉಪಶಮನ

ಸುಪ್ತ - ಅಡಗಿರುವ, ಮಲಗಿದ, ನಿದ್ರೆಹೋದ

ಸೂಡಿ - ದೀವಟಿಗೆ, ದೊಂದಿ, ಪಂಜು

ಸೆಲೆ - ತುಂಬಿ ಹರಿಯುವ ನೀರು, ಆಕಾರ

ಸೊರಗು - ಬಾಡು

ಸೋಪಾನ - ಮೆಟ್ಟಿಲು, ರಸ್ತೆ ಬದಿಯ ಎತ್ತರವಾದ ಸ್ಥಳ

ಸ್ಥಿಮಿತ - ಸ್ಥಿರ

ಸ್ಮರಿಸು - ನೆನಪಿಸು

ಸ್ಮೃತಿ - ಎಚ್ಚರ

ಸ್ವಚ್ಛಂದ - ಕಟ್ಟುಪಾಡಿಲ್ಲದಿರುವಿಕೆ, ಸ್ವೇಚ್ಛೆ

ಸ್ವಾವಲಂಬಿ - ತನಗಾಗಿ ಬೇರೆಯವರನ್ನು ಆಶ್ರಯಿಸದಿರುವವನು

ಹರವಾಗಿ - ವಿಸ್ತಾರವಾಗಿ

ಹರಿದಿನ - ಪವಿತ್ರವಾದ ದಿನ

ಹಿಂಜರಿಯು - ಹಿಂದಕ್ಕೆ ಹೋಗು

ಹುಲ್ಲು ಮೆದೆ - ಹುಲ್ಲಿನ ರಾಶಿ

ಹೊಂದಾಣಿಕೆ - ಅನ್ಯೋನ್ಯತೆ

ಹೊಡೆ - ತೆನೆಯ ಮೊದಲ ಸ್ಥಿತಿ, ಗಬ್ಬ, ಪೆಟ್ಟು ಕೊಡು

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in